24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 95 | ನವದೆಹಲಿ | ಬೆಲೆ ₹10 | ಸೆಪ್ಟೆಂಬರ್ 30. 2026 ಬುಧವಾರ

## ಜೆ.ಹೆಚ್.ಪಟೇಲ್ ಪ್ರತಿಷ್ಠಾನ (ರಿ)



## ಧೀಮಂತ ನಾಯಕ, ಮಾಜಿ ಮುಖ್ಯಮಂತ್ರಿ
## ದಿವಂಗತ ಶ್ರೀ ಹೆಚ್.ಪಟೇಲ್ ರವರ
## 96ನೇ ಜನ್ಮ ದಿನಾಚರಣೆ ಕಾರ್ಯಕ್ರಮ

### 'ಚುನಾವಣಾ ಸುಧಾರಣೆಯಿಂದ ಸಮಾಜದ ಸುಧಾರಣೆ'– ಚಿಂತನ ಮಂಥನ

**ದಿನಾಂಕ:** 01.10, 2026, ಗುರುವಾರ **ಸಮಯ:** ಬೆಳಗ್ಗೆ 11 ಗಂಟೆಗೆ **ಸ್ಥಳ:** ಕೊಂಡಜ್ಜಿ ಸಭಾಂಗಣ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅರಮನೆ ರಸ್ತೆ, ಬೆಂಗಳೂರು

ಅಧ್ಯಕ್ಷತೆ




**ಶ್ರೀ ಸಿದ್ದರಾಮಯ್ಯ**
ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಉದ್ಘಾಟನೆ



**ಶ್ರೀ.ಬಿ.ಎಸ್.ಯಡಿಯೂರಪ್ಪ**
ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು



**ಬಸವರಾಜ ಹೊರಟ್ಟಿ**
ವಿಧಾನಸಭಾ ಪರಿಷತ್ ಸದಸ್ಯರು, ಮಾಜಿ ವಿಧಾನ ಪರಿಷತ್ ಸಭಾಪತಿಗಳು

ಅಧ್ಯಕ್ಷತೆ



**ಶ್ರೀ ಎಚ್.ಡಿ.ರೇವಣ್ಣ**
ವಿಧಾನಸಭಾ ಸದಸ್ಯರು

ಉದ್ಘಾಟನೆ



**ಶ್ರೀಮತಿ ತೇಜಸ್ವಿನಿ ಅನಂತಕುಮಾರ್**
ಸಮಾಜ ಸೇವಕರು, ಶಿಕ್ಷಣ ತಜ್ಞರು, ಅದಮ್ಯ ಚೇತನ ಫೌಂಡೇಷನ್ ಸಂಸ್ಥಾಪಕರು

ಮುಖ್ಯ ಅತಿಥಿಗಳು



**ಶ್ರೀಮತಿ ಚುಕ್ಕಿ ನಂಜುಂಡಸ್ವಾಮಿ**
ಸಮಾಜ ಸೇಔಕರು ಹಾಗೂ ರೈತ ಮುಖಂಡರು

### ಸ್ವಾಗತ ಕೋರುವವರು

**ಮೋಹನ್ ಕೊಂಡಜ್ಜಿ, ಟಿ.ಜಿ.ಪಟೇಲ್, ಟಿ.ಪ್ರಭಾಕರ್, ಮಹಿಮ ಜೆ. ಪಾಟೀಲ್ ಮತ್ತು ಶ್ರೀ ಜಿ.ಹೆಚ್. ಪಟೇಲ್ ಅಭಿಮಾನಿಗಳು**

ಆತ್ಮೀಯರೇ, ದಿನಾಂಕ 01-10-2026 ರಂದು ರಾಜ್ಯ ಕಂಡ ವರ್ಚಸ್ವಿ ರಾಜಕಾರಣಿ ಹಾಗೂ ಮಾಜಿ ಮುಖ್ಯಮಂತ್ರಿ ಶ್ರೀ ಜೆ.ಹೆಚ್. ಪಟೇಲ್ ಅವರ 96ನೇ ಜನ್ಮದಿನಾಚರಣೆಯ ಅಂಗವಾಗಿ,'ಚುನಾವಣಾ ಸುಧಾರಣೆಯಿಂದ ಸಮಾಜದ ಸುಧಾರಣೆ" ಎಂಬ ಮಹತ್ವದ ಹಾಗೂ ಪ್ರಸಕ್ತ ವಿಷಯದ ಕುರಿತು ಆಯೋಜಿಸಿರುವ " ಚಿಂತನ-ಮಂಥನ " ಕಾರ್ಯಕ್ರಮದಲ್ಲಿ ತಾವೆಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕೋರುತ್ತೇನೆ.



**ಡಾ. ಪಿ.ಜಿ.ಆರ್. ಸಿಂಧ್ಯ**
ಮಾಜಿ ಸಚಿವರು

## ನಿತ್ಯ ಪಂಚಾಂಗ 30.09.2026 ಬುಧವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಗ್ರೀಷ್ಮ ಋತು, ಚಾಂದ್ರಮಾನ, ಆಷಾಢ-ಶ್ರಾವಣ ಮಾಸ

ಮಹಾಭರಣೀ ಶ್ರಾದ್ಧಮ ಮದಗುಣಕಿ ಅಜ್ಜೇಶ್ವರ ಪುಣ್ಯಾರಾಧನೆ, ರೋಣ । ಯಾವಗಲ್ ವೀರಭದ್ರೇಶ್ವರ ಮತ್ತು ಬಸವೇಶ್ವರ ರಥ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಗೊಡ್ಡು ಬೆದರಿಕೆಗೆ ಹೆದರಲ್ಲ: ಎಚ್‌ಡಿಕೆಗೆ ಮುಖ್ಯಮಂತ್ರಿ ಡಿಕೆಶಿ ತಿರುಗೇಟು

**ನವದೆಹಲಿ, ಸೆ.29:** ನಾನು ಯಾವುದೇ ಗೊಡ್ಡು ಬೆದರಿಕೆ ಅಥವಾ ಬ್ಲ್ಯಾಕ್‌ಮೇಲ್‌ಗೆ ಹೆದರುವ ಜಾಯಮಾನದವನಲ್ಲ. ನನ್ನ ಬಳಿ ಆಸ್ತಿ ಇದೆ, ಯಾಕೆ ಇರಬಾರದು ನನ್ನ ಆಸ್ತಿ ಬಗ್ಗೆ ಕೇಳಲು ಅವರೇನು ಆದಾಯ ತೆರಿಗೆ ಅಧಿಕಾರಿಯೇ ಎಂದು ಸಿಎಂ ಡಿ.ಕೆ. ಶಿವಕುಮಾರ್ ಕೇಂದ್ರ ಸಚಿವ ಹೆಚ್ಡಿ ಕುಮಾರಸ್ವಾಮಿ ಅವರಿಗೆ ಪ್ರಶ್ನಿಸಿ ತಿರುಗೇಟು ನೀಡಿದ್ದಾರೆ.

ನೈಸ್ ಹಗರಣಕ್ಕೆ ಸಂಬಂಧಿಸಿದಂತೆ ಹೆಚ್ಡಿಕೆ ಬೆಂಗಳೂರಿನಲ್ಲಿ ಮಾಧ್ಯಮಗೋಷ್ಠಿ ನಡೆಸಿ ದಾಖಲೆ ಬಿಡುಗಡೆ ಮಾಡಿದ್ದಕ್ಕೆ ದೆಹಲಿಯಲ್ಲಿ ಪ್ರತಿಕ್ರಿಯಿಸಿದ ಡಿಕೆಶಿ, ನೈಸ್ ಯೋಜನೆಗೆ ಕುಮಾರಸ್ವಾಮಿ ಅವರ ತಂದೆ ಎಚ್.ಡಿ. ದೇವೇಗೌಡರೇ ಸಹಿಹಾಕಿದ್ದು, ಸ್ವತಃ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗಲೂ ಹಲವು ಬೇನಾಮಿ ಹಗರಣಗಳು ನಡೆದಿವೆ ಎಂದು ವಾಗ್ದಾಳಿ ನಡೆಸಿದರು.



ಬಿಜೆಪಿಯಿಂದ ತೀವ್ರ ಒತ್ತಡ ಇರುವುದರಿಂದ ಕುಮಾರಸ್ವಾಮಿ ಬಹಳ ಹತಾಶರಾಗಿದ್ದಾರೆ. ಇಷ್ಟು ದಿನ ಯಾಕೆ ಸುಮ್ಮನಿದ್ದರು ನೈಸ್ ಜೊತೆಗಿನ ಇವರ ವ್ಯವಹಾರ ಕೆಟ್ಟುಹೋಗಿದ್ದಕ್ಕೆ ಈಗ ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ತಮ್ಮ ಹಾಗೂ ತಮ್ಮ ಕುಟುಂಬದ ಆಸ್ತಿ ಗಳಿಕೆಯನ್ನು ಸಮರ್ಥಿಸಿಕೊಂಡ ಸಿಎಂ, 'ನನ್ನ ಮಕ್ಕಳು ಕಾನೂನು ವ್ಯಾಪ್ತಿಯಲ್ಲೇ ಆಸ್ತಿ ಖರೀದಿ ಮಾಡಿದ್ದಾರೆ. ಅವರಿಗೆ ಸಾಮರ್ಥ್ಯವಿದ್ದರೆ ಇನ್ನೂ ಖರೀದಿ ಮಾಡುತ್ತಾರೆ. ನಾನು ಲಂಚ ಪಡೆದಿಲ್ಲ, ವ್ಯಾಪಾರ-ವ್ಯವಹಾರ ಮಾಡುವ ಶಕ್ತಿ ನನಗಿದೆ. ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಎಲ್ಲವನ್ನೂ ಅಧಿಕೃತವಾಗಿ ಘೋಷಿಸಿದ್ದೇನೆ. ನೈಸ್ ಪ್ಲಾನಿಂಗ್ ಅಥಾರಿಟಿ ವ್ಯಾಪ್ತಿಯಲ್ಲಿ ಇವರ ಹಾಗೂ ಇವರ ಕುಟುಂಬದ ಆಸ್ತಿ ಇಲ್ಲವೇ. ಊರು ಬಿಟ್ಟು ಬಂದು ಇವರು ಆಸ್ತಿ ಮಾಡಿಲ್ಲವೇ? ಇವರ ಅಣ್ಣ-ತಮ್ಮಂದಿರ ಆಸ್ತಿ ಎಲ್ಲೆಲ್ಲಿದೆ ಎಂಬುದು ನಮಗೂ ಗೊತ್ತಿದೆ' ಎಂದರು.

ಕುಮಾರಸ್ವಾಮಿ ಸಿನಿಮಾ ನಟ, ನಿರ್ಮಾಪಕ ಹಾಗೂ ನಿರ್ದೇಶಕರಾಗಿದ್ದವರು, ಸುಳ್ಳು ಹೇಳುವುದೇ ಅವರ ಮನೆ ದೇವರು ಎಂದು ಲೇವಡಿ ಮಾಡಿದ ಸಿಎಂ, ಅವರು ಹೇಳುವುದೆಲ್ಲವೂ ಕೇವಲ ಕಟ್ಟುಕಥೆ. ಈ ಹಿಂದೆ ಸ್ವಾಮೀಜಿಗಳ ಫೋನ್ ಟ್ಯಾಪ್ ಮಾಡಿಸಿದವರು ಯಾರನ್ನೂ ಬಿಟ್ಟಿಲ್ಲ, ನನ್ನನ್ನು ಬಿಡುತ್ತಾರೆಯೇ ತಮ್ಮ ತಂದೆಯನ್ನೇ ಬಿಡದ ಸಂಸ್ಕಾರ, ಸಂಸ್ಕೃತಿ ಇಲ್ಲದ ವ್ಯಕ್ತಿಯ ಆರೋಪಗಳಿಗೆ ನಾನು ಉತ್ತರ ಕೊಡುವುದಿಲ್ಲ. ನಮ್ಮ ಸರ್ಕಾರದ ಜನಪ್ರಿಯತೆ ತಡೆಯಲಾಗದೇ ಅಸೂಯೆಯಿಂದ ಇಂತಹ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.ಕೇಂದ್ರದಲ್ಲಿ ಅವರದ್ದೇ ಬಿಜೆಪಿ ಸರ್ಕಾರವಿದೆ, ನನ್ನ ವಿರುದ್ಧ ಆದಾಯ ತೆರಿಗೆ, ಜಾರಿ ನಿರ್ದೇಶನಾಲಯ, ಎಲ್ಲಾ ತನಿಖೆಗಳೂ ಆಗಿವೆ, ಇನ್ನೇನು ಮಾಡಬೇಕೋ ಮಾಡಿಕೊಳ್ಳಲಿ. ವಿಧಾನಸೌಧದ ಮುಂದೆ ನಿಂತು ಮಾಧ್ಯಮಗಳ ಎದುರು ಮಾತನಾಡುವುದಲ್ಲ, ಧೈರ್ಯವಿದ್ದರೆ ಈ ವಿಚಾರವನ್ನು ವಿಧಾನಸಭೆಗೆ ತರಲಿ, ಅಲ್ಲಿಯೇ ಚರ್ಚೆ ಮಾಡೋಣ ಎಂದು ನೇರ ಸವಾಲು ಎಸೆದರು.

# ಕಬ್ಬು ಬೆಳೆಗಾರರೇ ದೆಹಲಿಗೆ ಬನ್ನಿ ಮುಕ್ತ ಚರ್ಚೆ ನಡೆಸೋಣ

## ಕರ್ನಾಟಕದ ರೈತರಿಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆಹ್ವಾನ

**ನವದೆಹಲಿ, ಸೆ.29:** "ಕಬ್ಬು ಬೆಳೆಗಾರರೇ ಪ್ರತಿಭಟನೆ ಬೇಡ, ದೆಹಲಿಗೆ ಬನ್ನಿ ಅಧಿಕಾರಿಗಳ ಜತೆ ಕುಳಿತು ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಚರ್ಚಿಸೋಣ" ಹುಬ್ಬಳ್ಳಿಯಲ್ಲಿ ಪ್ರತಿಭಟನೆಗೆ ಇಳಿಸಿರುವ ಕರ್ನಾಟಕದ ಕಬ್ಬು ಬೆಳೆಗಾರರಿಗೆ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಈ ಕರೆ ನೀಡಿದ್ದಾರೆ. ಕರ್ನಾಟಕದ ಕಬ್ಬು ಬೆಳೆಗಾರರು ಪ್ರತಿಭಟನೆ ನಡೆಸಬೇಕಿಲ್ಲ. ದೆಹಲಿಗೆ ಬಂದರೆ ಅಧಿಕಾರಿಗಳ ಜತೆ ಮಾತುಕತೆ ನಡೆಸಿ ಸಮಸ್ಯೆಗೆ ಸ್ಪಂದಿಸುವ ಭರವಸೆ ನೀಡಿದ್ದಾರೆ. ತಮ್ಮ ಎಕ್ಸ್ ಖಾತೆಯಲ್ಲಿ ಖುದ್ದು ವಿಡಿಯೋ ಸಂದೇಶ ಹಂಚಿಕೊಂಡಿರುವ ಸಚಿವರು, ರೈತರ ಸಮಸ್ಯೆ ಪರಿಹರಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಯಾವತ್ತೂ ಬದ್ಧವಿದೆ. ಕರ್ನಾಟಕದ ರೈತರನ್ನು ಮುಕ್ತವಾಗಿ ದೆಹಲಿಗೆ ಸ್ವಾಗತಿಸುತ್ತೇನೆ. ಅತ್ಯಂತ ಗೌರವದೊಂದಿಗೆ ರೈತರನ್ನು ಬರಮಾಡಿಕೊಂಡು ಸಮಸ್ಯೆ ಪರಿಹರಿಸಲು ಮುಕ್ತ ಮಾತುಕತೆ ನಡೆಸುವುದಾಗಿ ತಿಳಿಸಿದ್ದಾರೆ.

ರೈತ ಮುಖಂಡರನ್ನು ಅಧಿಕಾರಿಗಳ ಜತೆ ಕೂರಿಸಿ ಸಮಸ್ಯೆ ಪರಿಹರಿಸಲು ಸಮಾಲೋಚನೆ ನಡೆಸಲಾಗುವುದು. ತಮ್ಮ ಸರ್ಕಾರ ರೈತರ ಪರ ನಿಲ್ಲುತ್ತದೆ. ಹಾಗಾಗಿ ರೈತರು ರಸ್ತೆಯಲ್ಲಿ ಪ್ರತಿಭಟಿಸಬೇಕಿಲ್ಲ. ಬದಲಿಗೆ ಮಾತುಕತೆಗೆ ಬರಲಿ ಎಂದು ಕರ್ನಾಟಕದ ಕಬ್ಬು ಬೆಳೆಗಾರರನ್ನು ರಾಷ್ಟ್ರ ರಾಜಧಾನಿ, ಶಕ್ತಿ ಕೇಂದ್ರ ದೆಹಲಿಗೆ ಆಹ್ವಾನಿಸಿದ್ದಾರೆ ಸಚಿವ ಜೋಶಿ.ಈ ಬಾರಿಯೂ ಬೆಲೆ ಹೆಚ್ಚಳ ಮಾಡಲಾಗುತ್ತದೆ: ?ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಪ್ರತಿ ವರ್ಷ ಎಫ್‌ಆರ್‌ಪಿಯನ್ನು ಹೆಚ್ಚಿಸುತ್ತಿದೆ. ಮೇ ತಿಂಗಳಲ್ಲಷ್ಟೇ 365ಕ್ಕೆ ಹೆಚ್ಚಿಸಿ ಕಬ್ಬು ಬೆಳೆಗಾರರಿಗೆ ನೆರವಾಗಿದೆ. ಈ ಬಾರಿಯೂ ಕಬ್ಬಿಗೆ ಸೂಕ್ತ ಬೆಲೆ ನೀಡಲಾಗುವುದು



ಎಂದು ರೈತರಿಗೆ ಸಂದೇಶ ರವಾನಿಸಿದ್ದಾರೆ. 2026ರ ಫೆಬ್ರವರಿ ತಿಂಗಳಲ್ಲಿ ಕಾರ್ಯಕ್ರಮವೊಂದಕ್ಕೆ ಹೊರಟಿದ್ದ ವಳೆ ರೈತ ಮುಖಂಡರು ತಮ್ಮನ್ನು ಭೇಟಿಯಾಗಿ ಕಬ್ಬಿನ ಎಫ್‌ಆರ್‌ಪಿ ಬೆಲೆ ಹೆಚ್ಚಳಕ್ಕೆ ಮನವಿ ಮಾಡಿದ್ದರು. ಅಂತೆಯೇ ಕೇಂದ್ರ ಸರ್ಕಾರ ಮೇ ತಿಂಗಳಲ್ಲಷ್ಟೇ 365ಕ್ಕೆ ಹೆಚ್ಚಿಸಿದೆ. ಆ ಬಳಿಕ ರೈತರು ಯಾರೂ ತನ್ನನ್ನು ಭೇಟಿ ಮಾಡಿಲ್ಲ. ಈಗ ಕೆಲವರು ಮತ್ತೆ ಈಖಿಕ ಹೆಚ್ಚಳಕ್ಕೆ ಒತ್ತಾಯಿಸಿ ಪ್ರತಿಭಟನೆಗೆ ಮುಂದಾಗಿದ್ದಾರೆ. ಆದರೆ, ಪ್ರತಿಭಟನೆ ನಡೆಸುವ ಅವಶ್ಯಕತೆಯಿಲ್ಲ. ರೈತರ ಸಮಸ್ಯೆಗೆ ಸ್ಪಂದಿಸಲು ಕೇಂದ್ರ ಸರ್ಕಾರ ಸಿದ್ಧವಿದೆ ಎಂದು ಹೇಳಿದ್ದಾರೆ. ಕಬ್ಬಿನ ಎಫ್‌ಆರ್‌ಪಿ ದರ ಹೆಚ್ಚಳ ನಿರ್ಧಾರವನ್ನು ಬೆಲೆ ನಿಗದಿ ಸಮಿತಿ ಹಾಗೂ ರಾಜ್ಯ ಸರ್ಕಾರದ ಕಬ್ಬು ಆಯುಕ್ತರ ವರದಿ ಮತ್ತು ಶಿಫಾರಸುಗಳನ್ನು ಪರಿಗಣಿಸಿಯೇ ತೆಗೆದುಕೊಳ್ಳಲಾಗುತ್ತದೆ ಎಂದೂ ಸಚಿವ ಜೋಶಿ ಸ್ಪಷ್ಟಪಡಿಸಿದ್ದಾರೆ. ರೈತರಲ್ಲಿ ಯಾವುದೇ ಅನ್ಯ ಭಾವನೆ ಬೇಡ. ಬೀದಿಯಲ್ಲಿ ಪ್ರತಿಭಟನೆ ನಡೆಸುವ ಔಚಿತ್ಯವೂ ಇಲ್ಲ. ನೇರವಾಗಿ ದೆಹಲಿಗೆ ದಾವಿಸಿದರೆ ಸಂಬಂಧಿತ ಅಧಿಕಾರಿಗಳ ಜತೆ ಚರ್ಚಿಸಿ ಸೂಕ್ತ ಬೆಲೆ ನೀಡಲು ಕ್ರಮ ಕೈಗೊಳ್ಳಲಾಗುವುದು. ಹಾಗಾಗಿ ರೈತ ಮುಖಂಡರಿಗೆ, ಹೋರಾಟಗಾರರಿಗೆ ಮುಕ್ತ ಆಹ್ವಾನ ನೀಡುತ್ತೇನೆ ಎಂದು ಪ್ರಲ್ಹಾದ ಜೋಶಿ ಕಬ್ಬು ಬೆಳೆಗಾರರನ್ನು ನೇರವಾಗಿ ದೆಹಲಿಗೆ ಆಹ್ವಾನಿಸಿದ್ದಾರೆ. ಕೇಂದ್ರ ರೈತರ ಹಿತ ಕಾಪಾಡುತ್ತದೆ: ರೈತರ ಹಿತಾಸಕ್ತಿ ಕಾಪಾಡುವುದೇ ನಮ್ಮ ಸರ್ಕಾರದ ಪ್ರಮುಖ ಆದ್ಯತೆ. ಕಬ್ಬು ಬೆಳೆಗಾರರ ಹಿತಾಸಕ್ತಿಗಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹಲವು ಪರಿಣಾಮಕಾರಿ ಬದಲಾವಣೆಗಳನ್ನು ತಂದಿದೆ. ಇದೀಗ ಕಬ್ಬು ಬೆಳೆಗಾರರಲ್ಲಿ ಉಂಟಾಗಿರುವ ಗೊಂದಲ, ಸಮಸ್ಯೆಗಳು, ಮತ್ಯಾವುದೇ ವಿಷಯ ಕುರಿತಂತೆ ಸುದೀರ್ಘವಾಗಿ ಚರ್ಚಿಸಿ ರೈತರಿಗೆ ನೆರವಾಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ನಮ್ಮ ಸರ್ಕಾರ ಸಿದ್ಧವಿದೆ ಎಂದು ಜೋಶಿ ಮನವರಿಕೆ ಮಾಡಿಕೊಟ್ಟಿದ್ದಾರೆ.

### ಹುಬ್ಬಳ್ಳಿಯಲ್ಲಿ ಕಬ್ಬು ಬೆಳೆಗಾರರ ಪ್ರತಿಭಟನೆ

ಈ ಮಧ್ಯೆ, ಡಾ.ಸ್ವಾಮಿನಾಥನ್ ಆಯೋಗದ ವರದಿ ಜಾರಿ, ಟನ್ ಕಬ್ಬಿಗೆ ಕನಿಷ್ಠ 5,500 ಬೆಂಬಲ ಬೆಲೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿದ ರಾಜ್ಯ ರೈತಸಂಘ ಹಸಿರು ಸೇನೆ ಸಂಘಟನೆಯು ಹುಬ್ಬಳ್ಳಿ ನಗರದ ನೆಹರೂ ಮೈದಾನದಲ್ಲಿ ಮಂಗಳವಾರದಿಂದ ಅನಿರ್ದಿಷ್ಟಾವಧಿ ಬೃಹತ್ ಪ್ರತಿಭಟನೆ ಆರಂಭಿಸಿದೆ. ಈ ಸಂಬಂಧ ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಅವರ ಕರೆಗೆ ಬೆಂಬಲಿಸಿ ಭಾರೀ ಸಂಖ್ಯೆಯಲ್ಲಿ ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಕೇಂದ್ರ ಸಚಿವ ಜೋಶಿ ಅವರಿಗೆ ನಮ್ಮ ಬೇಡಿಕೆಗಳನ್ನು ತಿಳಿಸೋಣ, ಅವರು ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ಗುರ್ಲಾಪುರ ಕ್ರಾಸ್‌ನಲ್ಲಿ ಮತ್ತೆ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಗುರೂಜಿ ಎಚ್ಚರಿಕೆ ನೀಡಿದರು.

# ಸಾಲದ ಬಾಕಿಗೆ ಗೃಹಲಕ್ಷ್ಮಿ ಹಣ ಕಡಿತ ಬೇಡ

ಬೆಂಗಳೂರು, ಸೆ.29: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆಯಡಿ ಮಹಿಳೆಯರ ಖಾತೆಗೆ ಜಮೆಯಾಗುವ ಮಾಸಿಕ 2,000 ರೂಪಾಯಿ ಹಣವನ್ನು ಯಾವುದೇ ಕಾರಣಕ್ಕೂ ಸಾಲದ ಕಂತು ಅಥವಾ ಬಡ್ಡಿಗೆ ಕಡಿತ ಮಾಡಿಕೊಳ್ಳದಂತೆ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಸ್ಪಷ್ಟ ನಿರ್ದೇಶನ ನೀಡಲು ಮುಖ್ಯಮಂತ್ರಿಗಳು ಆದೇಶಿಸಿದ್ದಾರೆ.

ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಸಲ್ಲಿಸಿದ ಮನವಿ ಪತ್ರಕ್ಕೆ ಸ್ಪಂದಿಸಿದ ಮುಖ್ಯಮಂತ್ರಿಗಳು, ಗೃಹಲಕ್ಷ್ಮಿ ಫಲಾನುಭವಿಗಳ ಖಾತೆಯಿಂದ ಹಣವನ್ನು ಸಾಲದ ಕಂತಿಗೆ ಕಡಿತಗೊಳಿಸದಂತೆ ಬ್ಯಾಂಕ್‌ಗಳಿಗೆ ಸ್ಪಷ್ಟವಾಗಿ ಪತ್ರ ಬರೆದು ನಿರ್ದೇಶಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್‌ಗೆ ಸೂಚನೆ ನೀಡಿದ್ದಾರೆ.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಗೃಹಲಕ್ಷ್ಮಿ ಹಣ ಕಡಿತದಿಂದ ಬಡ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅದಕ್ಕೆ ಕೈಗೊಳ್ಳಬೇಕಾದ ಕಟ್ಟುನಿಟ್ಟಿನ ಕ್ರಮಗಳ ಕುರಿತು



ವಿಸ್ತೃತವಾಗಿ ಮಾಹಿತಿ ನೀಡಿದ್ದಾರೆ:

**ಮೂಲ ಉದ್ದೇಶಕ್ಕೆ ಧಕ್ಕೆ:** ಪ್ರತಿ ತಿಂಗಳು 1 ಕೋಟಿ 24 ಲಕ್ಷದ 48 ಸಾವಿರ ಕುಟುಂಬದ ಯಜಮಾನಿಯರ ಖಾತೆಗೆ ಜಮೆಯಾಗುತ್ತಿರುವ 2,000 ಹಣವು ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ನಿತ್ಯದ ಅಗತ್ಯಗಳಿಗೆ ಆಸರೆಯಾಗಿದೆ. ಆದರೆ, ವಾಣಿಜ್ಯ ಬ್ಯಾಂಕುಗಳು, ಖಾಸಗಿ ಫೈನಾನ್ಸ್ ಕಂಪನಿಗಳು ಹಾಗೂ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಹಣ ಜಮೆಯಾದ ತಕ್ಷಣವೇ ಹಳೆಯ ಸಾಲದ ಬಾಕಿ ಅಥವಾ ಬಡ್ಡಿಯ ನೆಪವೊಡ್ಡಿ ಹಣ ಕಡಿತಗೊಳಿಸುತ್ತಿವೆ. ಇದರಿಂದ ಯೋಜನೆಯ ಮೂಲ ಉದ್ದೇಶಕ್ಕೆ ಧಕ್ಕೆ ಉಂಟಾಗುತ್ತಿದೆ. ಸಾಲದ ಕಂತಿಗೆ ಗೃಹಲಕ್ಷ್ಮಿ ಹಣವನ್ನು ಸಾಲದ ಕಂತು ಅಥವಾ ಬಡ್ಡಿಗೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂದು ಸ್ಪಷ್ಟಪಡಿಸಲಾಗಿದೆ. ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಬ್ಯಾಂಕುಗಳು ಗೃಹಲಕ್ಷ್ಮಿ ಅನುದಾನವನ್ನು ಫಲಾನುಭವಿಯ ಹಳೆಯ ಸಾಲ, ಕೃಷಿಯೇತರ ಸಾಲ ಅಥವಾ ಬಡ್ಡಿಗೆ ಜಮೆ ಮಾಡಿಕೊಳ್ಳದಂತೆ ಮತ್ತು ಮಹಿಳೆಯರು ಕುಟುಂಬ ನಿರ್ವಹಣೆಗೆ ಹಣವನ್ನು ಮುಕ್ತವಾಗಿ ಡ್ರಾ ಮಾಡಲು ಅವಕಾಶ ನೀಡುವಂತೆ ರಾಜ್ಯಮಟ್ಟದ ಬ್ಯಾಂಕರ್ಸ್ ಸಮಿತಿ ಮೂಲಕ ಕಠಿಣ ಸುತ್ತೋಲೆ ಹೊರಡಿಸಬೇಕು ಎಂದು ಮನವಿಯಲ್ಲಿ ತಿಳಿಸಲಾಗಿತ್ತು.

ಕಡಿತವಾದ ಹಣ ತಕ್ಷಣ ಮರುಪಾವತಿ: ಮಹಿಳೆಯರ ಲಿಖಿತ ಒಪ್ಪಿಗೆಯಿಲ್ಲದೆ ಈಗಾಗಲೇ ಸಾಲದ ಬಾಕಿಗೆ ಕಡಿತಗೊಳಿಸಲಾಗಿರುವ ಹಣವನ್ನು ತಕ್ಷಣವೇ ಆಯಾ

### ಬ್ಯಾಂಕ್‌ಗಳಿಗೆ ಸೂಚಿಸುವಂತೆ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಆದೇಶ ದಿನೇಶ್ ಗೂಳಿಗೌಡ ಪತ್ರಕ್ಕೆ ಸಿಎಂ ಸ್ಪಂದನೆ


ಮಹಿಳೆಯರ ಖಾತೆಗೆ ಮರುಜಮೆ ಮಾಡಿಸಲು ಬ್ಯಾಂಕುಗಳಿಗೆ ತಾಕೀತು ಮಾಡುವಂತೆ ಜಿಲ್ಲಾ ಪಂಚಾಯಿತಿಗಳ ಸಿಇಒಗಳಿಗೆ ಸೂಚನೆ ನೀಡಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ. ಹಾಗೂ ಅಕ್ರಮ ಹಣ ಕಡಿತ ಪ್ರಕರಣಗಳ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳು ನಿರಂತರ ಮೇಲುಸ್ತುವಾರಿ ವಹಿಸಬೇಕು. ಜೊತೆಗೆ, ವಿವಿಧ ಇಲಾಖೆಗಳು ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳು ನಡೆಸುವ ನಿಯಮಿತ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಈ ವಿಷಯವನ್ನು ಕಡ್ಡಾಯವಾಗಿ ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಪ್ರಮುಖವಾಗಿ ಉಲ್ಲೇಖಿಸಲಾಗಿದೆ.

# ಭಿಕ್ಷುಕರಿಗೆ ನೀಡಿದಂತೆ ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ಮನುಷ್ಯತ್ವವೇ ಇಲ್ಲದ ಕಾಂಗ್ರೆಸ್ ಸರ್ಕಾರ: ವಿಜಯೇಂದ್ರ ಕಿಡಿ

ಬೆಂಗಳೂರು, ಸೆ.29: ಮನುಷ್ಯತ್ವವೇ ಇಲ್ಲದ ರಾಜ್ಯದ ಕಾಂಗ್ರೆಸ್ ಸರ್ಕಾರ ಬರದಿಂದ ಸಂಕಷ್ಟದಲ್ಲಿರುವ ಅನ್ನದಾತರಿಗೆ ಭಿಕ್ಷುಕರಿಗೆ ನೀಡಿದಂತೆ ಕನಿಷ್ಠ ಮೊತ್ತವಾದ ಎರಡೂವರೆ ಸಾವಿರ ಪರಿಹಾರ ಘೋಷಣೆ ಮಾಡಿ ಕೈಕಟ್ಟಿ ಕೂತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಆಕ್ಷೇಪಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಸರ್ಕಾರವು ರೈತರ ಬದುಕಿನಲ್ಲಿ ಸರ್ಕಾರ ಚೆಲ್ಲಾಟವಾಡುತ್ತಿದೆ. ದಿವಾಳಿಯಾಗಿರುವ ಸರ್ಕಾರ ಹಣಕಾಸಿನ ಸ್ಥಿತಿಗತಿ ಬಗ್ಗೆ ಶ್ವೇತಪತ್ರ ಹೊರಡಿಸಲಿ ಆಗ್ರಹಿಸಿದರು. ತೀವ್ರ ಬರದಿಂದ ಕಂಗೆಟ್ಟಿರುವ ರೈತರಿಗೆ ಆತ್ಮಸ್ಥೈರ್ಯ ತುಂಬಬೇಕಾದ ಸರ್ಕಾರ, ನಿರ್ಲಕ್ಷ್ಯ ಮಾಡಿತು. ಅನ್ನದಾತರು ಇಂದು ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ ಎಂದರು.

**ಸಿಎಂ ಉಡಾಫೆಯ ಉತ್ತರ:** ಕಸ್ತೂರಿರಂಗನ್ ವರದಿ ಹಾಗೂ ಬರಗಾಲದ ಕುರಿತು ಚರ್ಚಿಸಲು ಇತ್ತೀಚೆಗೆ ಮುಖ್ಯಮಂತ್ರಿ ವಿಶೇಷ ಅಧಿವೇಶನ ಕರೆದಿದ್ದರು. ನಾಡಿನ ರೈತರ ಸಂಕಷ್ಟಕ್ಕೆ ಸಿಎಂ ಪರಿಹಾರ ನೀಡುತ್ತಾರೆ ಎಂಬ ನಿರೀಕ್ಷೆಯಲ್ಲಿದ್ದೆವು. ಹೆಕ್ಟೇರ್‌ಗೆ ಐವತ್ತು ಸಾವಿರ ಪರಿಹಾರ ನೀಡಬೇಕು ಎಂದು ಆಗ್ರಹಿಸಿದೆವು. ಮಹಾರಾಷ್ಟ್ರದ ಎನ್‌ಡಿಎ



ಸರ್ಕಾರ ಹೇಗೆ ರೈತರ ಸಾಲ ಮನ್ನಾ ಮಾಡಿತು ಎಂಬುದನ್ನು ತಿಳಿಸಿದೆವು. ರಾಜ್ಯದ ಅನ್ನದಾತರಿಗೆ ಸಿಎಂ ಸೂಕ್ತ ಪರಿಹಾರ ಕೊಡದೆ ಉಡಾಫೆ ಮಾತುಗಳನ್ನಾಡಿ ಕೇವಲ ಎರಡೂವರೆ ಸಾವಿರ ಘೋಷಣೆ ಮಾಡಿ ಕೈಚೆಲ್ಲಿ ಕೂತಿದ್ದಾರೆ. ಸರ್ಕಾರದ ಇಂತಹ ಧೋರಣೆಯನ್ನು ಬಿಜೆಪಿ ಬಲವಾಗಿ ಖಂಡಿಸುತ್ತದೆ ಎಂದು ಹೇಳಿದರು.

**ಹಣಕಾಸಿನ ಸ್ಥಿತಿಗತಿ ಶ್ವೇತಪತ್ರ ಹೊರಡಿಸಲಿ:** ಚುನಾವಣೆಗೆ ಮೊದಲು ಗ್ಯಾರಂಟಿಗಳು ಉಚಿತ ಉಚಿತ ಎಂದು ಹೇಳಿಕೊಂಡಿದ್ದರು. ಆದರೆ ಈಗ ಗ್ಯಾರಂಟಿಗಳಿಂದ ಸರ್ಕಾರ ನಡೆಸಲು ಹಣಕಾಸಿನ ತೊಂದರೆ ಎದುರಾಗಿದೆ ಎಂದು ಸ್ವತಂ ಸಿಎಂ ಮತ್ತು ಹಲವು ಸಚಿವರು ಹೇಳಿಕೊಂಡಿದ್ದಾರೆ. ಶಕ್ತಿ ಯೋಜನೆಯಿಂದ ಸಾರಿಗೆ ನಿಗಮಗಳಿಗೆ ಸಾವಿರಾರು ಕೋಟಿ ಬಾಕಿ ಇದೆ ಎಂದು ಸಚಿವರೇ ಬಾಯಿ ಬಿಟ್ಟಿದ್ದಾರೆ. ಸಿಎಂ ನೋಡಿಕೊಳ್ಳುವ ಆರ್ಥಿಕ ಇಲಾಖೆ ಪತ್ರ ಸಹ ಇತ್ತೀಚೆಗೆ ಬಹಿರಂಗವಾಗಿದೆ. ರಾಜ್ಯದ ಹಣಕಾಸಿನ ಸ್ಥಿತಿ ಸಂಪೂರ್ಣವಾಗಿ ಹದಗೆಟ್ಟಿದೆ. ಹಣಕಾಸಿನ ಸ್ಥಿತಿಗತಿ ಬಗ್ಗೆ ಸಿಎಂ ಶ್ವೇತಪತ್ರ ಹೊರಡಿಸಲಿ ಎಂದು ವಿಜೇಯೇಂದ್ರ ಆಗ್ರಹಿಸಿದರು.

**ಕಾರ್ಯಕರ್ತರ ಸಾಕಲು ತೆರಿಗೆದಾರರ ಹಣ ಬಳಕೆ.** ವಿಶೇಷಚೇತನರಿಗೆ, ವೃದ್ಧರಿಗೆ ಮಾಸಾಶನ ಕೊಡಲು ಈ ಸರ್ಕಾರಕ್ಕೆ ಆಗ್ತ ಇಲ್ಲ. ಬಡವರಿಗೆ ಮನೆ ಕೊಟ್ಟಿಲ್ಲ. ಗಂಗಾ ಕಲ್ಯಾಣ ಯೋಜನೆ ನೀಡಿಲ್ಲ. ಆ ಮಟ್ಟಿಗೆ ಆರ್ಥಿಕ ಸ್ಥಿತಿ ಬಂದು ತಲುಪಿದೆ.

ಆದರೆ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಿಗೆ ಕೋಟ್ಯಂತರ ಹಣ ವೆಚ್ಚ ಮಾಡಲಾಗುತ್ತಿದೆ. ಅವರ ಕಚೇರಿ, ಸಾರಿಗೆಗೆ ಸಹ ಹಣ ವ್ಯಯಿಸಲಾಗುತ್ತಿದೆ. ತೆರಿಗೆದಾರರ ಹಣವನ್ನು ಪಕ್ಷದ ಕಾರ್ಯಕರ್ತರನ್ನು ಸಾಕಲು ಬಳಸುತಿದ್ದಾರೆ. ಇದು ಅಕ್ಷಮ್ಯ ಅಪರಾಧ ಎಂದು ವಿಜಯೇಂದ್ರ ಆಕ್ಷೇಪಿಸಿದರು. ಭಾರತ್ ಜೋಡೊ ಸಂಘಗಳಿಗೆ ಸಹ ತೆರಿಗೆದಾರರ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಈ ಸಂಘಗಳಿಗೆ ಗ್ಯಾರಂಟಿ ಸಮಿತಿ ಅಧ್ಯಕ್ಷರು ನೀಡುವ ಕಾಂಗ್ರೆಸ್ ಕಾರ್ಯಕರ್ತರನ್ನು ಸದಸ್ಯರನ್ನಾಗಿ ಮಾಡಿ ಎಂದು ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್ ಅವರು ಜಿಲ್ಲಾಧಿಕಾರಿಗಳಿಗೆ ಮೌಖಿಕ ಆದೇಶ ನೀಡಿದ್ದಾರೆ. ಸಾರ್ವಜನಿಕರು ಸದಸ್ಯರ ಪಟ್ಟಿ ನೀಡಿದರೆ ಪರಿಗಣಿಸಬೇಡಿ ಎಂದೂ ಹೇಳಿದ್ದಾರೆ. ಚುನಾವಣೆ ಹತ್ತಿರ ಬಂದಾಗ ಕಾರ್ಯಕರ್ತರನ್ನು ಖುಷಿಪಡಿಸಲು ಜನರ ತೆರಿಗೆ ಹಣವನ್ನು ಬಳಸಲು ಮುಂದಾಗಿದ್ದಾರೆ ಎಂದು ದೂರಿದರು.

**ಅರಾಜಕತೆ ಸೃಷ್ಟಿಗೆ ಕಾಂಗ್ರೆಸ್ ಯತ್ನ...** ಸತತ ಸೋಲು ಕಾಣುತ್ತಿರುವ ರಾಹುಲ್ ಗಾಂಧಿ ಹಾಗೂ ದೇಶದ ಜನರ ವಿಶ್ವಾಸ ಗಳಿಸಲು ವಿಫಲವಾಗಿರುವ ಕಾಂಗ್ರೆಸ್ ಪಕ್ಷ ಅರಾಜಕತೆ ಸೃಷ್ಟಿ ಮಾಡಲು ಕೈ ಹಾಕಿದೆ. ಚುನಾವಣಾ ಆಯೋಗ ಮತ್ತು ಮುಖ್ಯ ಚುನಾವಣಾ ಆಯುಕ್ತ(ಸಿಇಸಿ) ವಿರುದ್ಧ ಹೋರಾಟ ಮಾಡುತ್ತಿದ್ದಾರೆ. ಮೋದಿ ಅವರ ತಾಳಕ್ಕೆ ಸಿಇಸಿ ಕುಣಿಯುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಸಿಎಂ ಮತ್ತು ಕಾಂಗ್ರೆಸ್ ಯಾಕೆ ಇಂತಹ ಹತಾಶ ಭಾವನೆ ಎಂದು ತಿಳಿಯುತ್ತಿಲ್ಲ. ಪಂಜಾಬ್, ಕೇರಳ, ತಮಿಳುನಾಡು, ಹಿಮಾಚಲ ಪ್ರದೇಶದಲ್ಲಿ ಬೇರೆ ಬೇರೆ ಪಕ್ಷಗಳು ಅಧಿಕಾರಕ್ಕೆ ಬಂದಿವೆ. ಅಲ್ಲದೆ ಕರ್ನಾಟಕ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿವೆ. ಆಗ ಇವರು ಆರೋಪ ಮಾಡುವುದಿಲ್ಲ ಎಂದು ಟೀಕಿಸಿದರು.

# ಪ್ರಗತಿ 50 ಯೋಜನೆಗೆ ಬೆಂಗಳೂರು, ಮೈಸೂರು ಆಯ್ಕೆ

**ಬೆಂಗಳೂರು. ಸೆ.29:** ದೇಶದ ಆಯ್ದ 50 ನಗರಗಳನ್ನು ಮಾದರಿ ಸ್ವಚ್ಛ ನಗರಗಳಾಗಿ ರೂಪಿಸುವ ಪ್ರಗತಿ 50 ಉಪಕ್ರಮಕ್ಕೆ ಕೇಂದ್ರ ಸರ್ಕಾರ ಚಾಲನೆ ನೀಡಿದ್ದು, ಈ ಮಹತ್ವದ ಯೋಜನೆಗೆ ಕರ್ನಾಟಕದ ಬೆಂಗಳೂರು ಮತ್ತು ಮೈಸೂರು ನಗರಗಳು ಆಯ್ಕೆಯಾಗಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಇಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್‌ಲಾಲ್ ಖಟ್ಟರ್ ಅಧ್ಯಕ್ಷತೆಯಲ್ಲಿ ನಡೆದ ಸ್ವಚ್ಛಭಾರತ ಮಿಷನ್-ನಗರ 2.0ರ ಹೊಸ ಕಾರ್ಯಕ್ರಮಗಳನ್ನು ಬಲಪಡಿಸುವ ಕುರಿತು ನಡೆದ ವೀಡಿಯೊ ಸಂವಾದ ಸಭೆಯಲ್ಲಿ ಡಾ. ಯತೀಂದ್ರ ಸಿದ್ದರಾಮಯ್ಯ ಭಾಗವಹಿಸಿದರು. ಈ ಸಂದರ್ಭದಲ್ಲಿ ಪ್ರಗತಿ 50 ಉಪಕ್ರಮಕ್ಕೆ ಚಾಲನೆ ನೀಡಿರುವುದನ್ನು ಸ್ವಾಗತಿಸಿದ ಸಚಿವರು, ರಾಜ್ಯದ ಬೆಂಗಳೂರು ಮತ್ತು ಮೈಸೂರು ನಗರಗಳು ಯೋಜನೆಗೆ ಆಯ್ಕೆಯಾಗಿರುವುದಕ್ಕೆ ಅಭಿನಂದನೆ ಸಲ್ಲಿಸಿದರು. ಇದೇ ವೇಳೆ ರಾಜ್ಯದ ನಗರಾಭಿವೃದ್ಧಿ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಯೋಜನೆಗಳು ಹಾಗೂ ಪ್ರಮುಖ ಬೇಡಿಕೆಗಳ ಕುರಿತು ಕೇಂದ್ರ ಸಚಿವರೊಂದಿಗೆ ಚರ್ಚಿಸಿದರು.ಮಾದರಿ ನಗರಗಳ ಅಭಿವೃದ್ಧಿ ಸೇರಿ ವಿವಿಧ ಪ್ರಮುಖ ನಗರಾಭಿವೃದ್ಧಿ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದ ಅನುದಾನದ ಪಾಲು ಅತ್ಯಂತ ಅಗತ್ಯವಾಗಿದ್ದು, ಬಾಕಿ ಇರುವ ಕೇಂದ್ರದ ಪಾಲಿನ ಅನುದಾನವನ್ನು ಶೀಘ್ರವಾಗಿ ಬಿಡುಗಡೆ ಮಾಡುವಂತೆ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಸಭೆಯಲ್ಲಿ ಮನವಿ ಮಾಡಿದರು.

ರಾಜ್ಯದ ನಗರಾಭಿವೃದ್ಧಿ ಯೋಜನೆಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಸೇರಿದಂತೆ ಇತರ ಅಭಿವೃದ್ಧಿ ವಿಷಯಗಳ ಕುರಿತು ಪ್ರತ್ಯೇಕವಾಗಿ ಚರ್ಚಿಸಲು ಕೇಂದ್ರ ಸಚಿವರೊಂದಿಗೆ ಭೇಟಿಗೆ ಸಮಯ ಕೋರಲಾಗಿದ್ದು, ಶೀಘ್ರದಲ್ಲೇ ಭೇಟಿಗೆ ಸಮಯ ನಿಗದಿಪಡಿಸುವುದಾಗಿ ಕೇಂದ್ರ ಸಚಿವರು ಭರವಸೆ ನೀಡಿದರು.

# ದೆಹಲಿ ಕರ್ನಾಟಕ ಸಂಘದಲ್ಲಿ ರಾಷ್ಟ್ರಸಂತ ಸಿದ್ದೇಶ್ವರ ಸ್ವಾಮೀಜಿ ಕುರಿತ ಲೇಖಕ ರಾಗಂ ವಿರಚಿತ ಯೋಗಸ್ಥ: ಭಾಗ-2 ಕೃತಿ ಬಿಡುಗಡೆ




**ನವದೆಹಲಿ, ಸೆ.29:** ರಾಷ್ಟ್ರ ಸಂತ ಶ್ರೀ ಸಿದ್ದೇಶ್ವರ ಸ್ವಾಮೀಜಿ ಕುರಿತು ರಾಗಂ ಹೆಸರಾದ ರಾಜಶೇಖರಯ್ಯ ಮಠಪತಿ ಅವರು ರಚಿಸಿರುವ ಯೋಗಸ್ಥ: ಭಾಗ-2 ಕೃತಿ ಲೋಕಾರ್ಪಣೆ ಮಾಡಲಾಯಿತು.

ಗೃಹ ಸಚಿವಾಲಯದ ಭಾರತೀಯ ಜನಗಣತಿ ಆಯುಕ್ತರ ಕಚೇರಿ ಸಹಾಯಕ ರಿಜಿಸ್ಟ್ರಾರ್ ಜನರಲ್ ಡಾ. ಬಿ.ಪಿ. ಹೇಮಾನಂದ ಅವರು ಮಾತನಾಡಿ, ಯೋಗಸ್ಥ ಕೃತಿಯಲ್ಲಿ ವಿವರಿಸಲಾಗಿರುವ ವಿಷಯಗಳು ಅಧ್ಯಯನ ಯೋಗ್ಯವಾಗಿದ್ದು, ಸಾಹಿತ್ಯಕ, ಭಾಷಿಕ ಶೈಲಿಯ ದೃಷ್ಟಿಯಿಂದಲೂ ಓದುಗರಲ್ಲಿ ಆಸಕ್ತಿಯನ್ನು ಉಂಟುಮಾಡುವಲ್ಲಿ ಬಹಳ ಚೆನ್ನಾಗಿ ನಿರೂಪಿತಗೊಂಡಿದೆ ಎಂದು ಲೇಖಕರ ಪ್ರಯತ್ನವನ್ನು ಮುಕ್ತ ಮನಸ್ಸಿನಿಂದ ಶ್ಲಾಘಿಸಿದರು. ಆಯುಷ್ ಸಚಿವಾಲಯದ ಆಯುರ್ವೇದ ಮಂಡಳಿಯ ಅಧ್ಯಕ್ಷ ಡಾ.ಅಲ್ಲಮಪ್ರಭು ಗುಡ್ಡ ಉದ್ಘಾಟಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ರೇಣುಕುಮಾರ್ ಆರ್. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಚಂದ್ರಶೇಖರ್ ಎನ್ ಪಿ., ಅಧ್ಯಕ್ಷರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ದೆಹಲಿ, ಡಾ.ಪ್ರವೀಣ್ ಕುಮಾರ್ ಎಸ್, ದೆಹಲಿ, ರಾಧಾಕೃಷ್ಣ ಪ್ರಧಾನ ಕಾರ್ಯದರ್ಶಿ, ದೆಹಲಿ ಕರ್ನಾಟಕ ಸಂಘ, ವಿಶ್ವನಾಥ್ ಬಿರಾದಾರ್, ಹಾಗೂ ಬಸವರಾಜ ಮೇಲಿನಮನಿ ಭಾಗವಹಿಸಿದ್ದರು.

ದೆಹಲಿ ಕರ್ನಾಟಕ ಸಂಘದ ಖಜಾಂಚಿ, ಆಶಾಲತಾ ಎಂ. ಕಾರ್ಯಕ್ರಮದ ನಿರೂಪಣೆ ನಡೆಸಿಕೊಟ್ಟರು. ಕಾರ್ಯಕ್ರಮದ ರೂವಾರಿ ಡಾ. ದೇವಿಕಾ ಎಸ್ ,ಲೇಖಕಿ ಪ್ರಾಧ್ಯಾಪಕಿ ಬೆಂಗಳೂರು ಇವರು ಪ್ರಾಸ್ತಾವಿಕ ನುಡಿಯನ್ನು ನೆರವೇರಿಸಿದ್ದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶಿವಪ್ಪ ಎಂ. ಅವರು ವಂದನಾರ್ಪಣೆ ನಡೆಸಿಕೊಟ್ಟರು.


# ವರ್ತಮಾನದ ಜೀವಂತಿಕೆ ಸಮಾಜಕ್ಕೆ ಅತಿಮುಖ್ಯ: ಸಚಿವ ಖಂಡ್ರೆ

**ಬೆಂಗಳೂರು, ಸೆ.29:** ಯಾವುದೇ ಸಮಾಜಕ್ಕೆ ಐತಿಹಾಸಿಕ ಶ್ರೀಮಂತಿಕೆ ಇದ್ದರಷ್ಟೇ ಸಾಲದು ಅದಕ್ಕೆ ವರ್ತಮಾನದ ಜೀವಂತಿಕೆಯೂ ಅಷ್ಟೇ ಮುಖ್ಯ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಹಾಗೂ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ ಪ್ರತಿಪಾದಿಸಿದ್ದಾರೆ.

ಬೆಂಗಳೂರಿನ ವೀರಶೈವ ಲಿಂಗಾಯತ ಮಹಾಸಭಾದಲ್ಲಿಂದು ನಡೆದ ಮಹಿಳಾ ಘಟಕದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಪೂರ್ವಿಕರು ಶ್ರೇಷ್ಠರಾಗಿದ್ದರು, ಹೀಗಾಗಿ ನಾವೂ ಶ್ರೇಷ್ಠ ಎಂದು ಕೂರದೆ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸ್ವಯಂ ಪರಿಶ್ರಮದಿಂದ ನಾವು ಮೇಲೆ ಬರಬೇಕಾಗಿದೆ ಎಂದು ಕಿವಿಮಾತು ಹೇಳಿದರು.

ಇಂದು ರಾಜ್ಯ ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಬೆಳೆಯುವಲ್ಲಿ ವೀರಶೈವ, ಲಿಂಗಾಯತ ಮಠಮಾನ್ಯಗಳ ಕೊಡುಗೆ ಅಪಾರವಾಗಿದೆ. ಅನಕ್ಷರತೆ ತಾಂಡವವಾಡುತ್ತಿದ್ದ ಕಾಲದಲ್ಲಿ, ಜಾತಿ, ಧರ್ಮ, ಪಂಥಗಳ ಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿ ಅನ್ನ, ಆಶ್ರಯ, ಅಕ್ಷರ ನೀಡಿ ವಿದ್ಯಾವಂತರನ್ನಾಗಿ ಮಾಡಿ, ಮೌಢ್ಯತೆಯನ್ನು ದೂರ ಮಾಡಿದ ಕೀರ್ತಿ ನಮ್ಮ ಮಠಗಳಿಗೆ ಸಲ್ಲುತ್ತದೆ ಎಂದರು.

ಹಾನಗಲ್ಲ ಕುಮಾರೇಶ್ವರರು 122 ವರ್ಷಗಳ ಹಿಂದೆ ಸ್ಥಾಪಿಸಿದ ಮಹಾಸಭಾ, ಎಲ್ಲ ಉಪ ಪಂಗಡಗಳನ್ನೂ ಒಗ್ಗೂಡಿಸಿ, ಸಮಾಜದ ಕ್ಷೇಮಾಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದೆ. ಮಹಿಳಾ ಘಟಕದವರು ಮಹಿಳೆಯರಲ್ಲಿ ಧರ್ಮಜಾಗೃತಿ ಮೂಡಿಸಬೇಕು. ಮಾತೆಯರು ತಮ್ಮ ಮಕ್ಕಳಿಗೆ ವಚನಗಳನ್ನು ಕಲಿಸುವ



ಮೂಲಕ ಸಂಸ್ಕಾರವಂತರನ್ನಾಗಿ ಮಾಡುವಂತೆ ಪ್ರೇರೇಪಿಸಬೇಕು ಎಂದರು.

ಬದುಕಿನ ಬಂಡಿ ಮುಂದೆ ಸಾಗಲು ಪುರುಷರು ಮತ್ತು ಮಹಿಳೆಯರು ಸರಿಸಮಾನವಾಗಿ ಹೋಗಬೇಕಾಗುತ್ತದೆ. ಮಹಿಳೆಯಿಲ್ಲದೆ ಸೃಷ್ಟಿಯೇ ಇಲ್ಲ. ನಮ್ಮ ಸಮಾಜ ಮೊದಲಿನಿಂದಲೂ ಮಹಿಳೆಗೆ ಉನ್ನತ ಸ್ಥಾನ ನೀಡಿದೆ. ಸಮಾನತೆ ನೀಡಿದೆ. 12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಮಹಿಳೆಯರಿಗೆ ಅನುಭವ ಮಂಟಪದಲ್ಲಿ ಮುಕ್ತವಾಗಿ ಚರ್ಚಿಸಲು, ತಮ್ಮ ವಿಚಾರ ಮಂಡಿಸಲು ಅವಕಾಶ ನೀಡಿದ್ದರು ಎಂದರು.

ತೊಟ್ಟಿಲು ತೂಗುವ ಕೈ ದೇಶವನ್ನು ಆಳಬಲ್ಲದು ಎಂಬುದನ್ನು ಮಹಿಳೆಯರು ಸಾಬೀತು ಮಾಡಿದ್ದಾರೆ. ವಿಜ್ಞಾನ,ತಂತ್ರಜ್ಞಾನ, ಆಡಳಿತ ಸೇರಿದಂತೆ ಎಲ್ಲ ಕ್ಷೇತ್ರದಲ್ಲೂ ಮುಂದಿದ್ದಾರೆ. ಕೆಳದಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಕಿತ್ತೂರು ರಾಣಿ ಚೆನ್ನಮ್ಮ ನಮ್ಮ ಸಮಾಜದ ಮಹಿಳೆಯರಿಗೆ ಆದರ್ಶಪ್ರಾಯರಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಮತ್ತಿತರರು ಪಾಲ್ಗೊಂಡಿದ್ದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಸೆಪ್ಟೆಂಬರ್ 30, 2026, ಬುಧವಾರ

## ಒಳಪುಟಗಳಲ್ಲಿ

ಹರ್ದೀಪ್‌ಸಿಂಗ್ ಪುರಿ, ಸ್ಮೃತಿ ಇರಾನಿ, ಹರೀಶ್ ದ್ವಿವೇದಿ ರಾಜ್ಯಸಭೆಗೆ?- ಪು.4

38,000 ಕೋಟಿ ರೂ. ಬಾಕಿ ತಕ್ಷಣವೇ ಬಿಡುಗಡೆ ಮಾಡಿ ಸಿಎಂಗೆ ರಾಜ್ಯ ಗುತ್ತಿಗೆದಾರರ ಸಂಘ ಮನವಿ- ಪು.5

ಟ್ರಂಪ್ ತಿರಸ್ಕರಿಸಿದ್ದರೂ, ಕಣಿವೆಯ ಕಣ್ಗಾವಲು ಪ್ರಸ್ತಾವನೆಗೆ ಅಮೆರಿಕ ಉತ್ತರಕ್ಕೆ ಇರಾನ್ ನಿರೀಕ್ಷೆ- ಪು.8

# ಎಸ್‌ಐಆರ್ ಸ್ಥಗಿತ, ಸಿಇಸಿ ರಾಜೀನಾಮೆಗೆ ಸಿಡಬ್ಲ್ಯುಸಿ ಒತ್ತಾಯ







**ನವದೆಹಲಿ, ಸೆ.29: ಚುನಾವಣಾ ಆಯೋಗದ ಕಾರ್ಯವೈಖರಿ ಹಾಗೂ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತು ಗಂಭೀರ ಆರೋಪಗಳನ್ನು ಮುಂದಿಟ್ಟಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮುಖ್ಯ ಚುನಾವಣಾ ಆಯುಕ್ತರ ತಕ್ಷಣದ ರಾಜೀನಾಮೆ ನೀಡಬೇಕು, ಖಐಖ ಪ್ರಕ್ರಿಯೆಯ ತಕ್ಷಣದ ಸ್ಥಗಿತಗೊಳಿಸಬೇಕು ಮತ್ತು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಹೇಳಿರುವ 13.30 ಕೋಟಿ ಹೆಸರುಗಳ ಮರುಸ್ಥಾಪಿಸಬೇಕು ಎಂದು ಆಗ್ರಹಿಸಿದೆ.**

ನವದೆಹಲಿಯ ಇಂದಿರಾ ಭವನದಲ್ಲಿ ನಡೆದ ಸಿಡಬ್ಲ್ಯುಸಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆ ಕುರಿತು ಪ್ರಶ್ನೆಗಳು ಉದ್ಭವಿಸಿವೆ ಎಂದು ಕಾಂಗ್ರೆಸ್ ನಿರ್ಣಯದಲ್ಲಿ ಹೇಳಿದೆ.

SIR ಪ್ರಕ್ರಿಯೆಯಡಿ 13 ಕೋಟಿ 30 ಲಕ್ಷ ಭಾರತೀಯರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ. ನಾಗರಿಕರೇ ತಮ್ಮ ಅರ್ಹತೆಯನ್ನು ಸಾಬೀತುಪಡಿಸುವ ಹೊಣೆಗಾರಿಕೆಯನ್ನು ಹೊರುವಂತೆ ಮಾಡುವ, ತ್ವರಿತವಾಗಿ ಮತ್ತು ಪಾರದರ್ಶಕ ಸುರಕ್ಷತಾ ಕ್ರಮಗಳಿಲ್ಲದೆ ನಡೆಯುವ ಪ್ರಕ್ರಿಯೆ ಸಂವಿಧಾನದ 14ನೇ ವಿಧಿಯಲ್ಲಿನ ಸಮಾನತೆಯ ಹಕ್ಕು ಹಾಗೂ 326ನೇ ವಿಧಿಯಲ್ಲಿನ ಸಾರ್ವತ್ರಿಕ ವಯಸ್ಕ ಮತದಾನದ ತತ್ವಕ್ಕೆ ಹೊಂದಿಕೆಯಾಗುವುದಿಲ್ಲ ಎಂದು ಅಘಅ ನಿರ್ಣಯದಲ್ಲಿ ಹೇಳಿದೆ.

### ಮತದಾರರ ಪಟ್ಟಿಯಿಂದ ಕೈಬಿಟ್ಟಿರುವ 13.30 ಕೋಟಿ ಹೆಸರುಗಳ ಮರುಸ್ಥಾಪನೆಗೆ ಆಗ್ರಹ

ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಕೂಡ ಕಾಂಗ್ರೆಸ್ ಹಲವು ಪ್ರಶ್ನೆಗಳನ್ನು ಎತ್ತಿದೆ. ಮುಖ್ಯ ಚುನಾವಣಾ ಆಯುಕ್ತರು ಇತರ ಚುನಾವಣಾ ಆಯುಕ್ತರೊಂದಿಗೆ ಸೂಕ್ತ ಸಮಾಲೋಚನೆ ನಡೆಸದೆ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದಾರೆ ಎಂಬ ವರದಿಗಳನ್ನು CWC ಉಲ್ಲೇಖಿಸಿದೆ. SIRಗೆ ಸಂಬಂಧಿಸಿದ Form–6ನಲ್ಲಿ ನಡೆದ ಬದಲಾವಣೆಗಳ ಬಗ್ಗೆ ಇಬ್ಬರು ಚುನಾವಣಾ ಆಯುಕ್ತರು 10 ತಿಂಗಳ ಅವಧಿಯಲ್ಲಿ 14 ಆಕ್ಷೇಪಣೆಗಳನ್ನು ದಾಖಲಿಸಿದ್ದರು ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಈಗಾಗಲೇ ಮತದಾರರ ಹಕ್ಕುಗಳಿಗಾಗಿ ಹಲವು ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಬಿಹಾರದ ವೋಟರ್ ಅಧಿಕಾರ ಯಾತ್ರೆ, ದೇಶಾದ್ಯಂತ ವೋಟ್ ಚೋರಿ ಅಭಿಯಾನ, EAGLE ಸಮಿತಿ ಮೂಲಕ ಚುನಾವಣಾ ಆಯೋಗದೊಂದಿಗೆ ಚರ್ಚೆ, SIR ವಿರುದ್ಧ ಕಾನೂನು ಹೋರಾಟ ಹಾಗೂ INDIA ಮೈತ್ರಿಕೂಟದ ಸಂಸತ್ ಪ್ರತಿಭಟನೆ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಂಡಿರುವುದಾಗಿ ಹೇಳಿದೆ.

ಚುನಾವಣಾ ವ್ಯವಸ್ಥೆಯ ಸ್ವಾತಂತ್ರ್ಯವನ್ನು ಮರುಸ್ಥಾಪಿಸುವವರೆಗೆ ಸಂಸತ್, ನ್ಯಾಯಾಲಯಗಳು ಹಾಗೂ ಬೀದಿಗಳಲ್ಲಿ ಹೋರಾಟ ಮುಂದುವರಿಸುವುದಾಗಿ ನಿರ್ಣಯದಲ್ಲಿ ತಿಳಿಸಲಾಗಿದೆ.

### ಸಿಡಬ್ಲ್ಯುಸಿ ನಿರ್ಣಯಗಳು

- ಮುಖ್ಯ ಚುನಾವಣಾ ಆಯುಕ್ತರು ತಕ್ಷಣ ರಾಜೀನಾಮೆ ನೀಡಬೇಕು
- ಎಸ್‌ಐಆರ್ ಪ್ರಕ್ರಿಯೆ ಕೂಡಲೇ ಸ್ಥಗಿತಗೊಳಿಸಬೇಕು
- ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎನ್ನಲಾಗಿರುವ 13.30 ಕೋಟಿ ಹೆಸರುಗಳನ್ನು ಮರುಸ್ಥಾಪಿಸಬೇಕು
- ಚುನಾವಣಾ ಆಯೋಗವನ್ನು ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿ ಮರುಸ್ಥಾಪಿಸಬೇಕು
- ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಗೆ ಕಾಂಗ್ರೆಸ್ ಆಗ್ರಹಿಸಿದೆ.

## ಆಂತರಿಕ ವಿಚಾರದಲ್ಲಿ ಮೂಗು ತೂರಿಸಬೇಡಿ ಟರ್ಕಿಗೆ ಭಾರತ ಎಚ್ಚರಿಕೆ

**ನವದೆಹಲಿ, ಸೆ.29:** ಕಾಶ್ಮೀರದ ವಿಚಾರವಾಗಿ ಹೊರಗಿನವರು ಮೂಗು ತೂರಿಸುವುದು ಬೇಡ ಎಂದು ಭಾರತ ಟರ್ಕಿ ಸರ್ಕಾರಕ್ಕೆ ಖಡಕ್ ಎಚ್ಚರಿಕೆ ನೀಡಿದೆ. ವಿಶ್ವಸಂಸ್ಥೆಯ 81ನೇ ಮಹಾಸಭೆಯಲ್ಲಿ ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ ಅವರು ಜಮ್ಮು–ಕಾಶ್ಮೀರ ವಿಚಾರ ಪ್ರಸ್ತಾಪಿಸಿದ್ದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಜಮ್ಮು–ಕಾಶ್ಮೀರವು ಭಾರತದ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೆ ಸಂಬಂಧಿಸಿದ ವಿಚಾರವಾಗಿದ್ದು, ಇದರಲ್ಲಿ ಯಾವುದೇ ಹೊರಗಿನ ಪಕ್ಷಕ್ಕೆ ಹಸ್ತಕ್ಷೇಪದ ಹಕ್ಕಿಲ್ಲ ಎಂದು ಭಾರತ ಸ್ಪಷ್ಟಪಡಿಸಿದೆ. ನ್ಯೂಯಾರ್ಕ್‌ನಲ್ಲಿ ಎರ್ಡೋಗನ್ ಅವರ ಭಾಷಣದ ಕುರಿತು ಕೇಳಲಾದ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಟರ್ಕಿ ಅಧ್ಯಕ್ಷರು ಮಾಡಿದ ಜಮ್ಮು–ಕಾಶ್ಮೀರದ ಉಲ್ಲೇಖವನ್ನು ಭಾರತ ಸಂಪೂರ್ಣವಾಗಿ ತಿರಸ್ಕರಿಸುತ್ತದೆ ಎಂದು ಹೇಳಿದರು.

## ಸೋಯಾ, ಹೆಸರುಕಾಳು ಸೂರ್ಯಕಾಂತಿಗೆ ಬೆಂಬಲ ಬೆಲೆ

**ನವದೆಹಲಿ,ಸೆ.29:** ಕರ್ನಾಟಕದ ರೈತರಿಗೆ ಕೇಂದ್ರ ಸರ್ಕಾರ ಇದೀಗ ಸಿಹಿಸುದ್ದಿ ನೀಡಿದ್ದು, ಪ್ರಸಕ್ತ ಮುಂಗಾರು ಋತುವಿನಲ್ಲಿ ಬೆಳೆದ ಮೂರು ಪ್ರಮುಖ ಬೆಳೆಗಳನ್ನು ಬೆಂಬಲ ಬೆಲೆ ಯೋಜನೆಯಲ್ಲಿ ಖರೀದಿಗೆ ಅನುಮೋದನೆ ನೀಡಿದೆ. ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರ ಮನವಿಗೆ ಸ್ಪಂದಿಸಿರುವ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್



ಅವರು ಕರ್ನಾಟಕದಲ್ಲಿ ಸೂರ್ಯಕಾಂತಿ, ಹೆಸರುಕಾಳು ಮತ್ತು ಸೋಯಾಬಿನ್ ಅನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ಅಸ್ತು ಎಂದಿದ್ದಾರೆ. ಯಾವತ್ತೂ ಕರ್ನಾಟಕದ ರೈತರ ಹಿತ ಕಾಯಲು ಬದ್ಧವಾಗಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಇದೀಗ ರಾಜ್ಯದ ಈ ಪ್ರಮುಖ ಬೆಳೆಗಾರರ ನೆರವಿಗೆ ಬಂದಿದ್ದು, ಈ ಮೂರು ಬೆಳೆಗಳನ್ನು ಬೆಂಬಲ ಬೆಲೆಯಲ್ಲಿ ಖರೀದಿಸುವ ನಿರ್ಣಯ ಪ್ರಕಟಿಸಿದೆ ಎಂದು ಸಚಿವ ಪ್ರಲ್ಹಾದ ಜೋಶಿ ಮಾಹಿತಿ ನೀಡಿದ್ದಾರೆ. ಯಾವ ಬೆಳೆ ಎಷ್ಟೆಷ್ಟು ಖರೀದಿ: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಕರ್ನಾಟಕದಿಂದ 2026–27ರ ಮುಂಗಾರು ಋತುವಿನಲ್ಲಿ 1,15,500 ಮೆಟ್ರಿಕ್ ಟನ್ ಸೋಯಾಬೀನ್, 13,413 ಮೆಟ್ರಿಕ್ ಟನ್ ಸೂರ್ಯಕಾಂತಿ ಮತ್ತು 38,250 ಮೆಟ್ರಿಕ್ ಟನ್ ಹೆಸರುಕಾಳು ಖರೀದಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಜೋಶಿ ಮನವಿಗೆ ಸ್ಪಂದನೆ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ರಾಜ್ಯದ ರೈತರ ಪರವಾಗಿ ಕೇಂದ್ರ ಕೃಷಿ ಸಚಿವರಿಗೆ ಪತ್ರ ಬರೆದು ಕನಿಷ್ಠ ಬೆಂಬಲ ಬೆಲೆಯಲ್ಲಿ ಧಾನ್ಯಗಳ ಖರೀದಿಗೆ ಮನವಿ ಮಾಡಿದ್ದರು. ಕೇಂದ್ರ ಕೃಷಿ ಸಚಿವರು ಇದಕ್ಕೆ ತ್ವರಿತ ಸ್ಪಂದನೆ ನೀಡಿದ್ದು, ಸೂರ್ಯಕಾಂತಿ, ಹೆಸರುಕಾಳು ಮತ್ತು ಸೋಯಾಬಿನ್ ಧಾನ್ಯಗಳನ್ನು ಬೆಂಬಲ ಬೆಲೆಯಲ್ಲಿ ಖರೀದಿಗೆ ಸಮ್ಮತಿ ಸೂಚಿಸಿದ್ದಾರೆ. ಕರ್ನಾಟಕದ ರೈತರ ಹಿತಾಸಕ್ತಿಗೆ ಕೇಂದ್ರ ಬದ್ಧ: ಪ್ರಧಾನಿ ನರೇಂದ್ರ ಮೋದಿ ಅವರು ಕರ್ನಾಟಕದ ರೈತರ ಹಿತಾಸಕ್ತಿ ಕಾಪಾಡುವಲ್ಲಿ ಅಗತ್ಯ ಕ್ರಮ ಕೈಗೊಳ್ಳುತ್ತಲೇ ಇದ್ದಾರೆ. ಅಂತೆಯೇ ಇದೀಗ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಗೆ ಅನುಮೋದಿಸುವ ಮೂಲಕ ರೈತರಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ ದೊರಕಿಸಿಕೊಡುವ ನಿಟ್ಟಿನಲ್ಲಿ ಹೆಜ್ಜೆಯಿರಿಸಿದ್ದಾರೆ. ಇದಕ್ಕಾಗಿ ಪ್ರಧಾನಿ ಅವರಿಗೆ ಮತ್ತು ಕೃಷಿ ಸಚಿವರಿಗೆ ರಾಜ್ಯದ ಸಮಸ್ತ ರೈತರ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದಿದ್ದಾರೆ ಸಚಿವ ಜೋಶಿ.

# ನೋಟು ರದ್ದತಿಯಿಂದ ಆರ್ಥಿಕತೆ, ಮತ ನಿಷೇಧದಿಂದ ಪ್ರಜಾಪ್ರಭುತ್ವ ನಾಶ

**ನವದೆಹಲಿ, ಸೆ.29:** ಮತದಾರರ ಹಕ್ಕುಗಳು, ಮತದಾರರ ಪಟ್ಟಿ ಮತ್ತು ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆ ಕುರಿತು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಲವು ಪ್ರಶ್ನೆಗಳನ್ನು ಎತ್ತಿದ್ದು, ಈ ಸಂಬಂಧ ಐದು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ.

ಮಂಗಳವಾರ ನಡೆದ CWC ಸಭೆಯ ಆರಂಭಿಕ ಭಾಷಣದಲ್ಲಿ ಮಾತನಾಡಿದ ಖರ್ಗೆ, ಭಾರತದ ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ರಕ್ಷಿಸುವುದು ಕಾಂಗ್ರೆಸ್‌ನ ಐತಿಹಾಸಿಕ ಜವಾಬ್ದಾರಿ ಎಂದು ಹೇಳಿದರು. ಅರ್ಹ ಪ್ರತಿಯೊಬ್ಬ ನಾಗರಿಕನ ಮತ ಸುರಕ್ಷಿತವಾಗಿರಬೇಕು ಮತ್ತು ಪ್ರತಿಯೊಂದು ಮತದ ಎಣಿಕೆಯೂ ನ್ಯಾಯಯುತವಾಗಿರಬೇಕು ಎಂದು ಅವರು ಪ್ರತಿಪಾದಿಸಿದರು.

ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕುವ ಪ್ರಕ್ರಿಯೆ ಕುರಿತು ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗದ ವಿರುದ್ಧ ಖರ್ಗೆ ಆರೋಪ ಮಾಡಿದರು. ಚುನಾವಣಾ ಆಯೋಗದ ಸ್ವಾತಂತ್ರ್ಯ ಮತ್ತು ವಿಶ್ವಾಸಾರ್ಹತೆ ಕುರಿತು ಪ್ರಶ್ನೆಗಳು ಮೂಡಿವೆ ಎಂದು ಅವರು ಹೇಳಿದರು. ಹಿಂದೆ ನೋಟು ರದ್ದತಿಯಿಂದ ಆರ್ಥಿಕತೆ ನಾಶವಾಗಿತ್ತು, ಮತ ನಿಷೇಧದಿಂದ ಪ್ರಜಾಪ್ರಭುತ್ವ ನಾಶವಾಗಲಿದೆ ಎಂದು ಬಿಜೆಪಿ ವಿರುದ್ಧ ಖರ್ಗೆ ವಾಗ್ದಾಳಿ ನಡೆಸಿದರು.

ಸಂವಿಧಾನ ಸಭೆಯ ಚರ್ಚೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಮತದಾನದ ಹಕ್ಕನ್ನು ಪ್ರಜಾಪ್ರಭುತ್ವದ ಅತ್ಯಂತ ಮೂಲಭೂತ ಅಂಶವೆಂದು ಪ್ರತಿಪಾದಿಸಿದ್ದನ್ನು ಉಲ್ಲೇಖಿಸಿದ ಖರ್ಗೆ, ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಅವಧಿಯಲ್ಲಿ ಮತದಾನದ ವಯಸ್ಸನ್ನು 21ರಿಂದ 18 ವರ್ಷಕ್ಕೆ ಇಳಿಸಿದ ವಿಚಾರವನ್ನೂ ಅವರು ಪ್ರಸ್ತಾಪಿಸಿದರು. ಯುವ ಮತದಾರರಿಗೆ ಸಂಬಂಧಿಸಿದ Form-6 ನಿಯಮಗಳಲ್ಲಿ ಬದಲಾವಣೆ ಮಾಡಲಾಗಿದೆ ಎಂದು ಆರೋಪಿಸಿದ ಅವರು, ಈ ಕ್ರಮ ಕಾನೂನುಬಾಹಿರ ಎಂದು ಹೇಳಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಹಾದೇವಪುರ, ಅಳಂದ, ಹರಿಯಾಣ ಮತ್ತು ಮಹಾರಾಷ್ಟ್ರಕ್ಕೆ ಸಂಬಂಧಿಸಿದಂತೆ ಮತದಾರರ ಅಂಕಿಅಂಶಗಳ ಆಧಾರದ ಮೇಲೆ ಪ್ರಶ್ನೆಗಳನ್ನು ಎತ್ತಿದ್ದಾರೆ ಎಂದು ಖರ್ಗೆ ಹೇಳಿದರು. ಡೂಪ್ಲಿಕೇಟ್ ಮತದಾರರು, ಅನುಮಾನಾಸ್ಪದ ವಿಳಾಸಗಳು, ಒಂದೇ ವಿಳಾಸದಲ್ಲಿ ಹೆಚ್ಚಿನ ಸಂಖ್ಯೆಯ ಮತದಾರರು ಹಾಗೂ ಫಾರಂ–6ಗೆ ಸಂಬಂಧಿಸಿದ ನಮೂದುಗಳ ಕುರಿತು ಅವರು ಪ್ರಶ್ನೆಗಳನ್ನು ಪ್ರಸ್ತಾಪಿಸಿ ಶ್ಲಾಘಿಸಿದರು.

ಮತದಾರರ ಪಟ್ಟಿಯಲ್ಲಿನ ಪ್ರಮುಖ ಬದಲಾವಣೆಗಳ ಸಂಪೂರ್ಣ ಮಾಹಿತಿಯನ್ನು ಸಾರ್ವಜನಿಕಗೊಳಿಸಬೇಕು, ಹೆಸರು ತೆಗೆದುಹಾಕಲಾದ ಮತದಾರರಿಗೆ ಮಾಹಿತಿ ನೀಡಿ ಮೇಲ್ಮನವಿ ಅವಕಾಶ ಕಲ್ಪಿಸಬೇಕು, ರಾಜಕೀಯ ಪಕ್ಷಗಳಿಗೆ ಮತದಾರರ ಪಟ್ಟಿ ಮತ್ತು ಮಾಹಿತಿಯನ್ನು ಸಮಯಕ್ಕೆ ಸರಿಯಾಗಿ ನೀಡಬೇಕು, ಗಂಭೀರ ವ್ಯತ್ಯಾಸಗಳ ಕುರಿತು ಸ್ವತಂತ್ರ ಹಾಗೂ ಸಮಯಬದ್ಧ ತನಿಖೆ ನಡೆಸುವುದು ಮತ್ತು ಚುನಾವಣಾ ಪ್ರಕ್ರಿಯೆಯ ಪ್ರಮುಖ ಮಾಹಿತಿ ಹಾಗೂ ನಿರ್ಧಾರಗಳಲ್ಲಿ ಹೆಚ್ಚಿನ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಎಂದು ಖರ್ಗೆ ಆಗ್ರಹಿಸಿದ್ದಾರೆ.

ಚುನಾವಣಾ ಆಯೋಗವು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡರಲ್ಲೂ ಸಮಾನ ವಿಶ್ವಾಸ ಮೂಡಿಸುವ ರೀತಿಯಲ್ಲಿ ಸ್ವತಂತ್ರ ಹಾಗೂ ವಿಶ್ವಾಸಾರ್ಹ ಸಂಸ್ಥೆಯಾಗಿರಬೇಕು. ಚುನಾವಣಾ ಆಯೋಗದ ಇಬ್ಬರು ಆಯುಕ್ತರು ಮುಖ್ಯ ಚುನಾವಣಾ ಆಯುಕ್ತರ ಕೆಲವು ಚಟುವಟಿಕೆಗಳನ್ನು ಮನಬಂದಂತೆ ಮತ್ತು ಅನುಚಿತವೆಂದು ಹೇಳಿರುವುದಾಗಿ ಉಲ್ಲೇಖಿಸಿದ ಅವರು, ಮುಖ್ಯ ಚುನಾವಣಾ ಆಯುಕ್ತರನ್ನು ಹುದ್ದೆಯಿಂದ ತೆಗೆದುಹಾಕಬೇಕು ಎಂದು ಆಗ್ರಹಿಸಿದರು.

ಈ ವಿಚಾರದಲ್ಲಿ ಪ್ರಧಾನಿಯವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದೂ ಅವರು ಹೇಳಿದರು. ಮುಂಬರುವ ಐದು ರಾಜ್ಯಗಳ ಚುನಾವಣೆಗಳನ್ನು ಉಲ್ಲೇಖಿಸಿದ ಖರ್ಗೆ, ಯಾವುದೇ ಅರ್ಹ ಮತದಾರನ ಹಕ್ಕು ಕಸಿದುಕೊಳ್ಳದಂತೆ ನೋಡಿಕೊಳ್ಳುವುದು ಹಾಗೂ ಚುನಾವಣಾ ಪ್ರಕ್ರಿಯೆಯ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ಕಾಪಾಡುವುದು ಅಗತ್ಯ ಎಂದು ಹೇಳಿದರು.

### ಬಿಜೆಪಿ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ



### ಜ್ಞಾನೇಶ್ ಕುಮಾರ್, ಮೋದಿ ರಾಜೀನಾಮೆಗೆ ಖರ್ಗೆ ಆಗ್ರಹ

**ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಅಕ್ರಮಗಳಾಗಿವೆ ಎಂದು ಆರೋಪಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ತಕ್ಷಣ ಹುದ್ದೆಯಿಂದ ತೆಗೆದುಹಾಕಬೇಕು ಎಂದು ಆಗ್ರಹಿಸಿದ್ದಾರೆ. ಅಲ್ಲದೆ, ಸಿಇಸಿ ಮೇಲೆ ಒತ್ತಡ ಹೇರಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೈತಿಕ ಹೊಣೆಹೊತ್ತು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.**

## ಸಿಇಸಿ ಅಧಿಕಾರದ ಕುರಿತು ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ಸಮ್ಮತಿ

**ನವದೆಹಲಿ, ಸೆ.29:** ಭಾರತದ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರ ಏಕಪಕ್ಷೀಯ ನಿರ್ಧಾರಗಳನ್ನು ಪ್ರಶ್ನಿಸಿ ಸಲ್ಲಿಸಲಾದ ಹೊಸ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಒಪ್ಪಿಗೆ ನೀಡದ್ದು, ಮುಂದಿನ ವಾರ ಕೈಗೆತ್ತಿಕೊಳ್ಳಲು ಸಮ್ಮತಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠದ ಮುಂದೆ ಹಿರಿಯ ವಕೀಲ ವಿಕಾಸ್ ಸಿಂಗ್ ಮಂಗಳವಾರ ಈ ಅರ್ಜಿಯನ್ನು ಪ್ರಸ್ತಾಪಿಸಿದರು. ಬಹುಸದಸ್ಯ ಚುನಾವಣಾ ಆಯೋಗದ ನಿರ್ಧಾರಗಳು ಸರ್ವಾನುಮತದಿಂದ ಅಥವಾ ಬಹುಮತದ ಆಧಾರದ ಮೇಲೆ ಕೈಗೊಳ್ಳಬೇಕು ಎಂಬುದು ಕಾನೂನುಬದ್ಧ ವ್ಯವಸ್ಥೆಯಲ್ಲಿದೆ ಎಂದು ಅವರು ವಾದಿಸಿದರು.

ಚುನಾವಣಾ ಆಯೋಗ ಕಾರ್ಯನಿರ್ವಹಿಸಿರುವ ರೀತಿಯನ್ನು ನೋಡಿದರೆ, ಎಸ್‌ಐಆರ್ ಕುರಿತು ಆಯೋಗವು ಸರ್ವಾನುಮತದ ನಿರ್ಧಾರ ಕೈಗೊಂಡಿತೇ ಎಂಬ ಬಗ್ಗೆ ಗಂಭೀರ ಅನುಮಾನವಿದೆ.

ಆಯೋಗವು ಸರ್ವಾನುಮತದ ನಿರ್ಧಾರ ಕೈಗೊಂಡಿಲ್ಲದಿದ್ದರೆ, ನ್ಯಾಯಾಲಯ ಕೈಗೊಂಡಿರುವ ನಿರ್ಧಾರವೂ ಆಯೋಗದ ನಿರ್ಧಾರವನ್ನು ಆಧರಿಸಿದೆ. ಹೀಗಾಗಿ ಇದು ಗಂಭೀರ ವಿಚಾರ? ಎಂದು ವಿಕಾಸ್ ಸಿಂಗ್ ನ್ಯಾಯಾಲಯಕ್ಕೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ಮುಂದಿನ ವಾರ ವಿಚಾರಣೆಗೆ ಪಟ್ಟಿ ಮಾಡುತ್ತೇವೆ ಎಂದು ಹೇಳಿದರು.

# ಕರ್ನಾಟಕ ಬರ: 3,705 ಕೋಟಿ ಕೇಂದ್ರ ನೆರವಿಗೆ ಎಚ್.ಡಿ.ಕುಮಾರಸ್ವಾಮಿ ಮನವಿ

**ನವದೆಹಲಿ, ಸೆ.29:** ಕರ್ನಾಟಕದಲ್ಲಿ ತೀವ್ರ ಬರ ಪರಿಸ್ಥಿತಿ ಉಂಟಾಗಿದ್ದು, ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ 3,705 ಕೋಟಿ ನೆರವು ನೀಡುವಂತೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದ್ದಾರೆ. ರಾಜ್ಯದಲ್ಲಿ ಬೆಳೆ ನಷ್ಟದ ಅಂದಾಜು 18,748.23 ಕೋಟಿ ರೂ. ಎಂದು ತಿಳಿಸಿದ್ದಾರೆ.



ಸೆಪ್ಟೆಂಬರ್ 24ರಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಬರೆದ ಪತ್ರದಲ್ಲಿ ಕುಮಾರಸ್ವಾಮಿ, ಸೆಪ್ಟೆಂಬರ್ 9ರವರೆಗೆ ಕರ್ನಾಟಕದಲ್ಲಿ ಶೇ.34ರಷ್ಟು ಮಳೆ ಕೊರತೆಯಾಗಿದೆ ಎಂದು ತಿಳಿಸಿದ್ದಾರೆ. ರಾಜ್ಯದ 31 ಜಿಲ್ಲೆಗಳ ಪೈಕಿ 30 ಜಿಲ್ಲೆಗಳಲ್ಲಿ ಹಾಗೂ 240 ತಾಲೂಕುಗಳ ಪೈಕಿ 182 ತಾಲೂಕುಗಳಲ್ಲಿ ಮಳೆ ಕೊರತೆ ದಾಖಲಾಗಿದೆ ಎಂದು ಅವರು ಹೇಳಿದ್ದಾರೆ.

ಕರ್ನಾಟಕ ಸರ್ಕಾರದ ಅಂದಾಜಿನ ಪ್ರಕಾರ 101 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದ್ದು, ಈ ಪೈಕಿ 89 ತಾಲೂಕುಗಳನ್ನು ತೀವ್ರ ಬರಪೀಡಿತ ಎಂದು ವರ್ಗೀಕರಿಸಲಾಗಿದೆ ಎಂದು ಕುಮಾರಸ್ವಾಮಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಬರದಿಂದ ಕೃಷಿ ಕ್ಷೇತ್ರಕ್ಕೆ ಭಾರಿ ಹಾನಿಯಾಗಿದ್ದು, 19.52 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿನ ಬೆಳೆಗಳು ಹಾನಿಗೊಳಗಾಗಿವೆ. ಬೆಳೆ ನಷ್ಟದ ಅಂದಾಜು ಮೌಲ್ಯ ?18,748.23 ಕೋಟಿ ಎಂದು ಅವರು ತಿಳಿಸಿದ್ದಾರೆ.

ಅನ್ವಯವಾಗುವ ರಾಜ್ಯ ವಿಪತ್ತು ನಿರ್ವಹಣಾ ನಿಧಿ ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ ನಿಯಮಗಳಡಿ ಕರ್ನಾಟಕ ಸರ್ಕಾರ 3,705.30 ಕೋಟಿ ನೆರವು ಕೋರಿದೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಪರಿಸ್ಥಿತಿಯ ಗಂಭೀರತೆ ಹಾಗೂ ಬರಪೀಡಿತ ಪ್ರದೇಶಗಳ ರೈತರು ಎದುರಿಸುತ್ತಿರುವ ಸಂಕಷ್ಟವನ್ನು ಗಮನಿಸಿ, ಸಾಧ್ಯವಾದಷ್ಟು ಶೀಘ್ರ ಕರ್ನಾಟಕಕ್ಕೆ ಅಂತರ–ಸಚಿವಾಲಯ ಕೇಂದ್ರ ತಂಡವನ್ನ ಕಳುಹಿಸುವಂತೆ ಮನವಿ ಮಾಡುತ್ತೇನೆ ಎಂದು ಕುಮಾರಸ್ವಾಮಿ ಪತ್ರದಲ್ಲಿ ತಿಳಿಸಿದ್ದಾರೆ.

### ಕೇಂದ್ರ ತಂಡದ ವರದಿ ಪರಿಶೀಲಿಸಿ ನೆರವು ಬಿಡುಗಡೆ: ಚೌಹಾಣ್

ಕುಮಾರಸ್ವಾಮಿ ಅವರ ಪತ್ರಕ್ಕೆ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಕೇಂದ್ರ ಮಟ್ಟದ ಮೌಲ್ಯಮಾಪನ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ ಎಂದು ತಿಳಿಸಿದ್ದಾರೆ. ಕರ್ನಾಟಕ ಸರ್ಕಾರ NDRFನಿಂದ ಆರ್ಥಿಕ ನೆರವು ಕೋರಿ ಮನವಿ ಸಲ್ಲಿಸಿದ್ದು, ಆ ಮನವಿ ಸ್ವೀಕರಿಸಿದ ತಕ್ಷಣ ಸೆಪ್ಟೆಂಬರ್ 17ರಂದು ಅಂತರ್–ಸಚಿವಾಲಯ ಕೇಂದ್ರ ತಂಡವನ್ನು ರಚಿಸಲಾಗಿದೆ ಎಂದು ಚೌಹಾಣ್ ತಿಳಿಸಿದ್ದಾರೆ.



ಕೇಂದ್ರ ತಂಡವು ಅಕ್ಟೋಬರ್ 3ರಿಂದ 7ರವರೆಗೆ ಕರ್ನಾಟಕಕ್ಕೆ ಭೇಟಿ ನೀಡಿ ಬರಪೀಡಿತ ಪ್ರದೇಶಗಳಲ್ಲಿ ಸ್ಥಳೀಯವಾಗಿ ಪರಿಶೀಲನೆ ನಡೆಸಲಿದೆ. ಬರದಿಂದ ಉಂಟಾದ ಹಾನಿಯ ಕುರಿತು ಸ್ಥಳ ಪರಿಶೀಲನೆ ನಡೆಸಿ, ಚಾಲ್ತಿಯಲ್ಲಿರುವ ನಿಯಮಗಳು ಹಾಗೂ ಮಾರ್ಗಸೂಚಿಗಳ ಅನ್ವಯ ವರದಿ ಸಲ್ಲಿಸಲಿದೆ ಎಂದು ಚೌಹಾಣ್ ಹೇಳಿದ್ದಾರೆ.

ಐದು ದಿನಗಳ ಪರಿಶೀಲನೆಯ ಬಳಿಕ ಕೇಂದ್ರ ತಂಡ ಸಲ್ಲಿಸುವ ವರದಿಯನ್ನು ನಿಗದಿತ ಪ್ರಕ್ರಿಯೆಯಡಿ ಪರಿಶೀಲಿಸಲಾಗುತ್ತದೆ. ನಂತರ NDRF ನೆರವು ಬಿಡುಗಡೆ ಕುರಿತು ಕ್ರಮ ಕೈಗೊಳ್ಳಲಾಗುತ್ತದೆ. ಕೇಂದ್ರ ತಂಡದ ವರದಿಯನ್ನು ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ನೇತೃತ್ವದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಉಪಸಮಿತಿ ಪರಿಶೀಲಿಸಲಿದೆ ಎಂದು ಚೌಹಾಣ್ ತಿಳಿಸಿದ್ದಾರೆ. ಅದರ ಬಳಿಕ NDRFನಿಂದ ನೀಡಬೇಕಾದ ನೆರವಿನ ಮೊತ್ತವನ್ನು ಕೇಂದ್ರ ಗೃಹ ಸಚಿವರ ನೇತೃತ್ವದ ಉನ್ನತ ಮಟ್ಟದ ಸಮಿತಿ ಅನುಮೋದಿಸಲಿದೆ. ತಾವು ಕೂಡ ಈ ಸಮಿತಿಯ ಸದಸ್ಯರಾಗಿರುವುದಾಗಿ ಹೇಳಿದ್ದಾರೆ.

# ವಿಧಾನಪರಿಷತ್ ಚುನಾವಣೆ ನಂತರ ಸಂಪುಟ ವಿಸ್ತರಣೆ: ಹೈಕಮಾಂಡ್ ಜತೆ ಡಿ.ಕೆ.ಶಿವಕುಮಾರ್ ಚರ್ಚೆ

**ಬೆಂಗಳೂರು, ಸೆ.29:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಜೊತೆ ರಾಜ್ಯ ಸಚಿವ ಸಂಪುಟ ವಿಸ್ತರಣೆ ಕುರಿತು ಮಹತ್ವದ ಚರ್ಚೆ ನಡೆಸಿದ್ದು, ಸಂಪುಟದಲ್ಲಿ ಖಾಲಿ ಇರುವ ಸ್ಥಾನಗಳಿಗೆ ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ಚುನಾವಣೆ ಮುಗಿದ ಬಳಿಕ ಮಂತ್ರಿಮಂಡಲ ವಿಸ್ತರಣೆ ಮಾಡುವ ಸಾಧ್ಯತೆ ಇದೆ.



ಖಾಲಿ ಇರುವ ಎರಡು ಸ್ಥಾನಗಳ ಪೈಕಿ ಒಂದನ್ನು ಪರಿಶಿಷ್ಟ ಪಂಗಡ ಹಾಗೂ ಮತ್ತೊಂದು ಸ್ಥಾನವನ್ನು ಕುರುಬ ಸಮುದಾಯಕ್ಕೆ ಮೀಸಲಿಡಲಾಗಿದೆ. ಈ ನಡುವೆ ಹಿರಿಯ ಶಾಸಕರ ಒತ್ತಡಕ್ಕೆ ಮಣಿದು ಬದಲಾವಣೆ ಮಾಡುವ ಸಾಧ್ಯತೆಗಳ ಬಗ್ಗೆ ಕೂಡ ಚರ್ಚೆಗಳಾಗಿವೆ.

ಈವರೆಗಿನ ಮಾಹಿತಿ ಪ್ರಕಾರ ಪರಿಶಿಷ್ಟ ಪಂಗಡದ ಕೋಟಾದ ಸ್ಥಾನಕ್ಕೆ ಸಂಡೂರು ಕ್ಷೇತ್ರದ ಶಾಸಕಿ ಅನ್ನಪೂರ್ಣ ತುಕಾರಾಂ ಅವರ ಹೆಸರು ಬಹುತೇಕ ಖಚಿತವಾಗಿದೆ. ಇದೇ ವೇಳೆ ಕುರುಬ ಸಮುದಾಯದಿಂದ ಹಾವೇರಿ ಜಿಲ್ಲೆಯ ಬ್ಯಾಡಗಿ ಕ್ಷೇತ್ರದ ಶಾಸಕ ಬಸವರಾಜ ಶಿವಣ್ಣನವರ್ ಅವರನ್ನು ಸಂಪುಟಕ್ಕೆ ಸೇರ್ಪಡೆಗೊಳಿಸುವ ಸಾಧ್ಯತೆ ಹೆಚ್ಚಿದೆ ಎನ್ನಲಾಗಿದೆ.

### ಅನ್ನಪೂರ್ಣ ತುಕಾರಾಂ, ಬಸವರಾಜ್ ಶಿವಣ್ಣವರ್ ಸಂಪುಟ ಸೇರ್ಪಡೆ ಸಾಧ್ಯತೆ


ಈ ನಡುವೆ ಮಾಜಿ ಸಚಿವ ಎಂ. ಕೃಷ್ಣಪ್ಪ ಅವರು ತಮಗೆ ಸಚಿವ ಸ್ಥಾನ ನೀಡಲೇಬೇಕು ಎಂದು ಪಟ್ಟು ಹಿಡಿದಿದ್ದಾರೆ. ಇಲ್ಲವಾದರೆ ತಮಗೆ ಪುತ್ರ ಹಾಗೂ ಶಾಸಕ ಪ್ರಿಯಕೃಷ್ಣ ಅವರಿಗಾದರೂ ಸಚಿವ ಸ್ಥಾನ ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಪ್ರಸ್ತುತ ಪ್ರಿಯಕೃಷ್ಣ ಅವರು ದೆಹಲಿಯಲ್ಲೇ ಉಳಿದು ಸಚಿವ ಸ್ಥಾನಕ್ಕಾಗಿ ವರಿಷ್ಠರ ಮಟ್ಟದಲ್ಲಿ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಹಿಂದೆ ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ ಅವರ ಹೆಸರು ಕೂಡ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ಪ್ರಸ್ತಾಪವಾಗಿತ್ತು. ಆದರೆ ಬಸವರಾಜ ಶಿವಣ್ಣನವರ್ ಹೆಸರನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುನ್ನೆಲೆಗೆ ತಂದಿದ್ದಾರೆ. ತಾವು ಸೂಚಿಸಿದವರ ಬದಲಿಗೆ ಬೇರೆ ಶಾಸಕರಿಗೆ ಅವಕಾಶ ನೀಡುವ ವಿಚಾರದಲ್ಲಿ ಸಿದ್ದರಾಮಯ್ಯ ಅವರು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದರು.



ಸಚಿವ ಸಂಪುಟಕ್ಕೆ ಸೇರ್ಪಡೆಯಾಗಲು 30ಕ್ಕೂ ಹೆಚ್ಚು ಶಾಸಕರು ವಿವಿಧ ಹಂತಗಳಲ್ಲಿ ಪ್ರಯತ್ನ ನಡೆಸುತ್ತಿದ್ದಾರೆ. ಕೆಲವರು ದೆಹಲಿಯಲ್ಲಿ ತಂಗಿದ್ದು, ಮುಖ್ಯಮಂತ್ರಿ ಮತ್ತು ಮಾಜಿ ಮುಖ್ಯಮಂತ್ರಿ ಬೆನ್ನು ಬಿದ್ದಿದ್ದಾರೆ.ಅಂತಿಮವಾಗಿ ಇಬ್ಬರಿಗೆ ಮಾತ್ರ ಅವಕಾಶ ದೊರೆಯಲಿದೆ. ಹೀಗಾಗಿ ಸಂಪುಟಕ್ಕೆ ಸೇರ್ಪಡೆಯಾಗುವ ಆ ಇಬ್ಬರು ಶಾಸಕರು ಯಾರು ಎಂಬುದು ಇದೀಗ ಕಾಂಗ್ರೆಸ್ ವಲಯದಲ್ಲಿ ಕುತೂಹಲ ಮೂಡಿಸಿದೆ.

### ಮಹಿಳಾ ಕೋಟಾ



**ಮಹಿಳಾ ಕೋಟಾದಡಿ ಹಲವು ಶಾಸಕರ ಹೆಸರುಗಳು ಚರ್ಚೆಯಲ್ಲಿದ್ದರೂ, ಲಕ್ಷ್ಮೀ ಹೆಬ್ಬಾಳ್ಕರ್ ಅವರ ಹೆಸರು ಮುಂಚೂಣಿಯಲ್ಲಿತ್ತು. ನಯನಾ ಮೋಟಮ್ಮ ಕೂಡ ಸಚಿವ ಸ್ಥಾನಕ್ಕಾಗಿ ಪೈಪೋಟಿ ನಡೆಸಿದ್ದರು. ಈ ನಡುವೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಿ. ನಾಗೇಂದ್ರ ಅವರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುವುದರಿಂದ ತೆರವಾಗಿರುವ ಸ್ಥಾನವನ್ನು ಅದೇ ಸಮುದಾಯಕ್ಕೆ ನೀಡಬೇಕು ಎಂಬ ಒತ್ತಾಯವೂ ಕೇಳಿಬಂದಿದೆ. ಮಹಿಳಾ ಪ್ರಾತಿನಿಧ್ಯ, ಪರಿಶಿಷ್ಟ ಪಂಗಡದ ಕೋಟಾ ಹಾಗೂ ಬಳ್ಳಾರಿ ಜಿಲ್ಲೆಗೆ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ಸಂಡೂರು ಶಾಸಕಿ ಅನ್ನಪೂರ್ಣ ತುಕಾರಾಂ ಅವರ ಹೆಸರನ್ನು ಪರಿಗಣಿಸಲಾಗುತ್ತಿದೆ ಎನ್ನಲಾಗಿದೆ. ಅನ್ನಪೂರ್ಣ ತುಕಾರಾಂ ಅವರು ಮೊದಲ ಬಾರಿಗೆ ಶಾಸಕರಾಗಿದ್ದರೂ, ಮಹಿಳಾ ಪ್ರಾತಿನಿಧ್ಯಕ್ಕೆ ಒತ್ತು ನೀಡಬೇಕು ಹಾಗೂ ಪ್ರಾದೇಶಿಕ ಮತ್ತು ಸಾಮಾಜಿಕ ಸಮತೋಲನ ಕಾಪಾಡಬೇಕು ಎಂಬ ಕಾರಣಕ್ಕೆ ಅವರ ಹೆಸರನ್ನು ಪರಿಗಣಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.**

# ಸಂಭಲ್ ಪ್ರಕರಣ: ಉತ್ತರ ಪ್ರದೇಶದ ಯೋಗಿ ಸರ್ಕಾರಕ್ಕೆ 10 ಲಕ್ಷ ರೂ. ದಂಡ

**ನವದೆಹಲಿ, ಸೆ. 29:** 2024ರ ಸಂಭಲ್ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಮುಲ್ಲಾ ಅಫ್ರೋಜ್ ವಿರುದ್ಧ ಜಾರಿಗೆಗೊಳಿಸಲಾಗಿದ್ದ ರಾಷ್ಟ್ರೀಯ ಭದ್ರತಾ ಕಾಯ್ದೆಯ (ಎನ್‌ಎಸ್‌ಎ) ತಡೆಜ್ಞಾಪಕ ಬಂಧನವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಇದೇ ವೇಳೆ ಉತ್ತರ ಪ್ರದೇಶದ ಯೋಗಿ ಆದಿತ್ಯ ನಾಥ್ ಸರ್ಕಾರವನ್ನು ತರಾಟಗೆ ತೆಗೆದುಕೊಂಡ ನ್ಯಾಯಾಲಯವು, ಸರ್ಕಾರಕ್ಕೆ 10 ಲಕ್ಷ ರೂ. ದಂಡ ವಿಧಿಸಿದೆ.

ಈ ಹಿಂದೆ, ಅಲಹಾಬಾದ್ ಹೈಕೋರ್ಟ್ ಅಫ್ರೋಜ್ ಎನ್‌ಎಸ್‌ಎ ಬಂಧನವನ್ನು ಎತ್ತಿಹಿಡಿದಿತ್ತು. ಇದನ್ನು ಪ್ರಶ್ನಿಸಿ ಅಫ್ರೋಜ್ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಅವರ ಅರ್ಜಿಯನ್ನು ನ್ಯಾಯಮೂರ್ತಿ ದೀಪಂಕರ್ ದತ್ತಾ ಮತ್ತು ನ್ಯಾಯಮೂರ್ತಿ ಶೀಲ್ ನಾಗು ಅವರನ್ನೊಳಗೊಂಡ ಪೀಠ ವಿಚಾರಣೆ ನಡೆಸಿದೆ. ದಬ್ಬಾಳಿಕೆಯ ಅಧಿಕಾರವನ್ನು ಅತ್ಯಂತ ಕಾನೂನು ಬಾಹಿರವಾಗಿ ಚಲಾಯಿಸಲಾಗಿದೆ ಎಂದು ಸರ್ಕಾರವನ್ನು ಟೀಕಿಸಿದೆ.ಪೊಲೀಸ್ ಕಸ್ಟಡಿಯಲ್ಲಿ ಪಡೆದುಕೊಂಡ ಹೇಳಿಕೆಯನ್ನು ತಡೆಜ್ಞಾಪಕ ಬಂಧನಕ್ಕೆ ಮೂಲ ಆಧಾರವಾಗಿ ಬಳಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿಲ್ಲ. ಅಂತಹ ಹೇಳಿಕೆಗಳು ನ್ಯಾಯಾಲಯದ ಕಣ್ಣಿನಲ್ಲಿ ಸಿಂಧುವಾಗುವುದಿಲ್ಲ. ಆಧಾರವೂ ಅಗುವುದಿಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿದೆ. ವಿಚಾರಣ ವೇಳೆ, ಅಫ್ರೋಜ್ ಪರ ವಾದ ಮಂಡಿಸಿದ ವಕೀಲರು, ಅಫ್ರೋಜ್ ನಿರಪರಾಧಿ, ಪೊಲೀಸರು ನಡೆಸಿದ ಗುಂಡಿನ ಚಕಮಕಿಯಿಂದಲೇ ಸಾವುಗಳು ಸಂಭವಿಸಿವೆ. ಯಾವುದೇ ಪೂರ್ವಗ್ರಹ ಪೀಡಿತ ತನಿಖೆ ಇಲ್ಲದೆ, ಕೇವಲ ಸಾಲು ಸಾಲು ಪ್ರಕರಣಗಳು ದಾಖಲಾಗಿವೆ ಎಂಬ ಒಂದೇ ಕಾರಣಕ್ಕೆ ಸರ್ಕಾರವು ಕಠಿಣ ಎನ್‌ಎಸ್‌ಎ ಕಾಯ್ದೆಯನ್ನು ಅಫ್ರೋಜ್ ಮೇಲೆ ಹೇರಿದೆ ಎಂದು ವಾದಿಸಿದ್ದರು.

ಪ್ರತಿವಾದ ಮಂಡಿಸಿದ ಸರ್ಕಾರದ ವಕೀಲರು, ಅಫ್ರೋಜ್ ಜಾಮೀನಿನ ಮೇಲೆ ಹೊರಬಂದರೆ ಮತ್ತೆ ಕೋಮು ಹಿಂಸಾಚಾರವನ್ನು ಪ್ರಚೋದಿಸುವ ಸಾಧ್ಯತೆಯಿದೆ. ಸಾರ್ವಜನಿಕ ಶಾಂತಿಗೆ ಭಂಗ ಉಂಟಾಗುತ್ತದೆ ಎಂದು ವಾದಿದ್ದರು. ಎರಡೂ ಕಡೆಯ ವಾದಗಳನ್ನು ಆಲಿಸಿದ ಸುಪ್ರೀಂ ಕೋರ್ಟ್, ಸರ್ಕಾರದ ಕ್ರಮವನ್ನು ತೀವ್ರವಾಗಿ ಖಂಡಿಸಿದೆ. ಅಲಹಾಬಾದ್ ಹೈಕೋರ್ಟ್‌ನ ಆದೇಶವನ್ನು ವಜಾಗೊಳಿಸಿ, ಅಫ್ರೋಜ್ ಅವರನ್ನು ತಕ್ಷಣವೇ ಬಿಡುಗಡೆ ಮಾಡಲು ಆದೇಶಿಸಿದೆ.

2024ರಲ್ಲಿ ಸಂಭಲ್ ನ್ಯಾಯಾಲಯವು ಸಂಭಲ್‌ನ ಶಾಹಿ ಜಾಮಿಯಾ ಮಸೀದಿಯ ಸಮೀಕ್ಷೆ ನಡೆಸಲು ಆದೇಶಿಸಿತ್ತು. ಸಮೀಕ್ಷೆ ನಡೆದ ಬಳಿಕ, ಸಂಭಲ್‌ನಲ್ಲಿ ಹಿಂಸಾಚಾರ ನಡೆದು, ನಾಲ್ವರು ಪ್ರಾಣ ಕಳೆದುಕೊಂಡಿದ್ದರು. ಈ ಹಿಂಸಾಚಾರದ ಪ್ರಮುಖ ರೂವಾರಿ ಅಫ್ರೋಜ್ ಎಂದು ಆರೋಪಿಸಿ, ಅವರನ್ನು ಬಂಧಿಸಲಾಗಿತ್ತು.


ಪ್ರಕರಣದಲ್ಲಿ ಅಫ್ರೋಜ್‌ಗೆ ಅಲಹಾಬಾದ್ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಆದರೆ, ಆತ ಹೊರಬರುವುದನ್ನು ತಡೆಯಲು ಯೋಗಿ ಸರ್ಕಾರವು 2025ರ ಅಕ್ಟೋಬರ್ 13ರಂದು ಆತನ ವಿರುದ್ಧ ಕಠಿಣ ಎನ್‌ಎಸ್‌ಎ ಕಾಯ್ದೆಯನ್ನು ಜಾರಿಗೊಳಿಸಿ ಮತ್ತೆ ಬಂಧನದಲ್ಲಿಟ್ಟಿತ್ತು. ಹೈಕೋರ್ಟ್ ಈ ಬಂಧನ ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿದ್ದರಿಂದ ಅಫ್ರೋಜ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

# ಎನ್‌ಸಿಪಿ ಮುಂಬಯಿ ಪ್ರಧಾನ ಕಾರ್ಯದರ್ಶಿ ಆಗಿ ನಿರಂಜನ್ ಎಲ್. ಪೂಜಾರಿ ಆಯ್ಕೆ




**ಮುಂಬಯಿ, ಸೆ.29:** ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ ಅಖಿಲ ಭಾರತರಾಷ್ಟ್ರೀಯ ಅಧ್ಯಕ್ಷ ಶರದ್ ಪವಾರ್ (ರಾಜ್ಯಸಭಾ ಸಂಸದ) ನೇತೃತ್ವದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮುಂಬಯಿ ಪ್ರದೇಶದ ಎನ್‌ಸಿಪಿ (ಎಸ್‌ಪಿ) ಪಕ್ಷದ ಪದಾಧಿಕಾರಿಗಳ ಆಯ್ಕೆ ನಡೆಯಿತು. ಎನ್‌ಸಿಪಿ (ಎಸ್‌ಪಿ) ಪ್ರಧಾನ ಕಾರ್ಯದರ್ಶಿಯಾಗಿ ಅಂಧೇರಿ ಪೂರ್ವ ವಿಧಾನಸಭಾ ಕ್ಷೇತ್ರದ ವೀಕ್ಷಕರಾಗಿ ಯುವನಾಯಕ ಹಾಗೂ ಉತ್ತರ–ಪಶ್ಚಿಮ ವಿಭಾಗದ ಉಪಾಧ್ಯಕ್ಷ ನಿರಂಜನ್ ಲಕ್ಷ್ಮಣ್ ಪೂಜಾರಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಮುಂಬಯಿ ಎನ್‌ಸಿಪಿ ಅಧ್ಯಕ್ಷ, ಮಾಜಿ ಶಾಸಕ ಮಿಲಿನ್ ಎ.ಕಾಂಬ್ಳೆ, ಉತ್ತಮ್‌ರಾವ್ ಮಾನೆ, ಸೋಯಾಲ್ ಸುಭೇಧರ್, ಎನ್‌ಸಿಪಿ ಹಿರಿಯ ಉಪಾಧ್ಯಕ್ಷ ಮತ್ತು ಆಡಳಿತಾಧಿಕಾರಿ ಚಿತ್ರಾಪು ಲಕ್ಷ್ಮಣ್ ಸಿ.ಪೂಜಾರಿ ಮತ್ತಿತರ ಧುರೀಣರು ಉಪಸ್ಥಿತರಿದ್ದರು.

# ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಭೇಟಿಯಾದ ಡಾ.ಕೆ.ಸಿ.ನಾರಾಯಣ ಗೌಡ ನಿಯೋಗ



**ಮುಂಬಯಿ, ಸೆ.26:** ಕರ್ನಾಟಕ ರಾಜ್ಯದ ಮಾಜಿ ಕ್ಯಾಬಿನೆಟ್ ಸಚಿವ ಡಾ। ಕೆ.ಸಿ. ನಾರಾಯಣ ಗೌಡ ಇವರು ಇಂದಿಲ್ಲಿ ಮಂಗಳವಾರ ಮುಂಬಯಿ ಮಂತ್ರಾಲಯದಲ್ಲಿ (ಮಹಾರಾಷ್ಟ್ರ ರಾಜ್ಯ ಸರಕಾರದ ಅಧೀಕೃತ ಸಚಿವಾಲಯ) ಇಲ್ಲಿ ಮಹಾರಾಷ್ಟ್ರದ ಸರ್ಕಾರದ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಇವರನ್ನು ಭೇಟಿಯಾದರು. ಮಹಾರಾಷ್ಟ್ರ ಒಕ್ಕಲಿಗರ ಸಂಘದ ಭವನಕ್ಕೆ ನಿವೇಶನ ಒದಗಿಸುವ ಕುರಿತು ಚರ್ಚೆ ನಡೆಸಿ ಇಲ್ಲಿನ ಒಕ್ಕಲಿಗರ ಸಮುದಾಯದ ಸೇವಾ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ನವಿ ಮುಂಬಯಿಯಲ್ಲಿನ ಸಿಡ್ಕೋ ಸಂಬಂಧಿತ ನಿವೇಶನ ಒದಗಿಸುವಂತೆ ಮನವಿ ಸಲ್ಲಿಸಲಾಯಿತು. ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರು, ಶೀಘ್ರದಲ್ಲೇ ನವಮುಂಬಯಿಯಲ್ಲಿ ಸಂಘಕ್ಕೆ ಸೂಕ್ತ ನಿವೇಶನ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಒಕ್ಕಲಿಗರ ಸಂಘ ಮಹಾರಾಷ್ಟ್ರ ಇದರ ನಿಕಟಪೂರ್ವ ಅಧ್ಯಕ್ಷ ಜಿತೇಂದ್ರ ಗೌಡ, ಹಾಲಿ ಗೌರವ ಪ್ರಧಾನ ಕಾರ್ಯದರ್ಶಿ ಗಂಗಾಧರ ಎನ್. ಗೌಡ ಹಾಗೂ ಬಿಜೆಪಿ ಧುರೀಣ ಮೋಹನ್ ಗೌಡ ಉಪಸ್ಥಿತರಿದ್ದರು.

# ಭಾರತ–ಮ್ಯಾನ್ಮಾರ್ ಗಡಿಯಲ್ಲಿ ಉಗ್ರರ ದಾಳಿ ಅಸ್ಸಾಂ ರೈಫಲ್ಸ್ ಯೋಧ ಹುತಾತ್ಮ, ನಾಲ್ವರಿಗೆ ಗಾಯ

**ಇಟಾನಗರ, ಸೆ.29:** ಅರುಣಾಚಲ ಪ್ರದೇಶದ ಚಾಂಗ್ಲಾಂಗ್ ಜಿಲ್ಲೆಯಲ್ಲಿರುವ ಭಾರತ–ಮ್ಯಾನ್ಮಾರ್ ಗಡಿ ಬಳಿ ಅಸ್ಸಾಂ ರೈಫಲ್ಸ್ ಸಿಬ್ಬಂದಿಯ ಗಸ್ತು ತಂಡದ ಮೇಲೆ ಶಂಕಿತ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ. ಮಂಗಳವಾರ ಬೆಳಗ್ಗೆ ನಡೆದ ದಾಳಿಯಲ್ಲಿ ಓರ್ವ ಯೋಧ ಹುತಾತ್ಮರಾಗಿದ್ದು, ನಾಲ್ವರು ಸಿಬ್ಬಂದಿ ಗಾಯಗೊಂಡಿದ್ದಾರೆ.

ಚಾಂಗ್ಲಾಂಗ್ ಜಿಲ್ಲೆಯ ನಂಪಾಂಗ್ ವೃತ್ತದ ವ್ಯಾಪ್ತಿಯ ನಂಪಾಂಗ್ ನಾಲ್ಲಾ ಸಮೀಪ ಬೆಳಗ್ಗೆ ಸುಮಾರು 6.30ಕ್ಕೆ 21ನೇ ಅಸ್ಸಾಂ ರೈಫಲ್ಸ್‌ನ ಸಿಬ್ಬಂದಿ ಗಸ್ತು ತಿರುಗುತ್ತಿದ್ದ ವೇಳೆ ಈ ದಾಳಿ ನಡೆದಿದೆ. ಈ ಪ್ರದೇಶದಲ್ಲಿ ಭಾರತ–ಮ್ಯಾನ್ಮಾರ್ ಗಡಿ ಬೇಲಿ ನಿರ್ಮಾಣ ಕಾಮಗಾರಿಯೂ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದಾಳಿಯಲ್ಲಿ 42 ವರ್ಷದ ಹವಾಲ್ದಾರ್ ಜಂಖೋಕ್ಕೈ ಕುಕಿ ಮೃತಪಟ್ಟಿದ್ದಾರೆ. ನಾಲ್ವರು ಸಿಬ್ಬಂದಿಗೆ ಗುಂಡೇಟಿನಿಂದ ಗಾಯಗಳಾಗಿದ್ದು, ಅವರನ್ನು ವೈದ್ಯಕೀಯ ಚಿಕಿತ್ಸೆಗಾಗಿ ಸ್ಥಳಾಂತರಿಸಲಾಗುತ್ತಿದೆ. ಗಾಯಾಳುಗಳ ಆರೋಗ್ಯ ಸ್ಥಿತಿಯ ಕುರಿತು ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗುತ್ತಿದೆ.

ಪ್ರಾಥಮಿಕ ಮಾಹಿತಿಯ ಪ್ರಕಾರ NSCN (K-YA) ಸಂಘಟನೆಗೆ ಸೇರಿದ ಉಗ್ರರು ದಾಳಿಯ ಹಿಂದೆ ಇರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ದಾಳಿಕೋರರ ಗುರುತು ಅಥವಾ ಸಂಘಟನೆಯ ಬಗ್ಗೆ ಅಧಿಕೃತ ದೃಢೀಕರಣ ಇನ್ನೂ ಲಭ್ಯವಾಗಿಲ್ಲ.

ದಾಳಿ ಬಳಿಕ ಭದ್ರತಾ ಪಡೆಗಳು ಪ್ರದೇಶದಲ್ಲಿ ಕಾರ್ಯಾಚರಣೆ ತೀವ್ರಗೊಳಿಸಿದ್ದು, ಗಡಿ ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಚಾಂಗ್ಲಾಂಗ್ ಪೊಲೀಸ್ ವರಿಷ್ಠಾಧಿಕಾರಿ ಕಿರ್ಲಿ ಪಾಡು ಅವರಿಗೆ ಘಟನೆಯ ಮಾಹಿತಿ ಲಭ್ಯವಾಗಿದ್ದು, ಹೆಚ್ಚಿನ ವಿವರ ಸಂಗ್ರಹಿಸಲು ಚಾಂಗ್ಲಾಂಗ್ ಪೊಲೀಸ್ ಠಾಣೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಘಟನೆ ಅರುಣಾಚಲ ಪ್ರದೇಶದ ತಿರಾಪ್, ಚಾಂಗ್ಲಾಂಗ್ ಮತ್ತು ಲಾಂಗ್ಡಿಂಗ್ ಜಿಲ್ಲೆಗಳಲ್ಲಿ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ ವಿಸ್ತರಣೆ ಜಾರಿಗೆ ಬರುವ ಎರಡು ದಿನಗಳ ಮುನ್ನ ನಡೆದಿದೆ. ಕೇಂದ್ರ ಸರ್ಕಾರವು ಈ ಪ್ರದೇಶಗಳಲ್ಲಿ ಎಎಫ್‌ಎಸ್‌ಪಿಎ ಕಾಯ್ದೆಯನ್ನು ಅಕ್ಟೋಬರ್ 1ರಿಂದ ಮತ್ತಷ್ಟು ಆರು ತಿಂಗಳ ಕಾಲ ವಿಸ್ತರಿಸಿದೆ.–

# ಎಸ್‌ಐಆರ್ ಗೋ ಬ್ಯಾಕ್ ಆಂದೋಲನ ನಡೆಯಬೇಕು: ರೇವಂತ್ ರೆಡ್ಡಿ

## ತೆಲಂಗಾಣ ರಾಜ್ಯದಲ್ಲಿ ಸುಮಾರು 47 ಲಕ್ಷ ಹೆಸರು ಮತದಾರರ ಪಟ್ಟಿಯಿಂದ ಹೊರಗುಳಿಯುವ ಆತಂಕ



**ಹೈದರಾಬಾದ್, ಸೆ. 29:** ಮತದಾರರ ಪಟ್ಟಿಯ ಮೇಲೆ ಮೋದಿ–ಶಾ ಜೋಡಿ ಮತ್ತು ಜ್ಞಾನೇಶ್ ಕುಮಾರ್ ನಡೆಸುತ್ತಿರುವ ಎಸ್‌ಐಆರ್‌ನಲ್ಲಿ ತೆಲಂಗಾಣದಲ್ಲಿ ಸುಮಾರು 47 ಲಕ್ಷ ಮತದಾರರ ಹೆಸರುಗಳು ಬಲಿಯಾಗುವ ಆತಂಕವಿದೆ. ಎಎಸ್‌ಡಿಐ ಮತ್ತು ನೋಟಿಸ್‌ಗಳ ಅಡಿಯಲ್ಲಿ ಒಂದು ಕೋಟಿಗೂ ಅಧಿಕ ಮತದಾರರನ್ನು ಅನುಮಾನಾಸ್ಪದರಾಗಿ ನೋಡಿದ್ದ ಆಯೋಗ, ವಿಚಾರಣೆಗಳು ಮತ್ತು ಪರಿಶೀಲನೆಗಳ ನಂತರವೂ 47 ಲಕ್ಷ ಮಂದಿಯನ್ನು ಮತಪಟ್ಟಿಯಿಂದ ಹೊರಗಿಸುವ ಭೀತಿ ಎದುರಾಗಿದೆ. ಈ ನಡುವೆ, ಎಸ್‌ಐಆರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ, ದೇಶಾದ್ಯಂತ ಎಸ್‌ಐಆರ್ ಗೋ ಬ್ಯಾಕ್ ಅಭಿಯಾನಕ್ಕೆ ಕರೆ ನೀಡಿದ್ದಾರೆ.

ತೆಲಂಗಾಣದಲ್ಲಿ ಎಸ್‌ಐಆರ್ ಆರಂಭವಾದಾಗ, ಒಟ್ಟು 3.38 ಕೋಟಿಗೂ ಹೆಚ್ಚು ನೋಂದಾಯಿತ ಮತದಾರರಿದ್ದರು. ಆದರೆ, ಕರಡು ಪಟ್ಟಿ ಸಿದ್ಧಪಡಿಸುವ ವೇಳೆಗೆ, ಒಟ್ಟು ಮತದಾರರ ಪೈಕಿ 73 ಲಕ್ಷ (ಸುಮಾರು 21.70%) ಮತದಾರರನ್ನು ಎಎಸ್ಡಿಡಿಐ (ಹಾಜರಿಲ್ಲದವರು, ವಿಳಾಸ ಬದಲಾಯಿಸಿದವರು, ಮೃತಪಟ್ಟವರು ಅಥವಾ ನಕಲಿ ಮತದಾರರು ಹಾಗೂ ಇತರ) ವರ್ಗದಡಿ ಗುರುತಿಸಲಾಗಿತ್ತು. ಈ ಹೆಸರುಗಳನ್ನು ಹೊರಗಿಟ್ಟು ಕರಡು ಪಟ್ಟಿಯನ್ನು ಪ್ರಕಟಿಸಲಾಗಿತ್ತು. ನಂತರ, ಎಎಸ್ಡಿಡಿಐ ಅಡಿಯಲ್ಲಿ ಹೆಸರು ಕಳೆದುಕೊಂಡಿದ್ದ ಮತದಾರರು ಸಲ್ಲಿಸಿದ್ದ ಆಕ್ಷೇಪಣೆಗಳಲ್ಲಿ ಸುಮಾರು 58 ಲಕ್ಷಕ್ಕೂ ಹೆಚ್ಚು ಅರ್ಜಿಗಳನ್ನು ಸೆಪ್ಟೆಂಬರ್ 28ರ ವೇಳೆಗೆ ಚುನಾವಣಾಧಿಕಾರಿಗಳು ವಿಚಾರಣೆ ನಡೆಸಿದ್ದಾರೆ. ಅವರಲ್ಲಿ, 45 ಲಕ್ಷಕ್ಕೂ ಅಧಿಕ ಮತದಾರರು ಅಂತಿಮ ಪಟ್ಟಿಗೆ ಸೇರ್ಪಡೆಗೊಳ್ಳಲು ಅರ್ಹರೆಂದು ಕಂಡುಕೊಂಡಿದ್ದಾರೆ.

ಆದರೆ, ಕರಡು ಪಟ್ಟಿಯಲ್ಲಿ ಹೆಸರು ಪ್ರಕಟವಾಗಿದ್ದ ಸುಮಾರು 92 ಲಕ್ಷ ಮತದಾರರಿಗೂ ಆಯೋಗ ನೋಟಿಸ್ ನೀಡಿತ್ತು. ಈ ಪೈಕಿ, 5 ಲಕ್ಷ ಮಂದಿಗೆ ಇನ್ನೂ ನೋಟಿಸ್ ವಿತರಣೆಯಾಗಿಲ್ಲ. ಎಎಸ್‌ಡಿಐ ಅಡಿಯಲ್ಲಿ ಗುರುತಿಸಲ್ಪಟ್ಟು ಆಕ್ಷೇಪಣೆ ಸಲ್ಲಿಸಿರುವ ಮತದಾರರ ಪೈಕಿ 15 ಲಕ್ಷ ಆಕ್ಷೇಪಣೆಗಳು ಮತ್ತು 92 ಲಕ್ಷ ನೋಟಿಸ್ ಪಡೆದ ಮತದಾರರ ವಿಚಾರಣೆ/ಪರಿಶೀಲನೆಗಳು ಬಾಕಿ ಇವೆ. ಅಧಿಕಾರಿಗಳು ನೀಡಿದ ನೋಟಿಸ್‌ಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸದಿದ್ದರೆ ಅಥವಾ ಅಗತ್ಯ ದಾಖಲೆಗಳ ಪರಿಶೀಲನೆ ಪೂರ್ಣಗೊಳಿಸದಿದ್ದರೆ, ಅಂತಹ ಲಕ್ಷಾಂತರ ನೈಜ ಮತದಾರರ ಹೆಸರುಗಳನ್ನು ಅಂತಿಮ ಮತದಾರರ ಪಟ್ಟಿಯಿಂದ ಸಂಪೂರ್ಣವಾಗಿ ಅಳಿಸಿಹಾಕಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ಪರಿಣಾಮ, ಇನ್ನೂ ವಿಚಾರಣೆ/ಪರಿಶೀಲನೆ ನಡೆಯಬೇಕಿರುವ 1.07 ಕೋಟಿ ಮತದಾರರಲ್ಲಿ ಸುಮಾರು 47 ಲಕ್ಷ ಮಂದಿ ಮತದಾನದ ಹಕ್ಕು ಕಳೆದುಕೊಳ್ಳಬಹುದು ಎಂದು ವಿಶ್ಲೇಷಕರು ಅಂದಾಜಿಸಿದ್ದಾರೆ. ಈ ಎಸ್‌ಐಆರ್ ಕೃತ್ಯದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಭಾರತದ ಸ್ವಾತಂತ್ರ್ಯ ಹೋರಾಟದ ಐತಿಹಾಸಿಕ ಸೈಮನ್ ಗೋ ಬ್ಯಾಕ್ ಚಳವಳಿಯಂತೆ ಎಸ್‌ಐಆರ್ ಗೋ ಬ್ಯಾಕ್ ನಡೆಸಬೇಕೆಂದು ಕರೆ ನೀಡಿದ್ದಾರೆ.

ದೇಶದ ಪ್ರಜಾಪ್ರಭುತ್ವವನ್ನು ರಕ್ಷಿಸಲು ಎಸ್‌ಐಆರ್ ಹಿಂಪಡೆಯುವವರೆಗೆ ದೇಶದ ಯುವಜನತೆ ವಿಶ್ರಮಿಸುವುದಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತವನ್ನು ವಿರೋಧಿಸುವ ನೈಜ ಮತದಾರರ ಹೆಸರುಗಳನ್ನು ಅಕ್ರಮವಾಗಿ ಪಟ್ಟಿಯಿಂದ ತೆಗೆದುಹಾಕಲು ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

## ನಕಲಿ ಹೆಸರು ತೆಗೆದುಹಾಕಲು ವಿರೋಧ ಏಕೆ? ಕಾಂಗ್ರೆಸ್‌ಗೆ ಸ್ಮೃತಿ ಇರಾನಿ ತಿರುಗೇಟು



**ನವದೆಹಲಿ, ಸೆ.29:** ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ವಿಚಾರವಾಗಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ರಾಜಕೀಯ ವಾಗ್ವಾದ ಮುಂದುವರಿದಿದೆ. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸ್ಮೃತಿ ಇರಾನಿ ಅವರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿ, ಮತದಾರರ ಪಟ್ಟಿಯಲ್ಲಿ ಒಂದೇ ವ್ಯಕ್ತಿಯ ಹೆಸರು ಎರಡು ಕಡೆ ಇದ್ದರೆ ಅಥವಾ ಮೃತಪಟ್ಟವರ ಹೆಸರು ಮುಂದುವರಿದಿದ್ದರೆ ಅಂತಹ ಹೆಸರುಗಳನ್ನು ತೆಗೆದುಹಾಕುವುದಕ್ಕೆ ಕಾಂಗ್ರೆಸ್ ವಿರೋಧಿಸುತ್ತಿರುವುದೇಕೆ ಎಂದು ಪ್ರಶ್ನಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಇರಾನಿ, ಚುನಾವಣಾ ಆಯೋಗವು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವ ಸಂಸ್ಥೆಯಾಗಿದೆ. ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಕಾಂಗ್ರೆಸ್ ನಿರಂತರವಾಗಿ ಪ್ರಶ್ನೆಗಳನ್ನು ಎತ್ತುತ್ತಿರುವುದನ್ನೂ ವಿರೋಧಿಸಿದ ಅವರು, ಚುನಾವಣಾ ಸೋಲಿನ ಕುರಿತು ಪಕ್ಷ ಆತ್ಮಾವಲೋಕನ ಮಾಡಿಕೊಳ್ಳುವ ಬದಲು ಚುನಾವಣಾ ಆಯೋಗವನ್ನು ಗುರಿ ಯಾಗಿಸಿಕೊಂಡಿದೆ ಎಂದು ಕುಟುಕಿದರು.

ಮತದಾರರ ಪಟ್ಟಿಯಲ್ಲಿ ಒಂದೇ ವ್ಯಕ್ತಿಯ ಹೆಸರು ಎರಡು ಕಡೆ ದಾಖಲಾಗಿರುವುದು ಅಥವಾ ಮೃತಪಟ್ಟ ವ್ಯಕ್ತಿಯ ಹೆಸರು ಪಟ್ಟಿಯಲ್ಲಿ ಉಳಿದಿರುವುದು ಕಂಡುಬಂದರೆ ಅಂತಹ ದಾಖಲೆಗಳನ್ನು ಪರಿಷ್ಕರಿಸುವುದು ಅಗತ್ಯ. ಮತದಾರರ ಪಟ್ಟಿಯನ್ನು ನಿಖರವಾಗಿ ಹಾಗೂ ನವೀಕರಿಸಿ ಇಡುವುದು ಚುನಾವಣಾ ಪ್ರಕ್ರಿಯೆಯ ಭಾಗವಾಗಿದೆ ಎಂದು ಪ್ರತಿಪಾದಿಸಿದರು.

ಹಿಮಾಚಲ ಪ್ರದೇಶ, ಪಂಜಾಬ್, ಕೇರಳ ಮತ್ತು ಕರ್ನಾಟಕ ಸೇರಿದಂತೆ ಬಿಜೆಪಿ ಅಧಿಕಾರದಲ್ಲಿಲ್ಲದ ರಾಜ್ಯಗಳಲ್ಲಿಯೂ ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಕಾಂಗ್ರೆಸ್‌ನ ನಿಲುವು ಏನು ಎಂದು ಇರಾನಿ ಪ್ರಶ್ನಿಸಿದರು. ಈ ರಾಜ್ಯಗಳಲ್ಲಿಯೂ ಕಾಂಗ್ರೆಸ್ ಚುನಾವಣಾ ಆಯೋಗದ ಕ್ರಮಗಳ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತದೆಯೇ ಅಥವಾ ಆಯೋಗಕ್ಕೆ ಕ್ಲೀನ್‌ಚಿಟ್ ನೀಡುತ್ತದೆಯೇ ಎಂದು ಅವರು ಕೇಳಿದರು.

# ಮೋದಿ ಸರ್ಕಾರದಲ್ಲಿ ದಲಿತ, ಆದಿವಾಸಿಗಳಿಗಿಲ್ಲ ದನಿ: ಎನ್‌ಡಿಎ ಒಳಗೆ ಸಮಸ್ಯೆ

**ನವದೆಹಲಿ, ಸೆ. 29:** ಸಂಸತ್ತಿನಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಜನಪ್ರತಿನಿಧಿಗಳ ಧ್ವನಿಯನ್ನು ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಉದ್ದೇಶಪೂರ್ವಕವಾಗಿಯೇ ಅತ್ತಿಕ್ಕುತ್ತಿದೆ ಎಂಬ ಗಂಭೀರ ಮತ್ತು ಕಠಿಣ ಆರೋಪಗಳು ರಾಜಕೀಯ ವಲಯದಲ್ಲಿ ತೀವ್ರ ಸ್ವರೂಪ ಪಡೆದುಕೊಂಡಿವೆ. ಸಂಸತ್ತಿನಲ್ಲಿ ದಲಿತ ಮತ್ತು ಆದಿವಾಸಿ ಸಮುದಾಯಗಳ ಪರವಾಗಿ ಮಾತನಾಡಲು ಅವಕಾಶ ನೀಡದೆ, ಅವರ ಬಾಯಿ ಮುಚ್ಚಿಸುವ ವ್ಯವಸ್ಥಿತ ಹುನ್ನಾರ ಆಡಳಿತ ಯಂತ್ರದೊಳಗೆ ನಡೆಯುತ್ತಿದೆ ಎಂದು ಟೀಕಾಕಾರರು ಮತ್ತು ರಾಜಕೀಯ ವಿಶ್ಲೇಷಕರು ನೇರವಾಗಿಯೇ ಬೆರಳು ಮಾಡುತ್ತಿದ್ದಾರೆ.

ಕೇಂದ್ರ ಸಚಿವ ಹಾಗೂ ಎನ್‌ಡಿಎ ಮಿತ್ರಪಕ್ಷದ ನಾಯಕ ಜಿತನ್ ರಾಮ್ ಮಾಂಝಿ ಅವರು ಈ ವಿಚಾರವನ್ನು ಪ್ರಸ್ತಾಪಿಸಿ ಲೋಕಸಭೆ ಸ್ಪೀಕರ್ ಓಂ ಬಿರ್ಲಾಗೆ ಬರೆದಿರುವ ಪತ್ರ, ದಲಿತ ಮತ್ತು ಆದಿವಾಸಿ ಜನಪ್ರತಿನಿಧಿಗಳ ಸಂಸದೀಯ ಪಾಲ್ಗೊಳ್ಳುವಿಕೆ ಕುರಿತ ಚರ್ಚೆಗೆ ನಾಂದಿ ಹಾಡಿದೆ.

ಕೇವಲ ವಿರೋಧ ಪಕ್ಷಗಳಷ್ಟೇ ಅಲ್ಲದೆ, ಆಡಳಿತಾರೂಢ ಎನ್ಡಿಎ ಮೈತ್ರಿಕೂಟದ ಒಳಗಿನಿಂದಲೇ ಸ್ಫೋಟಗೊಂಡಿರುವ ಅಸಮಾಧಾನಗಳು ಈ ಆರೋಪಗಳಿಗೆ ಪ್ರಬಲ ಆಧಾರವಾಗಿವೆ. ದಲಿತ ಮತ್ತು ಆದಿವಾಸಿ ಸಂಸದರನ್ನು ಕೇವಲ ಸರ್ಕಾರದ ಬಹುಮತ ಸಾಬೀತುಪಡಿಸುವ ಸಂಖ್ಯಾಬಲಕ್ಕಾಗಿ ಮಾತ್ರ ಬಳಸಿಕೊಳ್ಳಲಾಗುತ್ತಿದೆ ಹಾಗೂ ನೀತಿ ನಿರೂಪಣೆ ಅಥವಾ ಸಮುದಾಯದ ಸಮಸ್ಯೆಗಳನ್ನು ಮಂಡಿಸುವಾಗ ಅವರನ್ನು ಉದ್ದೇಶಪೂರ್ವಕವಾಗಿ ಮೂಲೆಗುಂಪು ಮಾಡಲಾಗುತ್ತಿದೆ ಎಂಬುದು ಸದ್ಯದ ಪ್ರಮುಖ ವಿವಾದವಾಗಿದೆ. ಶೋಷಿತರ ಪರ ಎಂದು ಹೇಳಿಕೊಳ್ಳುವ ಸರ್ಕಾರದೊಳಗೇ ಮೀಸಲು ಸಂಸದರು ಉಸಿರುಗಟ್ಟುವ ವಾತಾವರಣದಲ್ಲಿದ್ದಾರೆ ಎಂಬ ಚರ್ಚೆಗಳು ಮುನ್ನೆಲೆಗೆ ಬಂದಿವೆ.

ಸಂಸತ್ತಿನ ಕಲಾಪಗಳ ಸಮಯ ಹಂಚಿಕೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಮೇಲ್ವರ್ಗದ ಸಂಸದರಿಗೆ ಸಿಗುತ್ತಿರುವ ಸಿಂಹಪಾಲು ಈ ತಾರತಮ್ಯದ ಆರೋಪಗಳಿಗೆ ತುಪ್ಪ ಸುರಿದಿದೆ. ಸದನದಲ್ಲಿ ಪ್ರಮುಖ ವಿಚಾರಗಳ ಚರ್ಚೆಯ ಸಂದರ್ಭದಲ್ಲಿ ಪಕ್ಷದ ಉನ್ನತ ನಾಯಕರು ಮತ್ತು ಮೇಲ್ವರ್ಗದ ಪ್ರತಿನಿಧಿಗಳಿಗೆ ಮಾತ್ರ ಸುದೀರ್ಘವಾಗಿ ಮಾತನಾಡಲು ಮಣೆ ಹಾಕಲಾಗುತ್ತಿದೆ. ಆದರೆ, ಅದೇ ವೇಳೆ ಎಸ್ಸಿ ಮತ್ತು ಎಸ್‌ಟಿ ಸಂಸದರಿಗೆ ತಮ್ಮ ಕ್ಷೇತ್ರ ಅಥವಾ ಸಮುದಾಯದ ಮೇಲಿನ ದೌರ್ಜನ್ಯಗಳ ಬಗ್ಗೆ ಧ್ವನಿ ಎತ್ತಲು ಕನಿಷ್ಠ ನಿಮಿಷಗಳ ಕಾಲಾವಕಾಶವನ್ನೂ ನಿರಾಕರಿಸುವ ಮೂಲಕ ಅವರನ್ನು ಸಂಪೂರ್ಣವಾಗಿ ಮೌನಕ್ಕೆ ಶರಣಾಗುವಂತೆ ಮಾಡಲಾಗುತ್ತಿದೆ.



ಚರ್ಚೆಗೆ ನಾಂದಿ ಹಾಡಿದ ಎನ್‌ಡಿಎ ಮಿತ್ರಪಕ್ಷದ ನಾಯಕ ಹಾಗೂ ಕೇಂದ್ರ ಸಚಿವ ಜಿತನ್‌ರಾಮ್ ಮಾಂಝಿ

ಈ ವಿಚಾರವನ್ನು ಪ್ರಸ್ತಾಪಿಸಿ ಲೋಕಸಭೆ ಸ್ಪೀಕರ್ ಓಂ ಬಿರ್ಲಾಗೆ ಬರೆದಿರುವ ಪತ್ರ

ಪಿಆರ್‌ಎಸ್ ಲೆಜಿಸ್ಲೇಟಿವ್ ರಿಸರ್ಚ್ ಬಿಡುಗಡೆ ಮಾಡಿರುವ ಇತ್ತೀಚಿನ ಅಂಕಿಅಂಶಗಳು ಈ ದಮನಕಾರಿ ನೀತಿಯ ಆರೋಪಗಳಿಗೆ ಸಾಂಖ್ಯಿಕ ಪುಷ್ಟಿ ಒದಗಿಸಿವೆ. ಜೂನ್ 24, 2024ರಿಂದ ಆಗಸ್ಟ್ 23, 2026ರವರೆಗಿನ ದತ್ತಾಂಶಗಳ ಪ್ರಕಾರ, ಆಡಳಿತರೂಢ ಬಿಜೆಪಿಯ 46 ಮೀಸಲು ಕ್ಷೇತ್ರದ ಸಂಸದರ ಕಲಾಪದ ಪಾಲ್ಗೊಳ್ಳುವಿಕೆಯ ಸರಾಸರಿ ಕೇವಲ 13.89 ರಷ್ಟಿದೆ. ಆದರೆ, ಇದೇ ಅವಧಿಯಲ್ಲಿ ಪಕ್ಷದ ಇತರ 145 ಸಂಸದರ ಸರಾಸರಿ ಪಾಲ್ಗೊಳ್ಳುವಿಕೆ 19.68 ರಷ್ಟಿದೆ. ಈ ಅಂಕಿಅಂಶವು, ಮೇಲ್ವರ್ಗದ ಪ್ರಾಬಲ್ಯವಿರುವ ಸಂಸದೀಯ ವ್ಯವಸ್ಥೆಯಲ್ಲಿ ದಲಿತ ಪ್ರತಿನಿಧಿಗಳ ಧ್ವನಿಯನ್ನು ಹೇಗೆ ಕಡೆಗಣಿಸಲಾಗಿದೆ ಎಂಬುದಕ್ಕೆ ಕನ್ನಡಿ ಹಿಡಿದಿದೆ. ಈ ಕಡೆಗಣನೆ ಆಕಸ್ಮಿಕವಲ್ಲ, ಬದಲಾಗಿ ಇದು ಎಸ್ಸಿ–ಎಸ್ಟಿ ನಾಯಕರು ಸ್ವತಂತ್ರವಾಗಿ ಬೆಳೆಯುವುದನ್ನು ತಡೆಯುವ ಉದ್ದೇಶಪೂರ್ವಕ ತಂತ್ರ ಎಂದು ವಿಶ್ಲೇಷಿಸಲಾಗುತ್ತಿದೆ. ಉದಾಹರಣೆಗೆ, ದೇವಾಸ್ ಮೀಸಲು ಕ್ಷೇತ್ರದಿಂದ 2ನೇ ಬಾರಿಗೆ ಆಯ್ಕೆಯಾಗಿರುವ ಬಿಜೆಪಿ ಸಂಸದ ಮಹೇಂದ್ರ ಸಿಂಗ್ ಸೋಲಂಕಿ ಅವರಂತಹವರು ಇದುವರೆಗೂ ಒಂದೇ ಒಂದು ಚರ್ಚೆಯಲ್ಲೂ ಪಾಲ್ಗೊಂಡಿಲ್ಲ. ಇಂತಹ ಮೌನವು ಸಂಸದರ ವೈಯಕ್ತಿಕ ಆಯ್ಕೆಯಲ್ಲ, ಬದಲಾಗಿ ಪಕ್ಷದ ಆಂತರಿಕ ಕಟ್ಟುಪಾಡುಗಳು ಮತ್ತು ಮೇಲ್ವರ್ಗದ ನಾಯಕತ್ವವು ಅವರ ಮೇಲೆ ಹೇರಿರುವ ಅಘೋಷಿತ ಸೆನ್ಸಾರ್‌ಶಿಪ್ ಆಗಿದೆ. ಈ ದಮನಕಾರಿ ವಾತಾವರಣದಿಂದ ಬೇಸತ್ತೇ ಎನ್‌ಡಿಎ ಮಿತ್ರಪಕ್ಷವಾಗಿರುವ ಹಿಂದೂಸ್ತಾನಿ ಅವಾಮ್ ಮೋರ್ಚಾ (ಎಚ್‌ಎಎಂ) ನಾಯಕ ಹಾಗೂ ಕೇಂದ್ರ ಸಚಿವ ಜಿತನ್ ರಾಮ್ ಮಾಂಝಿ ಮತ್ತು ಬಿಜೆಪಿ ಸಂಸದ ಗಜೇಂದ್ರ ಸಿಂಗ್ ಪಟೇಲ್ ಅವರು ಸ್ಪೀಕರ್‌ಗೆ ಮೊರೆ ಹೋಗುವ ದುಸ್ಥಿತಿ ನಿರ್ಮಾಣವಾಯಿತು ಎನ್ನಲಾಗಿದೆ. ದಲಿತ ಮತ್ತು ಆದಿವಾಸಿ ಪ್ರತಿನಿಧಿಗಳಿಗೆ ಪ್ರತ್ಯೇಕ ಸಮಯ ನಿಗದಿಪಡಿಸಬೇಕು ಎಂಬ ಅವರ ಬೇಡಿಕೆಯು, ಪ್ರಸ್ತುತ ಇರುವ ವ್ಯವಸ್ಥೆಯು ತಮ್ಮ ದನಿಯನ್ನು ಹೇಗೆ ಹತ್ತಿಕ್ಕುತ್ತಿದೆ ಎಂಬುದರ ಹತಾಶೆಯ ಪ್ರತಿರೂಪವಾಗಿದೆ. ತಮ್ಮದೇ ಸರ್ಕಾರದ ವಿರುದ್ಧ ಅಸಮಾಧಾನ ಹೊರಹಾಕಿರುವುದು ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ.

ಸಂಸತ್ತಿನಂತಹ ಪ್ರಜಾಪ್ರಭುತ್ವದ ಅತಿ ದೊಡ್ಡ ದೇಗುಲದಲ್ಲಿ ದಲಿತ ಮತ್ತು ಆದಿವಾಸಿ ಸಂಸದರ ಸ್ಥಿತಿಯು ಹಲ್ಲು ಕೀಳಲ್ಪಟ್ಟ ಹಾವಿನಂತಾಗಿದೆ ಎಂಬ ಕಟು ವಿಮರ್ಶೆಗಳು ವ್ಯಕ್ತವಾಗುತ್ತಿವೆ. ಪ್ರಧಾನಿ ಮೋದಿ, ಅಮಿತ್ ಶಾ ಮತ್ತು ಮೇಲ್ವರ್ಗದ ಸಂಸದರ ಪ್ರಾಬಲ್ಯದ ನಡುವೆ, ಶೋಷಿತ ಸಮುದಾಯಗಳ ಪ್ರತಿನಿಧಿಗಳನ್ನು ಉದ್ದೇಶಪೂರ್ವಕವಾಗಿಯೇ ಮೂಲೆಗುಂಪು ಮಾಡಿ, ಅವರ ಬಾಯಿ ಮುಚ್ಚಿಸುವ ಮೂಲಕ ಮೋದಿ ಸರ್ಕಾರವು ತೀವ್ರ ದಲಿತ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ ಎಂಬ ಕಳಂಕ ಮತ್ತು ಟೀಕೆಗಳು ದಿನೇ ದಿನೇ ಹೆಚ್ಚಾಗುತ್ತಿವೆ.

# ಹರ್ದೀಪ್‌ಸಿಂಗ್ ಪುರಿ, ಸ್ಮೃತಿ ಇರಾನಿ, ಹರೀಶ್ ದ್ವಿವೇದಿ ರಾಜ್ಯಸಭೆಗೆ?






**ನವದೆಹಲಿ, ಸೆ. 29:** ಉತ್ತರ ಪ್ರದೇಶದಿಂದ ಅಕ್ಟೋಬರ್ 16ರಂದು ನಡೆಯಲಿರುವ 10 ರಾಜ್ಯಸಭಾ ಸ್ಥಾನಗಳ ಚುನಾವಣೆಗೆ ಬಿಜೆಪಿ ರಾಜ್ಯ ಘಟಕವು ಕೇಂದ್ರ ನಾಯಕತ್ವದ ಪರಿಗಣನೆಗಾಗಿ 25 ಸಂಭಾವ್ಯ ಅಭ್ಯರ್ಥಿಗಳ ಹೆಸರನ್ನು ಕಳುಹಿಸಿದೆ. ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸ್ಮೃತಿ ಇರಾನಿ, ಹರೀಶ್ ದ್ವಿವೇದಿ ಹಾಗೂ ಮಾಜಿ ಆಪ್ ನಾಯಕ, ಕವಿಕುಮಾರ್ ವಿಶ್ವಾಸ್ ಸೇರಿದಂತೆ ಹಲವು ಪ್ರಮುಖರ ಹೆಸರು ಪಟ್ಟಿಯಲ್ಲಿದೆ.

ಇತ್ತೀಚಿನ ಚುನಾವಣೆಗಳಲ್ಲಿ ಸೋತಿರುವ ಕೆಲವು ಮಾಜಿ ಸಂಸದರು ಮತ್ತು ಪಕ್ಷದ ಸಂಘಟನಾ ಜವಾಬ್ದಾರಿ ಹೊಂದಿರುವ ನಾಯಕರ ಹೆಸರುಗಳೂ ಪಟ್ಟಿಯಲ್ಲಿವೆ. ಮಾಜಿ ಸಂಸದ ಹರೀಶ್ ದ್ವಿವೇದಿ ಹೆಸರೂ ಪಟ್ಟಿಯಲ್ಲಿದ್ದು, ಅವರು ಸದ್ಯ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಬಿಹಾರ ಮತ್ತು ಕರ್ನಾಟಕದ ಜವಾಬ್ದಾರಿ ಹೊತ್ತಿದ್ದಾರೆ. 2024ರ ಲೋಕಸಭಾ ಚುನಾವಣೆಯಲ್ಲಿ ಅವರು ಬಸ್ತಿ ಕ್ಷೇತ್ರದಲ್ಲಿ ಸೋಲುಂಡಿದ್ದರು. 2027ರ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಾತಿ ಮತ್ತು ಪ್ರಾದೇಶಿಕ ಸಮೀಕರಣಗಳನ್ನು ಗಮನದಲ್ಲಿಟ್ಟುಕೊಂಡು ಆಯ್ಕೆ ನಡೆಯುವ ಸಾಧ್ಯತೆ ಇದೆ ಎನ್ನಲಾಗಿದೆ.

ಈ ನಡುವೆ ಸ್ಮೃತಿ ಇರಾನಿ ಹೆಸರು ವಿಶೇಷ ಗಮನ ಸೆಳೆಯುತ್ತಿದೆ. 2014ರಲ್ಲಿ ಅಮೇಥಿಯಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿದ್ದ ಇರಾನಿ, 2019ರಲ್ಲಿ ಅದೇ ಕ್ಷೇತ್ರದಿಂದ ರಾಹುಲ್ ಗಾಂಧಿ ಅವರನ್ನು ಸೋಲಿಸಿದ್ದರು. 2024ರಲ್ಲಿ ಅಮೇಥಿಯಲ್ಲಿ ಸೋತ ಬಳಿಕ ಅವರು ಲೋಕಸಭೆಯಲ್ಲಿ ಇರಲಿಲ್ಲ. ಇದೀಗ ಬಿಜೆಪಿ ರಾಷ್ಟ್ರೀಯ ಸಂಘಟನೆಯಲ್ಲಿ ಪ್ರಮುಖ ಜವಾಬ್ದಾರಿಗಳನ್ನು ಹೊಂದಿರುವ ಸಂದರ್ಭದಲ್ಲಿ ಅವರ ಹೆಸರು ಮತ್ತೆ ರಾಜ್ಯಸಭಾ ಅಭ್ಯರ್ಥಿಗಳ ಸಂಭಾವ್ಯ ಪಟ್ಟಿಯಲ್ಲಿ ಕಾಣಿಸಿಕೊಂಡಿದೆ.

ರಾಜ್ಯಸಭಾ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯಲ್ಲಿ ರಾಜವೀರ್ ಸಿಂಗ್ ರಾಜು ಭಯ್ಯಾ, ಬಿ.ಎಲ್. ವರ್ಮಾ, ಹಿರಿಯ ಜಾಟ್ ನಾಯಕರಾದ ಸಂಜೀವ್ ಬಲ್ಯಾನ್ ಮತ್ತು ಸತ್ಯಪಾಲ್ ಸಿಂಗ್ ಹಾಗೂ ಮಾಜಿ ಸಂಸದ ಬೃಜ್ ಲಾಲ್ ಅವರ ಹೆಸರೂ ಇದೆ. ಸದ್ಯ ಉತ್ತರ ಪ್ರದೇಶದ 10 ಸ್ಥಾನಗಳಲ್ಲಿ 8 ಬಿಜೆಪಿ, 1 ಸಮಾಜವಾದಿ ಪಕ್ಷ ಹಾಗೂ 1 ಬಿಎಸ್‌ಪಿ ಬಳಿ ಇದೆ.

ಉತ್ತರಪ್ರದೇಶದ 10 ರಾಜ್ಯಸಭಾ ಸ್ಥಾನಗಳಿಗೆ ಶಾಸಕರು ಪ್ರಮಾಣಾನುಗತ ಪ್ರಾತಿನಿಧ್ಯ ಮತ್ತು ಸಿಂಗಲ್ ವರ್ಗಾಯಿಸುವ ಮತ ಪದ್ಧತಿಯ ಮೂಲಕ ಸದಸ್ಯರನ್ನು ಆಯ್ಕೆ ಮಾಡಲಿದ್ದಾರೆ. ಪ್ರಸ್ತುತ ವಿಧಾನಸಭೆಯ ಪರಿಣಾಮಕಾರಿ ಸದಸ್ಯರ ಸಂಖ್ಯೆ 397 ಆಗಿದ್ದು, ಒಂದು ಸ್ಥಾನ ಗೆಲ್ಲಲು ಮೊದಲ ಪ್ರಾಶಸ್ತ್ಯದ ಸುಮಾರು 37 ಮತಗಳ ಅಗತ್ಯವಿದೆ. ಉತ್ತರ ಪ್ರದೇಶ ವಿಧಾನಸಭೆಯಲ್ಲಿ ಬಿಜೆಪಿಗೆ 256 ಶಾಸಕರಿದ್ದು, ಎನ್‌ಡಿಎ ಮಿತ್ರಪಕ್ಷಗಳನ್ನು ಸೇರಿಸಿದರೆ ಸಂಖ್ಯೆ 289ಕ್ಕೆ ತಲುಪುತ್ತದೆ. ಈ ಸಂಖ್ಯಾಬಲದಿಂದ ಎನ್‌ಡಿಎಗೆ ಏಳು ಸ್ಥಾನಗಳ ಗೆಲುವಿಗೆ ಅಗತ್ಯವಾದ ಮತಗಳಿವೆ. 8ನೇ ಸ್ಥಾನಕ್ಕಾಗಿ ಹೆಚ್ಚುವರಿ ಮತಗಳ ಅಗತ್ಯವಿದ್ದು, ಅಭ್ಯರ್ಥಿಗಳ ಆಯ್ಕೆ, ಎರಡನೇ ಪ್ರಾಶಸ್ತ್ಯದ ಮತಗಳು ಹಾಗೂ ಸಂಭವನೀಯ ಅಡ್ಡಮತದಾನ ಪ್ರಮುಖವಾಗಬಹುದು. ಸಮಾಜವಾದಿ ಪಕ್ಷದ 101 ಮತ್ತು ಕಾಂಗ್ರೆಸ್‌ಬ ಇಬ್ಬರು ಶಾಸಕರು ಸೇರಿ ವಿರೋಧ ಪಕ್ಷದ ಬಲ 103ರಷ್ಟಿದೆ.ಈ ಚುನಾವಣೆಯಲ್ಲಿ ಬಿಜೆಪಿ ತನ್ನ ರಾಜ್ಯಸಭಾ ಸ್ಥಾನಗಳನ್ನು ಉಳಿಸಿಕೊಳ್ಳುವುದಷ್ಟೇ ಅಲ್ಲದೆ ಹೆಚ್ಚುವರಿ ಸ್ಥಾನ ಪಡೆಯಲು ಪ್ರಯತ್ನಿಸುವ ಸಾಧ್ಯತೆ ಇದೆ.

# ಕಥುವಾದಲ್ಲಿ ಘೋರ ಕೃತ್ಯ: ಓರ್ವ ಅಧಿಕಾರಿ ಸೇರಿ ನಾಲ್ವರು ಸಹೋದ್ಯೋಗಿಗಳನ್ನು ಗುಂಡಿಕ್ಕಿ ಕೊಂದ ಸಿಐಎಸ್‌ಎಫ್ ಯೋಧ

**ಕಥುವಾ, ಸೆ.29:** ಜಮ್ಮು ಮತ್ತು ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆ(ಸಿಐಎಸ್‌ಎಫ್)ಯ ಯೋಧ, ಓರ್ವ ಅಧಿಕಾರಿ ಸೇರಿದಂತೆ ನಾಲ್ವರು ಸಹೋದ್ಯೋಗಿಗಳನ್ನು ಗುಂಡಿಕ್ಕಿ ಹತ್ಯೆ ಮಾಡಿದ ಭೀಕರ ಘಟನೆ ನಡೆದಿದೆ.

ಸಿಬ್ಬಂದಿಗಳ ನಡವೆ ನಡೆದ ಜಗಳ ನಾಲ್ವರ ಕೊಲೆಯಲ್ಲಿ ಅಂತ್ಯವಾದ ಭೀಕರ ಘಟನೆ ಸೋಮವಾರ ಕಥುವಾದಲ್ಲಿ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಮೂಲಗಳ ಪ್ರಕಾರ, ಈ ಘಟನೆ ಬಸೋಹ್ಲಿಯ ಬೆಟ್ಟಗಳಲ್ಲಿರುವ ಸೇವಾ ವಿದ್ಯುತ್ ಯೋಜನೆಯ ಸಿಐಎಸ್‌ಎಫ್ ಶಿಬಿರದಲ್ಲಿ ನಡೆದಿದೆ.

ಗುಂಡಿನ ದಾಳಿಯಲ್ಲಿ ಸಹಾಯಕ ಕಮಾಂಡೆಂಟ್ ಸಹ ಮೃತಪಟ್ಟಿದ್ದು, ಗುಂಡು ಹಾರಿಸಿದ ಜವಾನ್ ಹೆಡ್ ಕಾನ್‌ಸ್ಟೆಬಲ್ ಆಗಿದ್ದು, ಆತನನ್ನು ಪೊಲೀಸರಿಗೆ ಹಸ್ತಾಂತರಿಸಲಾಗಿದೆ ಎಂದು ಸುದ್ದಿ ಸಂಸ್ಥೆ ಎಎನ್‌ಐ ತಿಳಿಸಿದೆ.

**ಡಿಪಿಎಆರ್ ವ್ಯಾಪ್ತಿಯ ಕೆಎಸ್‌ಡಿಸಿ - ಕೆಎಸ್‌ಡಬ್ಲ್ಯುಎಎನ್ ಟೆಂಡರ್ ಪ್ರಕ್ರಿಯೆ**

# 444 ಕೋಟಿ ರೂ. ಅಕ್ರಮ: ಲೋಕಾಗೆ ಬಿಜೆಪಿ ಮುಖಂಡ ಎನ್.ಆರ್.ರಮೇಶ್ ದೂರು

**ಬೆಂಗಳೂರು, ಸೆ.29:** ಕರ್ನಾಟಕದ ಆಡಳಿತ ವಲಯದಲ್ಲಿ ಮತ್ತೊಂದು ಟೆಂಡರ್ ಅಕ್ರಮದ ಆರೋಪ ಕೇಳಿ ಬಂದಿದ್ದು, ಡಿಪಿಎಆರ್ ವ್ಯಾಪ್ತಿಯ ಕರ್ನಾಟಕ ಸ್ಟೇಟ್ ಡೇಟಾ ಸೆಂಟರ್ (ಕೆಎಸ್‌ಡಿಸಿ) ಹಾಗೂ ಕರ್ನಾಟಕ ಸ್ಟೇಟ್ ವೈಡ್ ಏರಿಯಾ ನೆಟ್‌ವರ್ಕ್ (ಕೆಎಸ್‌ಡಬ್ಲ್ಯುಎಎನ್)ಗೆ ಸಂಬಂಧಿಸಿದ ಸುಮಾರು 444 ಕೋಟಿ ರೂ. ಮೊತ್ತದ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ.



ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ, ಇ-ಆಡಳಿತ ವಿಭಾಗದ ಸಿಇಒ ಆಗಿದ್ದ/ಇರುವ ಐಎಎಸ್ ಅಧಿಕಾರಿ ಭೂಬಾಲನ್ ಸೇರಿದಂತೆ ಮೂವರು ಅಧಿಕಾರಿಗಳ ವಿರುದ್ಧ ದಾಖಲೆಗಳ ಸಮೇತ ದೂರು ಸಲ್ಲಿಸಲಾಗಿದೆ ಎಂದು ವರದಿಯಾಗಿದೆ. 2025ರಲ್ಲಿ ನಡೆದ ಟೆಂಡರ್ ಪ್ರಕ್ರಿಯೆಯಲ್ಲಿ ಅರ್ಹತಾ ಮಾನದಂಡ ಪೂರೈಸದ ಹೈದರಾಬಾದ್ ಮೂಲದ ಕಂಪನಿಗೆ ಗುತ್ತಿಗೆ ನೀಡಲಾಗಿದೆ ಎಂಬುದು ದೂರುದಾರರ ಪ್ರಮುಖ ಆರೋಪವಾಗಿದೆ.

ದೂರುದಾರರ ಪ್ರಕಾರ, ಕೆಎಸ್‌ಡಿಸಿ ಮತ್ತು ಕೆಎಸ್ ಡಬ್ಲ್ಯುಎಎನ್‌ಗೆ ಸಂಬಂಧಿಸಿದ ಈ ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮಗಳನ್ನು ಪಾಲಿಸಲಾಗಿದೆಯೇ, ಬಿಡ್‌ದಾರ ಕಂಪನಿಯು ನಿಗದಿತ ಅರ್ಹತೆಗಳನ್ನು ಹೊಂದಿತ್ತೇ ಹಾಗೂ ಆಯ್ಕೆ ಪ್ರಕ್ರಿಯೆ ಪಾರದರ್ಶಕವಾಗಿತ್ತೇ ಎಂಬ ಬಗ್ಗೆ ತನಿಖೆ ಅಗತ್ಯವಾಗಿದೆ. ಟೆಂಡರ್ ಪ್ರಕ್ರಿಯೆ ನಡೆದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿಪಿಎಆರ್ ಇಲಾಖೆಯನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಇದೇ ಹಿನ್ನೆಲೆಯಲ್ಲಿ ಯತೀಂದ್ರ ಸಿದ್ದರಾಮಯ್ಯ ಅವರ ಪ್ರಭಾವ ಅಥವಾ ಸೂಚನೆಯ ಮೇರೆಗೆ ಟೆಂಡರ್ ನೀಡಲಾಗಿದೆ ಎಂಬ ಆರೋಪವನ್ನು ಎನ್.ಆರ್. ರಮೇಶ್ ಮಾಡಿದ್ದಾರೆ.

ಆದರೆ, ಟೆಂಡರ್‌ನಲ್ಲಿ ನಿಜ ವಾಗಿಯೂ ಅಕ್ರಮ ನಡೆದಿದೆಯೇ, ಕಂಪನಿಗೆ ಅರ್ಹತೆ ಇರಲಿಲ್ಲವೇ ಅಥವಾ ಸಚಿವರ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಿದ್ದಾರೆಯೇ ಎಂಬುದು ತನಿಖೆ ಯಿಂದಲೇ ನಿರ್ಧಾರ ವಾಗಬೇಕಿದೆ.

# 38,000 ಕೋಟಿ ರೂ. ಬಾಕಿ ತಕ್ಷಣವೇ ಬಿಡುಗಡೆ ಮಾಡಿ ಸಿಎಂಗೆ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಮನವಿ

**ಬೆಂಗಳೂರು, ಸೆ.29:** ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಂದ ಗುತ್ತಿಗೆದಾರರಿಗೆ ಬರಬೇಕಿರುವ ಬರೋಬ್ಬರಿ 38,000 ಕೋಟಿ ರೂ. ಬಾಕಿಯನ್ನು ತಕ್ಷಣವೇ ಪಾವತಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಗುತ್ತಿಗೆ ದಾರರ ಸಂಘ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದೆ.

ಹಿಂದೆ ಡಿಸಿಎಂ ಆಗಿದ್ದ ವೇಳೆ ಫ್ರೀಡಂಪಾರ್ಕ್ ಧರಣಿ ವೇಳೆ ನೀಡಿದ್ದ ಭರವಸೆ ಹಾಗೂ ಬಳಿಕ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ನಡೆಸಿದ ಸಭೆಗಳಲ್ಲಿ ನೀಡಿದ್ದ ಮಾತುಗಳನ್ನು ಸಂಘಟನೆ ಮುಖ್ಯಮಂತ್ರಿಗಳಿಗೆ ನೆನಪಿಸಿದೆ.

ಎರಡು ತಿಂಗಳೊಳಗೆ ಬಾಕಿ ಪಾವತಿಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಲಾಗಿತ್ತು. ಆದರೆ, 2021–22ನೇ ಸಾಲಿನಿಂದ ಇದು ವರೆಗೂ ಬಾಕಿ ಬಿಡುಗಡೆಯಾಗಿಲ್ಲ. ಇದರಿಂದಾಗಿ ಕಾಮಗಾರಿ ಮುಗಿಸಿರುವ ಗುತ್ತಿಗೆದಾರರು ಹಾಗೂ ಅವರನ್ನು




ಅವಲಂಬಿಸಿರುವ ಸುಮಾರು 1.50 ಲಕ್ಷ ಕುಟುಂಬಗಳು ಬೀದಿಗೆ ಬೀಳುವಂತಾಗಿದೆ ಸಂಘ ಅಸಮಾಧಾನ ಹೊರಹಾಕಿದೆ.

**ಜಿಎಸ್‌ಟಿ ವ್ಯತ್ಯಾಸದ ಮೊತ್ತ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ನಿಯಮಗಳ ಸಡಿಲಿಕೆ**

2017–18 ಮತ್ತು 2018–19ನೇ ಸಾಲಿನಲ್ಲಿ ವ್ಯಾಟ್‌ನಿಂದ ಜಿಎಸ್‌ಟಿಗೆ ಬದಲಾದ ಸಂದರ್ಭದಲ್ಲಿ ಉಂಟಾದ ಶೇ.8ರಷ್ಟು ವ್ಯತ್ಯಾಸದ ಮೊತ್ತವನ್ನು ವಿಳಂಬವಿಲ್ಲದೆ ಬಿಡುಗಡೆ ಮಾಡಲು ಹಣಕಾಸು ಇಲಾಖೆಗೆ ಸ್ಪಷ್ಟ ನಿರ್ದೇಶನ ನೀಡಬೇಕು.

ಇದರ ಜೊತೆಗೆ, ಇ–ಸಂಗ್ರಹಣಾ ವೇದಿಕೆಯ 'ಗುತ್ತಿಗೆ ನಿರ್ವಹಣಾ ಮಾಡ್ಯೂಲ್'ನಲ್ಲಿ (ಕಾಮಗಾರಿಗಳ ವಿವರ ಅಪ್‌ಲೋಡ್ ಮಾಡಿದ ನಂತರವೇ ಖಜಾನೆಯಿಂದ ಹಣ ನೀಡಬೇಕೆಂಬ ಕಡ್ಡಾಯ ನಿಯಮವನ್ನು ಕೈಬಿಡಬೇಕು ಎಂದು ಮನವಿಯಲ್ಲಿ ಕೋರಲಾಗಿದೆ.

**ಸ್ಥಳೀಯರಿಗೆ ಟೆಂಡರ್ ಆದ್ಯತೆ ಮತ್ತು ಲೈಸೆನ್ಸ್ ನವೀಕರಣಕ್ಕೆ ರಿಯಾಯಿತಿ**

ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ನಡೆಯುವ ಕಾಮಗಾರಿಗಳ ಟೆಂಡರ್‌ಗಳಲ್ಲಿ ಸ್ಥಳೀಯ ಗುತ್ತಿಗೆದಾರರಿಗೆ ಮೊದಲ ಆದ್ಯತೆ ನೀಡಬೇಕು. ಹೊರ ಜಿಲ್ಲೆ ಮತ್ತು ಹೊರ ರಾಜ್ಯದವರಿಗೆ ಮಣೆ ಹಾಕಿ ಸ್ಥಳೀಯರನ್ನು ಕಡೆಗಣಿಸುವುದನ್ನು ಕಟ್ಟುನಿಟ್ಟಾಗಿ ತಡೆಯಬೇಕು. ಕೋವಿಡ್ ಸಾಂಕ್ರಾಮಿಕ ಹಾಗೂ ವ್ಯವಸ್ಥೆಯ ಏರುಪೇರುಗಳಿಂದ ಸಣ್ಣ ಮತ್ತು ಮಧ್ಯಮ ವರ್ಗದ ಗುತ್ತಿಗೆದಾರರಿಗೆ ದೀರ್ಘಕಾಲದಿಂದ ಕಾಮಗಾರಿಗಳು ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಗುತ್ತಿಗೆ ಪರವಾನಗಿ ನವೀಕರಿಸಲು ಮತ್ತು ಕಾಮಗಾರಿ ಅನುಭವದ ನಿಯಮವನ್ನು 10 ವರ್ಷಗಳ ವರೆಗೆ ವಿಸ್ತರಿಸಬೇಕು ಎಂಬ ಬೇಡಿಕೆಯನ್ನು ಮುಂದಿಡ ಲಾಗಿದೆ.

ಕಲ್ಯಾಣ ಕರ್ನಾಟಕ ಭಾಗದ ಸಮಸ್ಯೆಗಳ ಪರಿಹಾರಕ್ಕೆ ತುರ್ತು ಸಭೆ–ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಕಾಮಗಾರಿಗಳ ಹಣವನ್ನು ನಿರ್ಮಿತಿ ಕೇಂದ್ರ ಹಾಗೂ ಕೆ. ಆರ್.ಐ.ಡಿ.ಎಲ್ ಮುಂತಾದ ಇತರ ಸಂಸ್ಥೆಗಳಿಗೆ ಪರಭಾರೆ ಮಾಡುತ್ತಿರು ವುದನ್ನು ನಿಲ್ಲಿಸಬೇಕು. ಜತೆಗೆ, ಕೆ.ಕೆ. ಆರ್.ಡಿ.ಬಿ ಅಡಿಯಲ್ಲಿ ಕೈಗೆತ್ತಿಕೊಂಡಿ ರುವ 'ಕಲ್ಯಾಣ ಪಥ' ಯೋಜನೆಯಲ್ಲಿನ ತಾಂತ್ರಿಕ ಲೋಪದೋಷಗಳ ಕುರಿತು ಗುತ್ತಿಗೆದಾರರೊಂದಿಗೆ ಚರ್ಚಿಸಲು ಮುಖ್ಯಮಂತ್ರಿಗಳು ತಕ್ಷಣವೇ ಪ್ರತ್ಯೇಕ ಅಧಿಕೃತ ಸಭೆ ಕರೆಯಬೇಕು ಎಂದು ಸಂಘ ಆಗ್ರಹಿಸಿದೆ.

## ಸ್ಪೆಷಲ್ ಎಲ್‌ಓಸಿ ಪದ್ಧತಿ ರದ್ದುಮಾಡಲು ಮನವಿ

**ಬಿಲ್ ಪಾವತಿಯಲ್ಲಿ ಪಾರದರ್ಶಕತೆ ಮತ್ತು ಜ್ಯೇಷ್ಠತೆ ನಿಯಮ ಪಾಲನೆಗೆ ಪಟ್ಟು–ಲೋಕೋಪಯೋಗಿ ಹಾಗೂ ಬಿಬಿಎಂಪಿ ಹೊರತುಪಡಿಸಿ ಉಳಿದ ಇಲಾಖೆಗಳಲ್ಲಿ ಬಿಲ್ ಮಂಜೂರಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯೇ ಇಲ್ಲದಂತಾಗಿದೆ ಎಂದು ಸಂಘ ಆಪಾದಿಸಿದೆ. ಕಾಮಗಾರಿ ಪೂರ್ಣಗೊಳಿಸಿದ ಹಿರಿತನ ಅಥವಾ ಜ್ಯೇಷ್ಠತೆಯ (ಸೀನಿಯಾರಿಟಿ) ಆಧಾರದ ಮೇಲೆ ಹಣ ಬಿಡುಗಡೆ ಮಾಡಬೇಕು. ನಿಯಮಗಳನ್ನು ಗಾಳಿಗೆ ತೂರಿ ನೀಡಲಾಗುತ್ತಿರುವ 'ಸ್ಪೆಷಲ್ ಎಲ್‌ಒಸಿ' ಪದ್ಧತಿಯನ್ನು ತಕ್ಷಣವೇ ಸಂಪೂರ್ಣವಾಗಿ ರದ್ದುಗೊಳಿಸಬೇಕು ಎಂದು ಸಂಘ ಒತ್ತಾಯಿಸಿದೆ.**

# ವಾರದಲ್ಲೇ ಗ್ರಾಮೀಣ ಪತ್ರಕರ್ತರ ಬಸ್ ಪಾಸ್ ವಿತರಣೆಗೆ ವಾರ್ತಾ ಇಲಾಖೆ ಸಿದ್ಧತೆ

**ಬೆಂಗಳೂರು, ಸೆ.29:** ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ವಿತರಿಸುವ ಪ್ರಕ್ರಿಯೆಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮುಂದಾಗಿದ್ದು, ಅನುಮೋದನೆ ಗೊಂಡಿರುವ ಪಾಸ್‌ಗಳನ್ನು ಈ ವಾರದಲ್ಲೇ ಜಿಲ್ಲಾ ಮಟ್ಟದಲ್ಲಿ ವಿತರಿಸಲು ಸಿದ್ಧತೆ ನಡೆಸಿದೆ.

ಈ ಕುರಿತು ವಾರ್ತಾ ಇಲಾಖೆ ಆಯುಕ್ತರಾದ ಎಂ.ಎನ್. ಅನುಚೇತ್ ಅವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಭೇಟಿ ಮಾಡಿ ಚರ್ಚಿಸಿದರು.

ಈ ಸಂದರ್ಭದಲ್ಲಿ ಅನುಮೋದನೆಗೊಂಡಿರುವ ಗ್ರಾಮೀಣ ಪತ್ರಕರ್ತರ ಬಸ್‌ಪಾಸ್‌ಗಳು ಬಂದಿದ್ದು, ಈ ವಾರದಲ್ಲೇ ಜಿಲ್ಲಾಮಟ್ಟದಲ್ಲಿ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಆಯುಕ್ತರು ಖಚಿತಪಡಿಸಿದರು. ಈ ಬಗ್ಗೆ ಕೂಡಲೇ ಇಲಾಖೆ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದರು.



ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡುವ ಯೋಜನೆಯಡಿ, ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲಾಗಿದ್ದ ಸುಮಾರು 400 ಅರ್ಜಿಗಳಿಗೆ ಆಗಸ್ಟ್ 7ರಂದು ವಾರ್ತಾ ಇಲಾಖೆ ಅನುಮೋದನೆ ನೀಡಿತ್ತು. ಆಯುಕ್ತ ಎಂ.ಎನ್. ಅನುಚೇತ್ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮೀಣ ಪತ್ರಕರ್ತರ ಬಸ್ ಪಾಸ್ ಸಮಿತಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿತ್ತು. ಗ್ರಾಮೀಣ ಪತ್ರಕರ್ತರ ಬಹುದಿನಗಳ ಬೇಡಿಕೆಯಾಗಿದ್ದ ಬಸ್‌ಪಾಸ್ ಯೋಜನೆ ಜಾರಿಗೆ ಕೆಯುಡಬ್ಲ್ಯುಜೆ ನಿರಂತರವಾಗಿ ಒತ್ತಾಯಿಸುತ್ತಾ ಬಂದಿದ್ದು, ಇದೀಗ ಅನುಮೋದನೆಗೊಂಡಿರುವ ಪಾಸ್‌ಗಳ ವಿತರಣೆಗೆ ಇಲಾಖೆ ಮುಂದಾಗಿರುವುದನ್ನು ಕೆಯುಡಬ್ಲ್ಯುಜೆ ಸ್ವಾಗತಿಸಿದೆ.


ದಾಖಲೆಗಳ ಪರಿಶೀಲನೆ ನಡೆಸಿ ಬಸ್ ಪಾಸ್ಗಳಿಗೆ ಅನುಮೋದನೆ ನೀಡಿರುವ ವಾರ್ತಾ ಇಲಾಖೆಗೆ ಕೆಯುಡಬ್ಲ್ಯುಜೆ ಕೃತಜ್ಞತೆ ಸಲ್ಲಿಸಿದೆ. ಇನ್ನೂ ಅರ್ಜಿ ಸಲ್ಲಿಸದಿರುವ ಅರ್ಹ ಗ್ರಾಮೀಣ ಪತ್ರಕರ್ತರು ನಿಯಮಾನುಸಾರ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವಂತೆ ಸಂಘ ಮನವಿ ಮಾಡಿದೆ. ಭೇಟಿ ಸಂದರ್ಭದಲ್ಲಿ ವಾರ್ತಾ ಇಲಾಖೆ ಆಯುಕ್ತ ಎಂ.ಎನ್. ಅನುಚೇತ್ ಅವರಿಗೆ ಕೆಯುಡಬ್ಲ್ಯುಜೆ ಧನ್ಯವಾದಗಳನ್ನು ತಿಳಿಸಿದೆ.




ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಮಂಗಳವಾರ ಪೊಲೀಸರು ವಶಪಡಿಸಿಕೊಂಡ ಕಳವು ವಸ್ತುಗಳ ಪರಿಶೀಲನೆ ನಡೆಸಿದರು.

# ರೇಣುಕಾಸ್ವಾಮಿ ಕೊಲೆ ಪ್ರಕರಣ: ಘಟನೆಯ ವಿವರ ತೆರೆದಿಟ್ಟ ಮಾಫಿಸಾಕ್ಷಿ ಪ್ರದೋಷ್

**ಬೆಂಗಳೂರು, ಸೆ.29:** ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮಾಫಿಸಾಕ್ಷಿಯಾಗಿರುವ ಪ್ರದೋಷ್ ಅವರು ಮೊದಲ ದಿನದ ವಿಚಾರಣೆಯಲ್ಲಿ ಸುಮಾರು ಮೂರು ಗಂಟೆಗಳ ಕಾಲ ಅಂದಿನ ಘಟನೆಗಳ ಕುರಿತು ವಿವರವಾದ ಹೇಳಿಕೆ ನೀಡಿದ್ದಾರೆ.



ರೇಣುಕಾಸ್ವಾಮಿಯನ್ನು ಪಟ್ಟಣಗೆರೆ ಶೆಡ್‌ಗೆ ಕರೆತಂದವರು ಯಾರು, ಅಲ್ಲಿ ನಡೆದ ಘಟನೆಗಳು ಹಾಗೂ ಯಾರು ಹಲ್ಲೆ ನಡೆಸಿದರು ಎಂಬುದರ ಕುರಿತು ಪ್ರದೋಷ್ ಮಾಹಿತಿ ನೀಡಿದ್ದಾರೆ.

ಪವಿತ್ರಾಗೌಡ ಅವರಿಗೆ ಅಶ್ಲೀಲ ಸಂದೇಶ ಕಳುಹಿಸಿದ್ದ ಆರೋಪದ ಹಿನ್ನೆಲೆಯಲ್ಲಿ ರೇಣುಕಾಸ್ವಾಮಿಯನ್ನು ಪಟ್ಟಣಗೆರೆ ಶೆಡ್‌ಗೆ ಕರೆತರಲಾಗಿತ್ತು. ಬಳಿಕ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡಿದ್ದು, ನಟ ದರ್ಶನ್ ಕೂಡ ಶೆಡ್‌ಗೆ ತೆರಳಿದ್ದರು ಎಂದು ಪ್ರದೋಷ್ ತಮ್ಮ ಹೇಳಿಕೆಯಲ್ಲಿ ವಿವರಿಸಿದ್ದಾರೆ.


ಪ್ರದೋಷ್ ನೀಡಿರುವ ಹೇಳಿಕೆಯ ಪ್ರಕಾರ, ರೇಣುಕಾಸ್ವಾಮಿಯ ವಿಚಾರ ತಿಳಿದು ದರ್ಶನ್ ಕೋಪಗೊಂಡಿದ್ದರು. ಶೆಡ್‌ಗೆ ಕರೆತಂದಿದ್ದ ರೇಣುಕಾಸ್ವಾಮಿಗೆ ದರ್ಶನ್ ಹಲ್ಲೆ ನಡೆಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಈ ವೇಳೆ ರೇಣುಕಾಸ್ವಾಮಿ ಕೈಮುಗಿದು ಕ್ಷಮೆ ಕೇಳಿದ್ದರು ಎಂದು ಹೇಳಲಾಗಿದೆ.

ಇದೇ ಸಂದರ್ಭದಲ್ಲಿ ದರ್ಶನ್ ಅವರು ಪವಿತ್ರಾ ಗೌಡ ಅವರೊಂದಿಗೆ ತಮ್ಮ ಸಂಬಂಧದ ಕುರಿತು ಮಾತನಾಡಿದ್ದರು ಎನ್ನಲಾಗಿದೆ. ಪವಿತ್ರಾಗೌಡ ಅವರ ಭುಜದ ಮೇಲೆ ಕೈಹಾಕಿ, ಅವರನ್ನು ತಮ್ಮ ಪತ್ನಿ ಎಂದು ದರ್ಶನ್ ಪರಿಚಯಿಸಿದ್ದರು ಎಂದು ಪ್ರದೋಷ್ ಹೇಳಿಕೆ ನೀಡಿದ್ದಾರೆ. ಬಳಿಕ ರೇಣುಕಾಸ್ವಾಮಿಗೆ ಮತ್ತಷ್ಟು ಹಲ್ಲೆ ನಡೆಸಿದ ಬಗ್ಗೆ ಕೂಡ ಪ್ರದೋಷ್ ವಿಚಾರಣೆಯಲ್ಲಿ ವಿವರಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರದೋಷ್ ಅವರ ಹೇಳಿಕೆ ಮುಂದಿನ ವಿಚಾರಣೆಯಲ್ಲೂ ಪ್ರಮುಖವಾಗಿದ್ದು, ಅವರು ನೀಡಿರುವ ವಿವರಗಳನ್ನು ನ್ಯಾಯಾಲಯದ ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಲಾಗುತ್ತಿದೆ.

ಪ್ರಕರಣದ ಹಿನ್ನೆಲೆ: ರೇಣುಕಾಸ್ವಾಮಿ ಅವರು 2024ರ ಜೂನ್ 8ರಂದು ಬೆಂಗಳೂರಿನಲ್ಲಿ ಮೃತಪಟ್ಟಿದ್ದರು. ಚಿತ್ರದುರ್ಗ ಮೂಲದ 33 ವರ್ಷದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ತೂಗುದೀಪ, ಪವಿತ್ರಾ ಗೌಡ ಸೇರಿದಂತೆ ಹಲವು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

## ಜೆ.ಪಿ.ನಗರದ 9ನೇ ಹಂತ ಅಂಜನಾಪುರದಲ್ಲಿ ಚಿರತೆ ಓಡಾಟ, ನಾಗರಿಕರಲ್ಲಿ ಗಾಬರಿ



**ಬೆಂಗಳೂರು, ಸೆ.29:** ಜೆಪಿನಗರ 9ನೇ ಹಂತದ ಅಂಜನಾಪುರ ಪ್ರದೇಶದಲ್ಲಿ ಇಂದು ಮುಂಜಾನೆ ಚಿರತೆಯ ಓಡಾಟ ಕಂಡುಬಂದಿದ್ದು, ಸ್ಥಳೀಯರಲ್ಲಿ ಆತಂಕ ಸೃಷ್ಟಿಯಾಗಿದೆ. ಮಧ್ಯರಾತ್ರಿ ನಂತರ 2:10ರ ಸುಮಾರಿಗೆ ಚಿರತೆ ವಸತಿ ಪ್ರದೇಶದ ಮೂಲಕ ಹಾದುಹೋಗುತ್ತಿರುವುದು ಸಿಸಿಟಿವಿ ಯಲ್ಲಿ ಸೆರೆಯಾಗಿದೆ.

ಸ್ಥಳೀಯರ ಪ್ರಕಾರ, ಸ್ವತಂತ್ರ ಮನೆಗಳು ಮತ್ತು ಅಪಾರ್ಟ್‌ಮೆಂಟ್ ಸಂಕೀರ್ಣಗಳನ್ನು ಹೊಂದಿರುವ ಅಂಜನಾಪುರದ 7ನೇ ಬ್ಲಾಕ್‌ನಲ್ಲಿ ಒಂಟಿ ಚಿರತೆ ಕಂಡುಬಂದಿದೆ. ಕನಕಪುರ ರಸ್ತೆಯ ತಾತಗುಣಿ ಬಳಿಯಿರುವ ರೋರಿಚ್ ದೇವಿಕಾರಾಣಿ ಎಸ್ಟೇಟ್‌ನಿಂದ ಚಿರತೆ ಬಂದಿರುವ ಸಾಧ್ಯತೆಯೇ ಹೆಚ್ಚು. ರೋರಿಚ್ ದೇವಿಕರಾಣಿ ಎಸ್ಟೇಟ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ಹಲವಾರು ಚಿರತೆಗಳ ಆವಾಸ ಸ್ಥಾನವಾಗಿವೆ. ಅವುಗಳಲ್ಲಿ ಕೆಲವು ಆಗಾಗ್ಗೆ ನೈಸ್ ರಸ್ತೆಯನ್ನು ದಾಟಿ ಅಂಜನಾ ಪುರದ ವಸತಿ ಪ್ರದೇಶಗಳಿಗೆ ಪ್ರವೇಶಿಸುತ್ತವೆ. ಇಲ್ಲಿಯವರೆಗೆ ಅವು ಯಾರಿಗೂ ಹಾನಿ ಮಾಡಿಲ್ಲ; ಸಾಮಾನ್ಯವಾಗಿ ಅವು ಅಲೆದಾಡುವ ಪ್ರಾಣಿಗಳನ್ನು ಬೇಟೆಯಾಡಿ ಎಸ್ಟೇಟ್‌ಗೆ ಮರಳುತ್ತವೆ ಎಂದು ಬೆಂಗಳೂರು ನಗರ ಅರಣ್ಯ ವಿಭಾಗದ ಕಗ್ಗಲೀಪುರ ವಲಯದ ಹಿರಿಯ ಅರಣ್ಯ ಅಧಿಕಾರಿ ಯೊಬ್ಬರು ತಿಳಿಸಿದ್ದಾರೆ.

ಆ ಪ್ರದೇಶದಲ್ಲಿರುವ ಖಾಲಿ ನಿವೇಶನಗಳು ಮತ್ತು ದಟ್ಟವಾದ ಸಸ್ಯವರ್ಗವು ವನ್ಯಜೀವಿಗಳನ್ನು ಆಕರ್ಷಿಸುತ್ತಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿ ಕೊಂಡಿರುವ ಬಿ.ಎಂ.ಕಾವಲ್ ಮತ್ತು ರೋರಿಚ್ ದೇವಿಕಾರಾಣಿ ಎಸ್ಟೇಟ್ ಅರಣ್ಯ ಪ್ರದೇಶಗಳಿಂದ ಬರುವ ವನ್ಯಜೀವಿಗಳಿಗೆ, ಈ ನಿವೇಶನಗಳಲ್ಲಿ ಬೆಳೆದಿರುವ ದಟ್ಟವಾದ ಪೊದೆಗಳು ಸೂಕ್ತ ಆವಾಸಸ್ಥಾನವನ್ನು ಒದಗಿಸುತ್ತವೆ. ತುರಹಳ್ಳಿಯಿಂದ ಚಿರತೆಯೊಂದು ಇಷ್ಟು ದೂರ ಬರುವುದು ಅಸಾಧ್ಯ, ಏಕೆಂದರೆ ಅದು ಜನನಿಬಿಡ ಪ್ರದೇಶಗಳ ಮೂಲಕ ಹಾದುಹೋಗ ಬೇಕಾಗುತ್ತದೆ ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ.

# ನಾಳೆ ಬೆಂಗಳೂರು–ಭಾಗಮಂಡಲ ನಡುವೆ ರಾಜಹಂಸ ಬಸ್ ಸೇವೆ ಆರಂಭ

**ಬೆಂಗಳೂರು, ಸೆ.29:** ಪ್ರಯಾಣಿಕರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ವತಿಯಿಂದ ಬೆಂಗಳೂರು–ಭಾಗಮಂಡಲ ಮಾರ್ಗದಲ್ಲಿ ಅ.1 ರಿಂದ ನೂತನ ರಾಜಹಂಸ ಬಸ್ ಸೇವೆ ಆರಂಭಿಸಲಿದೆ.

ಶಾಂತಿನಗರ ಬಸ್ ನಿಲ್ದಾಣದಿಂದ ರಾತ್ರಿ 10.30ಕ್ಕೆ ಹೊರಡುವ ಬಸ್ ಮೈಸೂರು, ಹುಣಸೂರು, ಕುಶಾಲ ನಗರ, ಮಡಿಕೇರಿ ಹಾಗೂ ಕಾರಗುಂದ ಮಾರ್ಗವಾಗಿ ಬೆಳಗ್ಗೆ 6.15ಕ್ಕೆ ಭಾಗಮಂಡಲ ತಲುಪಲಿದೆ.



ಭಾಗಮಂಡಲದಿಂದ ರಾತ್ರಿ 8.30ಕ್ಕೆ ಹೊರಡುವ ಬಸ್ ಮಡಿಕೇರಿಗೆ ರಾತ್ರಿ 10ಕ್ಕೆ ತಲುಪಿ, ಅಲ್ಲಿಂದ ಮೈಸೂರು ರಸ್ತೆ ಬಸ್ ನಿಲ್ದಾಣದ ಮೂಲಕ ಬೆಳಗ್ಗೆ 4ಕ್ಕೆ ಶಾಂತಿನಗರ ಬಸ್ ನಿಲ್ದಾಣಕ್ಕೆ 4.30ಕ್ಕೆ ತಲುಪಲಿದೆ. ಬೆಂಗಳೂರು–ಮಡಿಕೇರಿ ಪ್ರಯಾಣಕ್ಕೆ ವಯಸ್ಕರಿಗೆ 545 ರೂ. ಹಾಗೂ ಮಕ್ಕಳಿಗೆ 296 ರೂ. ದರ ನಿಗದಿಪಡಿಸಲಾಗಿದೆ.

ಬೆಂಗಳೂರು–ಭಾಗಮಂಡಲ ಪ್ರಯಾಣಕ್ಕೆ ವಯಸ್ಕರಿಗೆ 608 ರೂ. ಮತ್ತು ಮಕ್ಕಳಿಗೆ 328 ರೂ. ದರ ಇರಲಿದೆ ಎಂದು ಕೆಎಸ್‌ಆರ್‌ಟಿಸಿ ಬೆಂಗಳೂರು ಕೇಂದ್ರೀಯ ವಿಭಾಗದ ಅಧಿಕಾರಿ ಗಳು ತಿಳಿಸಿದ್ದಾರೆ.


# ಅಳಿವಿನ ಅಂಚಿನಲ್ಲಿದೆ ಗ್ರೇಟ್ ನಿಕೋಬಾರ್ ದ್ವೀಪ

**ಬೆಂಗಳೂರು, ಸೆ.29:** ಸಮೃದ್ಧ ಮತ್ತು ಶ್ರೀಮಂತ ಪರಿಸರ ವ್ಯವಸ್ಥೆ ಹೊಂದಿರುವ ನಿಕೋಬಾರ್ ದ್ವೀಪ ಇದೀಗ ಅಳಿವಿನ ಅಂಚಿನಲ್ಲಿರುವ ದ್ವೀಪವಾಗಿದೆ ಎಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ಪರಿಸರ ಸಂಶೋಧಕ ಮತ್ತು ಲೇಖಕ ಪಂಕಜ್ ಸೇಖ್ಸಾರಿಯಾ ಕಳವಳ ವ್ಯಕ್ತಪಡಿಸಿದ್ದಾರೆ.

ನಗರದ ಐ.ಎಸ್.ಇ.ಸಿಯಲ್ಲಿ "ಗ್ರೇಟ್ ನಿಕೋಬಾರ್–ಅಂಚಿನಲ್ಲಿರುವ ದ್ವೀಪ" ಎಂಬ ವಿಷಯ ಕುರಿತು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿದ ಅವರು, ಪರಿಸರ ವಿಜ್ಞಾನ, ಭೂವಿಜ್ಞಾನ, ಸ್ಥಳೀಯ ಸಮುದಾಯಗಳು, ಕಾನೂನು, ಸಾರ್ವಜನಿಕ ಖರ್ಚು ಮತ್ತು ದೊಡ್ಡ ಪ್ರಮಾಣದ ಮೂಲಸೌಕರ್ಯದ ಆರ್ಥಿಕ ಕಾರ್ಯಸಾಧ್ಯತೆಗೆ ಅಲ್ಲಿ ಒತ್ತು ನೀಡಲಾಗಿದೆ.

ಪ್ರಸ್ತಾವಿತ ಅಭಿವೃದ್ಧಿಯಲ್ಲಿ ಅಂತರರಾಷ್ಟ್ರೀಯ ಕಂಟೇನರ್ ಟ್ರಾನ್ಸ್‌ಶಿಪ್‌ಮೆಂಟ್ ಟರ್ಮಿನಲ್, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಪಟ್ಟಣ ಮತ್ತು ವಿದ್ಯುತ್ ಸ್ಥಾವರ ಸೇರಿವೆ. ದ್ವೀಪದ ಸುಮಾರು 160 ಚದರ ಕಿ.ಮೀ ಅರಣ್ಯಪ್ರದೇಶದಲ್ಲಿ ಯೋಜನೆಯ ಪ್ರಮಾಣ ಬೃಹತ್ತಾಗಿದ್ದು, ದ್ವೀಪರಕ್ಷಣೆಗೆ ಇವು ಸೂಕ್ತವಲ್ಲ. ಇಲ್ಲಿ 1.3 ರಿಂದ 10 ದಶಲಕ್ಷ ಮರಗಳನ್ನು ಹೊಂದಿದ್ದು, ಜಾಗತಿಕವಾಗಿ ಗಮನಾರ್ಹವಾದ ಜೀವವೈವಿಧ್ಯತೆಯನ್ನು ಹೊಂದಿದೆ ಎಂದರು.

ಪ್ರಸ್ತಾವಿತ ಸಾಗಣೆ ಬಂದರಿನ ಆರ್ಥಿಕ ತಾರ್ಕಿಕತೆ, ಪರಿಸರ ಮತ್ತು ಅರಣ್ಯ ಅನುಮತಿಗಳು, ಸಾಂಸ್ಥಿಕ ಪ್ರಕ್ರಿಯೆಗಳು, ಸ್ಥಳೀಯ ಹಕ್ಕುಗಳು ಮತ್ತು ದುರ್ಬಲವಾದ ದ್ವೀಪ ಪರಿಸರ ವ್ಯವಸ್ಥೆಗಳಿಗೆ ಸಂಭಾವ್ಯ ಪರಿಣಾಮಗಳ ಕುರಿತು ಪಂಕಜ್ ಖಾರವಾಗಿ ಪ್ರಶ್ನಿಸಿದರು. ದ್ವೀಪ ಭೂಕಂಪ ಮತ್ತು ಸುನಾಮಿ ದುರ್ಬಲತೆಯನ್ನು ಒಳಗೊಂಡಿದೆ. 2004 ರ ಹಿಂದೂ ಮಹಾಸಾಗರದ ಸುನಾಮಿಯ ಸಮಯದಲ್ಲಿ ಗ್ರೇಟ್ ನಿಕೋಬಾರ್ ಕರಾವಳಿಯ ಕೆಲವು ಭಾಗಗಳಲ್ಲಿ ಸುಮಾರು 8 ಮೀಟರ್



ಸುನಾಮಿ ಅಲೆಗಳು ಮತ್ತು ದ್ವೀಪದ ದಕ್ಷಿಣ ಭಾಗದಲ್ಲಿ ಗಣನೀಯ ಪ್ರಮಾಣದ ಭೂ ಕುಸಿತ ಸೇರಿದಂತೆ 2005 ರ ಇಇಆರ್ ಐ ಭೂಕಂಪದಿಂದ ಬಾಧಿತವಾಗಿತ್ತು.

ಗಲಾಥಿಯಾ ಬೇ ಲೆದರ್‌ಬ್ಯಾಕ್ ಆಮೆ ಗೂಡುಕಟ್ಟುವ ಆವಾಸಸ್ಥಾನ, ಶೋಂಪೆನ್ ಮತ್ತು ನಿಕೋಬಾರೀಸ್ ಸೇರಿದಂತೆ ಸ್ಥಳೀಯ ಸಮುದಾಯಗಳು ಮತ್ತು ದೀರ್ಘಕಾಲೀನ ಪರಿಸರ ವ್ಯವಸ್ಥೆ, ವಿಪತ್ತು ಅಪಾಯದ ವಿರುದ್ಧ ಮೂಲಸೌಕರ್ಯ ನಿರ್ಧಾರಗಳನ್ನು ಮೌಲ್ಯಮಾಪನ ಮಾಡುವ ಪ್ರಾಮುಖ್ಯತೆಗೆ ನಿರ್ದಿಷ್ಟ ಗಮನ ನೀಡಲಾಯಿತು.

ಐಎಸ್‌ಇಸಿಯ ಪ್ರಾಧ್ಯಾಪಕ ಮತ್ತು ಸಿಇಎಸ್‌ಪಿ ಮುಖ್ಯಸ್ಥ ಪ್ರೊ. ಕೃಷ್ಣರಾಜ್ ಮಾತನಾಡಿ, ಪರಿಸರ ಕಾನೂನುಗಳು, ಕರಾವಳಿ ನಿಯಂತ್ರಣ ವಲಯ ಕಾಯ್ದೆ ಮತ್ತು ಅರಣ್ಯ ಹಕ್ಕುಗಳ ಕಾಯ್ದೆಯನ್ನು ಉಲ್ಲಂಘಿಸಲಾಗಿದೆ. ನಿಕೋಬಾರ್‌ನ ಕಚ್ಚಾ ಕಾಡುಗಳ ಮೇಲೆ ಹೇರಲಾದ ಅವೈಜ್ಞಾನಿಕ ಮತ್ತು ಸಂಪೂರ್ಣವಾಗಿ ವಾಣಿಜ್ಯ ಯೋಜನೆಗಳು ದ್ವೀಪಕ್ಕೆ ಮಾರಕವಾಗಿವೆ. ಗ್ರೇಟ್ ನಿಕೋಬಾರ್ ಯೋಜನೆಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಇಲ್ಲ, ಇದು ಕೇವಲ ರಕ್ಷಣಾ ಅಥವಾ ಕಾರ್ಯತಂತ್ರದ ಯೋಜನೆಯಲ್ಲ. ಆದರೆ ಕೆಲವು ಕಾರ್ಪೊರೇಟ್‌ಗಳಿಗೆ ಲಾಭ ತರುವ ವಾಣಿಜ್ಯ ಯೋಜನೆಯಾಗಿದೆ ಎಂದು ಅವರು ಟೀಕಿಸಿದರು.

# ನೆನಪಿನ ಶಕ್ತಿ, ಸ್ಮಾರ್ಟ್ ಅಧ್ಯಯನ, ವೇಗದ ಓದುವಿಕೆಗೆ ಹೊಸ ದಾರಿ ತೋರಿಸುತ್ತಿರುವ ರಂಗಲಕ್ಷ್ಮಿ ಶ್ರೀನಿವಾಸ

**ಬೆಂಗಳೂರು, ಸೆ.29:** ವಿದ್ಯಾರ್ಥಿ ಗಳ ನೆನಪಿನ ಶಕ್ತಿ, ಸ್ಮಾರ್ಟ್ ಅಧ್ಯಯನ ಮತ್ತು ವೇಗದ ಓದುವಿಕೆ ತಂತ್ರಗಳಲ್ಲಿ ಮಾನ್ಯತೆ ಪಡೆದ ತರಬೇತುದಾರರು [Certified Memory Technique Trainer], ನಗೆ ಯೋಗದಲ್ಲಿ ಗಿನ್ನೆಸ್, ಏಷ್ಯಾ ವಿಶ್ವದಾಖಲೆ ನಿರ್ಮಿಸಿರುವ ರಂಗಲಕ್ಷ್ಮಿ ಶ್ರೀನಿವಾಸ ಸ್ಮಾರ್ಟ್ ಅಧ್ಯಯನಕ್ಕಾಗಿ ಆನ್‌ಲೈನ್ ತರಗತಿಗಳನ್ನು ಆರಂಭಿಸಿ ದ್ದಾರೆ.

ವೇಗದ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಹಾಗೂ ವೃತ್ತಿಪರರು ಹೆಚ್ಚು ಮಾಹಿತಿಯನ್ನು ಕಡಿಮೆ ಸಮಯದಲ್ಲಿ ಕಲಿತು, ಅರ್ಥ ಮಾಡಿಕೊಂಡು, ಅಗತ್ಯವಿದ್ದಾಗ ಸ್ಮರಣ ಶಕ್ತಿಯಿಂದ ಹೊರತೆಗೆದು ಬಳಸುವ ಸಾಮರ್ಥ್ಯ ಹೊಂದಿರುವುದು ಅತ್ಯಂತ ಮುಖ್ಯವಾಗಿದೆ. ಗಂಟೆಗಟ್ಟಲೆ ಓದುವುದಕ್ಕಿಂತ ಸರಿಯಾದ ವಿಧಾನದಲ್ಲಿ ಓದುವುದು ಮತ್ತು ಕಲಿಯುವುದು ಹೆಚ್ಚು ಪರಿಣಾಮಕಾರಿ ಎಂದು ಹೇಳಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, 5ನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆಗೆ ಆನ್ ಲೈನ್ ತರಗತಿಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಸ್ಮರಣ ತಂತ್ರಗಳು, ಅಧ್ಯಯನ ಕೌಶಲ್ಯ ಮತ್ತು ವೇಗದ ಓದುವಿಕೆಯಲ್ಲಿ ತರಬೇತಿ ನೀಡುತ್ತಿರುವ ರಂಗಲಕ್ಷ್ಮಿ ಶ್ರೀನಿವಾಸ ಅವರು ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷಾ ಆಕಾಂಕ್ಷಿಗಳು, ಪೋಷಕರು ಹಾಗೂ ವೃತ್ತಿಪರರಿಗೆ ಪರಿಣಾಮಕಾರಿ ಕಲಿಕಾ ತಂತ್ರಗಳನ್ನು ಪರಿಚಯಿಸಿದ್ದಾರೆ. 'ಹೆಚ್ಚು ಸಮಯ ಓದುವುದಲ್ಲ, ಬದಲಿಗೆ ಸ್ಮಾರ್ಟ್ ಆಗಿ ಓದುವುದು ಮುಖ್ಯ' ಅನೇಕ



ವಿದ್ಯಾರ್ಥಿಗಳು ಸಾಕಷ್ಟು ಸಮಯ ಓದಿದರೂ ಓದಿದ್ದು ನೆನಪಿನಲ್ಲಿ ಉಳಿಯದಿರುವುದು, ಪದೇಪದೇ ಪುನರಾವರ್ತನೆ ಮಾಡಬೇಕಾಗುವುದು, ಓದುವಾಗ ಗಮನ ಕಡಿಮೆಯಾಗುವುದು, ದೊಡ್ಡ ಪ್ರಮಾಣದ ಪಠ್ಯವನ್ನು ನಿರ್ವಹಿಸಲು ಕಷ್ಟವಾಗುವ ಸಮಸ್ಯೆಗಳನ್ನು ಎದುರಿಸುವುದಾಗಿ ತಿಳಿಸಿದ್ದಾರೆ.

ಇಂತಹ ಸಂದರ್ಭಗಳಲ್ಲಿ ಕೇವಲ ಹೆಚ್ಚು ಸಮಯ ಓದಲು ಹೇಳುವುದಕ್ಕಿಂತ, ಹೇಗೆ ಓದಬೇಕು, ಹೇಗೆ ನೆನಪಿಟ್ಟುಕೊಳ್ಳಬೇಕು ಮತ್ತು ಹೇಗೆ ವೇಗವಾಗಿ ಓದಿ ಅರ್ಥ ಮಾಡಿಕೊಳ್ಳಬೇಕು ಎಂಬ ಕೌಶಲ್ಯಗಳನ್ನು ಕಲಿಸುವುದು ಮುಖ್ಯ. ದಿನನಿತ್ಯ ವಿದ್ಯಾರ್ಥಿಗಳು ಅಪಾರ ಪ್ರಮಾಣದಲ್ಲಿ ಕಲಿಯಬೇಕಾಗುತ್ತದೆ.

ಮಾಹಿತಿಯನ್ನು ಕೇವಲ ಪುನರಾವರ್ತಿಸುವ ಬದಲು, ಅದನ್ನು ಸಂಬಂಧಿಸಿ, ಸಂಘಟಿಸಿ ಮತ್ತು ಸೂಕ್ತ ಸ್ಮರಣ ತಂತ್ರಗಳನ್ನು ಬಳಸಿ ನೆನಪಿನಲ್ಲಿ ಉಳಿಸಿಕೊಳ್ಳುವ ವಿಧಾನಗಳನ್ನು ತರಬೇತಿಯಲ್ಲಿ ಪರಿಚಯಿಸಲಾಗಿದೆ. ಇದು ಪಠ್ಯ ವಿಷಯಗಳ ಜೊತೆಗೆ ಪರೀಕ್ಷಾ ಸಿದ್ಧತೆ ಮತ್ತು ಹೆಚ್ಚಿನ ಮಾಹಿತಿಯನ್ನು ನಿರ್ವಹಿಸುವ ಅಗತ್ಯವಿರುವ ಕ್ಷೇತ್ರಗಳಲ್ಲಿಯೂ ಉಪಯುಕ್ತ ವಾಗಬಹುದು ಎಂದು ಹೇಳಿದ್ದಾರೆ.

ಸ್ಮಾರ್ಟ್ ಅಧ್ಯಯನ ಕೌಶಲ್ಯದಲ್ಲಿ ಓದುವ ವಿಧಾನದಲ್ಲೇ ಬದಲಾವಣೆ ಮಾಡಿಕೊಳ್ಳಬೇಕಾಗಿದೆ. ಎಷ್ಟು ಗಂಟೆ ಓದಿದೆ ಎನ್ನುವುದಕ್ಕಿಂತ ಓದಿದ ಸಮಯವನ್ನು ಎಷ್ಟು ಪರಿಣಾಮಕಾರಿಯಾಗಿ ಬಳಸಿದೆ ಎಂಬುದು ಮುಖ್ಯ. ಸರಿಯಾದ ಯೋಜನೆ, ಗಮನ ಕೇಂದ್ರೀಕರಿಸುವ, ಟಿಪ್ಪಣಿ ಮಾಡಿಕೊಳ್ಳುವ, ಪುನರಾವರ್ತನೆ ಮತ್ತು ಕಲಿಕೆ ತಂತ್ರಗಳ ಮೂಲಕ ವಿದ್ಯಾರ್ಥಿಗಳು ತಮ್ಮ ಅಧ್ಯಯನ ಸಮಯವನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿ ಕೊಳ್ಳಬಹುದು.

ಹೆಚ್ಚುತ್ತಿರುವ ಪಠ್ಯಭಾರ ಮತ್ತು ಮಾಹಿತಿಯ ಪ್ರಮಾಣದ ಹಿನ್ನೆಲೆಯಲ್ಲಿ ವೇಗವಾಗಿ ಓದುವ ಸಾಮರ್ಥ್ಯವೂ ಮಹತ್ವ ಪಡೆದುಕೊಂಡಿದೆ ಎಂದು ತಿಳಿಸಿದ್ದಾರೆ.

ಓದುವ ವೇಗ ಸಮಗ್ರ ಮತ್ತು ಮಾಹಿತಿ ಸಂಸ್ಕರಣಾ ತಂತ್ರಗಳನ್ನು ಅಭ್ಯಾಸ ಮಾಡಿಸಲಾಗುವುದು. ಈ ರೀತಿಯ ಕಲಿಕಾ ಕೌಶಲ್ಯ ಕೇವಲ ಶಾಲಾ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿಲ್ಲ. ಕಾಲೇಜು ವಿದ್ಯಾರ್ಥಿಗಳು, ಪದವಿ ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಗಳ ಆಕಾಂಕ್ಷಿಗಳು, ಉದ್ಯೋಗಿಗಳು, ವೃತ್ತಿಪರರು ಹಾಗೂ ಜೀವನಪೂರ್ತಿ ಕಲಿಯಲು ಬಯಸುವವರಿಗೂ ಇವು ಸಹಾಯಕವಾಗಲಿದೆ. ಕಲಿಕೆಯನ್ನು ಒಂದು ಕೌಶಲ್ಯವಾಗಿ ನೋಡುವ ಸಮಯ ಬಂದಿದೆ.

> **ಮಾಹಿತಿಯನ್ನು ಕೇವಲ ಪುನರಾವರ್ತಿಸುವ ಬದಲು, ಅದನ್ನು ಸಂಬಂಧಿಸಿ, ಸಂಘಟಿಸಿ ಮತ್ತು ಸೂಕ್ತ ಸ್ಮರಣ ತಂತ್ರಗಳನ್ನು ಬಳಸಿ ನೆನಪಿನಲ್ಲಿ ಉಳಿಸಿಕೊಳ್ಳುವ ವಿಧಾನಗಳನ್ನು ತರಬೇತಿಯಲ್ಲಿ ಪರಿಚಯಿಸಲಾಗಿದೆ. ಇದು ಪಠ್ಯ ವಿಷಯಗಳ ಜೊತೆಗೆ ಪರೀಕ್ಷಾ ಸಿದ್ಧತೆ ಮತ್ತು ಹೆಚ್ಚಿನ ಮಾಹಿತಿಯನ್ನು ನಿರ್ವಹಿಸುವ ಅಗತ್ಯವಿರುವ ಕ್ಷೇತ್ರಗಳಲ್ಲಿಯೂ ಉಪಯುಕ್ತ ವಾಗಬಹುದು.**

ಪ್ರತಿಯೊಬ್ಬರಿಗೂ ಕಲಿಯುವ ಸಾಮರ್ಥ್ಯವಿದೆ. ಆದರೆ ಸರಿಯಾದ ಕಲಿಕಾ ತಂತ್ರಗಳು ಮತ್ತು ನಿರಂತರ ಅಭ್ಯಾಸದ ಮೂಲಕ ಆ ಸಾಮರ್ಥ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು ಎಂದು ರಂಗಲಕ್ಷ್ಮಿ ಶ್ರೀನಿವಾಸ ಹೇಳಿದ್ದಾರೆ.

## ದಕ್ಷಿಣ ಒಳನಾಡಿನಲ್ಲಿ ಎರಡು ದಿನ ಭಾರಿ ಮಳೆ ನಿರೀಕ್ಷೆ

**ಬೆಂಗಳೂರು, ಸೆ.29:** ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ಮುಂದಿನ ಎರಡು ದಿನಗಳ ಕಾಲ ಬಿರುಗಾಳಿ ಸಹಿತ ಮಳೆಯ ಮುನ್ಸೂಚನೆ ನೀಡಲಾಗಿದೆ. ಮಂಗಳವಾರ ರಾಜ್ಯದ ಆರು ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಜಾರಿಯಲ್ಲಿತ್ತು ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಬೆಂಗಳೂರು ಕೇಂದ್ರದ ದೈನಂದಿನ ಹವಾಮಾನ ವರದಿ ಪ್ರಕಾರ, ಮಂಗಳವಾರ ಚಾಮರಾಜನಗರ, ಚಿಕ್ಕಮಗಳೂರು, ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಒಂದೆರಡು ಕಡೆ ಭಾರೀ ಮಳೆಯಾಗುವ ಸಾಧ್ಯತೆ ಇದ್ದು, ಗುಡುಗು–ಮಿಂಚು ಸಮೇತ ಗಂಟೆಗೆ 30–40 ಕಿಲೋಮೀಟರ್ ವೇಗದಲ್ಲಿ ಬಿರುಗಾಳಿ ಬೀಸುವ ಸಾಧ್ಯತೆಯಿದೆ. ಇದೇ ವೇಳೆ ಮಲ್ಲೇಶ್ವರಂ ನಲ್ಲಿ ಬೃಹತ್ ಮರವೊಂದು ಕಾರುಗಳ ಮೇಲೆ ಬಿದ್ದಿದೆ. ನಗರದ ಹಲವು ಕಡೆಗಳಲ್ಲಿ ಮಳೆಯಿಂದ ಸಂಚಾರ ವ್ಯತ್ಯಯಗೊಂಡಿದ್ದು, ನಾಗರಿಕರು ಎಚ್ಚರಿಕೆಯಿಂದ ಸಂಚರಿಸುವಂತೆ ಸೂಚಿಸಲಾಗಿದೆ.

### ಕಾಂಗ್ರೆಸ್ ಪಕ್ಷ ಸಂಘಟನೆ ಉದ್ದೇಶದಿಂದ ಭಾರತ್ ಜೋಡೋ 2 ಪಾದಯಾತ್ರೆ

# ಶಿಕಾರಿಪುರದಲ್ಲಿ ಇಂದು ವಿಧ್ಯುಕ್ತ ಚಾಲನೆ: ಶಾಸಕ ಬೇಳೂರು ಗೋಪಾಲಕೃಷ್ಣ

**ಸಾಗರ, ಸೆ.29:** ಕಾಂಗ್ರೆಸ್ ಪಕ್ಷದ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಎರಡನೇ ಹಂತದ 'ಭಾರತ್ ಜೋಡೋ-2' ಪಾದಯಾತ್ರೆಯು ಬುಧವಾರ ಶಿಕಾರಿಪುರದಿಂದ ಅಧಿಕೃತವಾಗಿ ಚಾಲನೆಗೊಳ್ಳಲಿದೆ ಎಂದು ಸಾಗರ ವಿಧಾನಸಭಾ ಕ್ಷೇತ್ರದ ಶಾಸಕ ಬೇಳೂರು ಗೋಪಾಲಕೃಷ್ಣ ತಿಳಿಸಿದ್ದಾರೆ.

ಸಾಗರ ನಗರದ ಕಾಂಗ್ರೆಸ್ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. **ರಾಹುಲ್ ಗಾಂಧಿ ಯಾತ್ರೆಯಿಂದ ಪಕ್ಷಕ್ಕೆ ಬಲ:** ಈ ಹಿಂದೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆಸಿದ ಭಾರತ್ ಜೋಡೋ ಯಾತ್ರೆಯು ಇಡೀ ದೇಶದಲ್ಲಿ ಹೊಸ ಸಂಚಲನ ಮೂಡಿಸಿತ್ತು. ಆ ಯಾತ್ರೆಯು ರಾಜ್ಯದ ಚಾಮರಾಜನಗರದ ಮೂಲಕ ಪ್ರವೇಶಿಸಿ ಬಳ್ಳಾರಿ ಗಡಿ ದಾಟಿ ಆಂಧ್ರಪ್ರದೇಶಕ್ಕೆ ಸಾಗುವ ವೇಳೆ ರಾಜ್ಯ ಕಾಂಗ್ರೆಸ್ ಘಟಕಕ್ಕೆ ಅಭೂತಪೂರ್ವ ಶಕ್ತಿ ತಂದುಕೊಟ್ಟಿತ್ತು. ಈ ಸಂಘಟನಾತ್ಮಕ ಶಕ್ತಿಯ ಫಲವಾಗಿಯೇ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು 135 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬರಲು ಸಾಧ್ಯವಾಯಿತು ಎಂದು ಅವರು ಸ್ಮರಿಸಿದರು.

**ಶಿಕಾರಿಪುರದಿಂದಲೇ ಪಾದಯಾತ್ರೆ ಆರಂಭಕ್ಕೆ ಕಾರಣ:** ಜನಾರ್ದನರೆಡ್ಡಿಯ ಅಕ್ರಮ ಗಣಿಗಾರಿಕೆಯ ಹಗರಣಗಳನ್ನು ಮುಚ್ಚಿಹಾಕಲು ಮತ್ತು ರಾಜ್ಯದಲ್ಲಿ ಬಿ.ವೈ. ವಿಜಯೇಂದ್ರ ಅವರ ಅಸ್ತಿತ್ವ ಉಳಿಸಿಕೊಳ್ಳಲು ಬಳ್ಳಾರಿಯಲ್ಲಿ ಅಂದು ನಾಗೇಂದ್ರ ವಿರುದ್ಧ ಪಾದಯಾತ್ರೆ ಮಾಡಲಾಗಿತ್ತು. ರೆಡ್ಡಿಯವರು ಮೂರು-ನಾಲ್ಕು ವರ್ಷ ಜೈಲಿನಲ್ಲಿದ್ದು ಬಂದರೂ ಅವರ ಪಾಪದ ಕೊಡ ಇನ್ನೂ ತುಂಬಿಲ್ಲ. ಅಂತಹವರ ವಿರುದ್ಧ ಮತ್ತು ವಿಜಯೇಂದ್ರ ಅವರ ರಾಜಕೀಯ ಅಸ್ತಿತ್ವದ ವಿರುದ್ಧ ಹೋರಾಟ ನಡೆಸುವ ದೃಷ್ಟಿಯಿಂದಲೇ ಕಾಂಗ್ರೆಸ್ ಪಕ್ಷವು ಶಿಕಾರಿಪುರದಿಂದಲೇ ಈ ಐತಿಹಾಸಿಕ ಪಾದಯಾತ್ರೆ ಮತ್ತು ಹೋರಾಟವನ್ನು ಆರಂಭಿಸಲು ತೀರ್ಮಾನಿಸಿದೆ ಎಂದು ಶಾಸಕರು ಸ್ಪಷ್ಟಪಡಿಸಿದರು.

**ಪಾದಯಾತ್ರೆಯ ಹಾದಿ ಮತ್ತು ಜಿಲ್ಲೆಯ ಕ್ಷೇತ್ರಗಳು:** ನಾಳೆ ಬೆಳಿಗ್ಗೆ 9:30ಕ್ಕೆ ಶಿಕಾರಿಪುರದ ಹುಚ್ಚುರಾಯಸ್ವಾಮಿ ದೇವಸ್ಥಾನ/ಗುಡ್ಡದನಹಳ್ಳಿಯಿಂದ ಸುಮಾರು 10 ಕಿಲೋಮೀಟರ್ ದೂರದ ಪಾದಯಾತ್ರೆಗೆ ಚಾಲನೆ ದೊರೆಯಲಿದೆ. ರಾಜ್ಯದಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸಿರುವ ಸುಮಾರು 80 ರಿಂದ 81 ವಿಧಾನಸಭಾ ಕ್ಷೇತ್ರಗಳಲ್ಲಿ ಈ ಯಾತ್ರೆ ಸಂಚರಿಸಲಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಶಿಕಾರಿಪುರ, ಶಿವಮೊಗ್ಗ ಗ್ರಾಮಾಂತರ, ಶಿವಮೊಗ್ಗ ನಗರ ಹಾಗೂ ತೀರ್ಥಹಳ್ಳಿ ಸೇರಿದಂತೆ ಒಟ್ಟು ನಾಲ್ಕು ಕ್ಷೇತ್ರಗಳಲ್ಲಿ ಪಾದಯಾತ್ರೆ ಮತ್ತು ಬೃಹತ್ ಬಹಿರಂಗ ಸಮಾವೇಶಗಳು ನಡೆಯಲಿವೆ. ಬಳಿಕ ಈ ಯಾತ್ರೆಯು ದಾವಣಗೆರೆ ಜಿಲ್ಲೆಯತ್ತ ಸಾಗಲಿದ್ದು, ಕಾರ್ಯಕ್ರಮದಲ್ಲಿ ಸಾಗರ, ಹೊಸನಗರ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕುಗಳ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಅವರು ಕರೆ ನೀಡಿದರು.



**ಸಾಗರ ಹಾಗೂ ಹೊಸನಗರವನ್ನು ಬರಪೀಡಿತ ಎಂದು ಘೋಷಿಸಲು ಆಗ್ರಹ:** ಮಲೆನಾಡು ಭಾಗದಲ್ಲಿ ಪ್ರತಿವರ್ಷವೂ ವಾಡಿಕೆಯಂತೆ ಮಳೆಯಾಗುತ್ತಿತ್ತು, ಆದರೆ ಈ ವರ್ಷ ಶೇಕಡಾ 50 ರಷ್ಟು ಮಾತ್ರ ಮಳೆಯಾಗಿದ್ದು ತೀವ್ರ ನೀರಿನ ಕೊರತೆ ಎದುರಾಗಿದೆ.

ಆಗುಂಬೆ ಬಿಟ್ಟರೆ ಅತಿಹೆಚ್ಚು ಮಳೆ ಬೀಳುತ್ತಿದ್ದ ಸಾಗರ ಮತ್ತು ಹೊಸನಗರ ಭಾಗದಲ್ಲೇ ಇಂತಹ ಭೀಕರ ಸ್ಥಿತಿ ನಿರ್ಮಾಣವಾಗಿರುವುದು ದುರಂತದ ಸಂಗತಿಯಾಗಿದೆ. ಈಗಾಗಲೇ ಸರ್ಕಾರ ರಾಜ್ಯದ 100ಕ್ಕೂ ಹೆಚ್ಚು ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದ್ದು, ಸಾಗರ ಮತ್ತು ಹೊಸನಗರ ತಾಲೂಕುಗಳನ್ನೂ ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡಬೇಕೆಂದು ಮುಖ್ಯಮಂತ್ರಿಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಲಿಖಿತ ಪತ್ರ ಬರೆದು ಮನವಿ ಸಲ್ಲಿಸಲಾಗಿದೆ. ಈ ಕುರಿತು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಸಾಗರ, ತೀರ್ಥಹಳ್ಳಿ ಹಾಗೂ ಹೊಸನಗರದಲ್ಲಿ ಕಂದಾಯ ಮತ್ತು ಕೃಷಿ ಇಲಾಖೆಗಳಿಂದ ಜಂಟಿ ಸರ್ವೆ ನಡೆಯುತ್ತಿದೆ, ವರದಿ ಬಂದ ಕೂಡಲೇ ಬರ ಘೋಷಣೆಗೆ ಶಿಫಾರಸು ಮಾಡುವುದಾಗಿ ಭರವಸೆ ನೀಡಿದ್ದಾರೆ ಎಂದರು.

**ಯುವಜನತೆಯ ಸಬಲೀಕರಣಕ್ಕೆ 'ಭಾರತ್ ಜೋಡೋ ಸಂಘಟನೆ':** ರಾಜ್ಯದ ಯುವಜನರಲ್ಲಿ ನಾಯಕತ್ವದ ಗುಣ, ಸಾಮಾಜಿಕ ಜವಾಬ್ದಾರಿ ಹಾಗೂ ಸಂವಿಧಾನದ ಮೌಲ್ಯಗಳನ್ನು ಬೆಳೆಸುವ ಸದುದ್ದೇಶದಿಂದ ಮುಖ್ಯಮಂತ್ರಿಗಳು ರಾಜ್ಯಾದ್ಯಂತ 'ಭಾರತ್ ಜೋಡೋ' ಹೆಸರಿನಲ್ಲಿ ಸುಮಾರು 10,000 ಯುವಕರ ಸಂಘಟನೆಗಳನ್ನು ರಚಿಸಲು ಆದೇಶ ಹೊರಡಿಸಿದ್ದಾರೆ. 16 ರಿಂದ 35 ವರ್ಷ ವಯಸ್ಸಿನ ಯುವಕ-ಯುವತಿಯರು ಪ್ರತಿ ಗ್ರಾಮ ಪಂಚಾಯತಿ ಅಥವಾ ನಗರದ ವಾರ್ಡ್‌ಗಳಲ್ಲಿ 100 ರಿಂದ 200 ಸದಸ್ಯರನ್ನೊಳಗೊಂಡ ಸಂಘಗಳನ್ನು ಸ್ಥಾಪಿಸಿಕೊಳ್ಳಬಹುದು.

# ತಡವಾಗಿ ಬಂದ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದ ಸಿಇಓ



**ಬೀದರ್, ಸೆ. 29 :** ಕಚೇರಿಗೆ ಸಮಯಕ್ಕೆ ಸರಿಯಾಗಿ ಬಾರದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಜಿಲ್ಲಾ ಪಂಚಾಯತ್‌ಗೆ ಇತ್ತೀಚೆಗೆ ಹೊಸದಾಗಿ ಬಂದಿರುವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಿತ್ತೆ ಮಾಧವ್ ವಿಠಲರಾವ್ ಅವರು ಬಿಸಿ ಮುಟ್ಟಿಸಿದ್ದಾರೆ. ಕಚೇರಿಗೆ ದಿಢೀರ್ ಭೇಟಿ ನೀಡಿದರು.

'ರಿಯಾಲಿಟಿ ಚೆಕ್' ನಡೆಸಿದ ಅವರು, ಕಚೇರಿ ಗೇಟ್ ಬಳಿಯೇ ನಿಂತು ವಿಳಂಬವಾಗಿ ಬಂದ ಅಧಿಕಾರಿಗಳಿಗೆ ಗೇಟ್ ಬಳಿಯೇ ತರಾಟೆಗೆ ತೆಗೆದುಕೊಂಡರು. ನಾನು ಎಸಿ ರೂಮಲ್ಲಿ ಕುಳಿತು ಕೆಲಸ ಮಡುವವನಲ್ಲ. ಪ್ರತಿ ಕಚೇರಿಗಳಿಗೂ ಭೇಟಿ ನೀಡಿ ಕಚೇರಿಗಳ ವ್ಯವಹಾರಗಳನ್ನು ಖುದ್ದಾಗಿ ನೋಡುತ್ತೇನೆ. ಸಿಬ್ಬಂದಿಗಳ ಹಾಜರಾತಿ ಕೂಡ ಗಮನಿಸುತ್ತೇನೆ. ಕೆಲಸ ಮಾಡುವವರು ಮೈಗಳ್ಳತನ ತೋರುವವರು ಮತ್ತು ಕೆಲಸ ಮಾಡುವವರನ್ನೂ ಗುರುತಿಸಬಲ್ಲ ಎಂದು ಎಚ್ಚರಿಕೆ ನಿಡಿದ ಘಟನೆ ನಡೆದಿದೆ. ಅಧಿಕಾರಿಗಳ ಕರ್ತವ್ಯ ನಿಷ್ಠೆ ಕುರಿತು ರಿಯಾಲಿಟಿ ಚೆಕ್ ಮಾಡಲು ಮುಂದಾದ ಸಿಇಓ ಗಿತ್ತೆ ಮಾಧವ್ ವಿಠ್ಠಲರಾವ್ ಅವರು, ಬೆಳಿಗ್ಗೆ ಸರಿಯಾಗಿ 10 ಗಂಟೆಗೆ ಜಿ.ಪಂ. ಕಚೇರಿಗೆ ಆಗಮಿಸಿ, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಕಚೇರಿಗೆ ಬಂದು ತಮ್ಮ ಆಸನಗಳಲ್ಲಿ ಕುಳಿತಿದ್ದಾರೆಯೇ ಎಂದು ಪರಿಶೀಲನೆ ನಡೆಸಿದರು. ಆದರೆ, ಬಹುತೇಕ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಕಚೇರಿಗೆ ಹಾಜರಾಗದೆ ತಮ್ಮ ಮನಸೋ ಇಚ್ಛೆ ಬರುತ್ತಿರುವುದನ್ನು ಗಮನಿಸಿದರು.

### ವೇತನ ಕಡಿತದ ಎಚ್ಚರಿಕೆ

**ಪ್ರತಿದಿನ ಜಿ.ಪಂ.ನ ಎಲ್ಲಾ ಶಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಡ್ಡಾಯವಾಗಿ ನಿಗದಿತ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗಬೇಕು. ಮುಂದಿನ ದಿನಗಳಲ್ಲಿ ಮತ್ತೆ ಇದೇ ರೀತಿ ತಪ್ಪು ಮರುಕಳಿಸಿದರೆ ಯಾವುದೇ ಸಮಜಾಯಿಷಿ ಕೇಳದೆ ನೇರವಾಗಿ ಒಂದು ದಿನದ ವೇತನ ಕಡಿತಗೊಳಿಸಲಾಗುವುದು ಎಂದು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.**

ಖುದ್ದಾಗಿ ಗೇಟ್ ಬಳಿ ನಿಂತ ಸಿಇಓ: ಸಿಬ್ಬಂದಿಯ ನಿರ್ಲಕ್ಷ್ಯದಿಂದ ಅಸಮಾಧಾನಗೊಂಡ ಸಿಇಓ ತಕ್ಷಣವೇ ಜಿಲ್ಲಾ ಪಂಚಾಯತ್ ಕಚೇರಿಯ ಮುಖ್ಯ ಗೇಟ್ ಅನ್ನು ಮುಚ್ಚಿಸಿದರು. ಬಳಿಕ ತಾವೇ ಖುದ್ದಾಗಿ ಗೇಟ್ ಬಳಿ ನಿಂತು, ತಡವಾಗಿ ಬಂದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಸಾಲಾಗಿ ನಿಲ್ಲಿಸಿ ತೀವ್ರ ತರಾಟೆಗೆ ತೆಗೆದುಕೊಂಡರು.

'ಕರ್ತವ್ಯ' ಆ್ಯಪ್ ಬಳಕೆ ಕಡ್ಡಾಯ : 'ಸಮಯಕ್ಕೆ ಸರಿಯಾಗಿ ಕಚೇರಿಗೆ ಏಕೆ ಬಂದಿಲ್ಲ' ಎಂದು ಅನೇಕ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನೇರವಾಗಿ ಪ್ರಶ್ನಿಸಿದ ಸಿಇಓ, ಒಂದು ವೇಳೆ ಅಧಿಕಾರಿಗಳು ಕ್ಷೇತ್ರ ಭೇಟಿಗೆ (ಫೀಲ್ಡ್ ವರ್ಕ್) ಹೋಗಿದ್ದಲ್ಲಿ, ಆ ಬಗ್ಗೆ 'ಕರ್ತವ್ಯ' ಆ್ಯಪ್‌ನಲ್ಲಿ ದಾಖಲಿಸಿದ್ದೀರಾ? ಎಂದು ಕಟುವಾಗಿ ಪ್ರಶ್ನಿಸಿ, ವಿಳಂಬಕ್ಕೆ ಸೂಕ್ತ ಕಾರಣ ನೀಡುವಂತೆ ಸೂಚಿಸಿದರು. ಅಲ್ಲದೆ, ಪ್ರತಿಯೊಬ್ಬರೂ ಕಡ್ಡಾಯವಾಗಿ 'ಕರ್ತವ್ಯ' ಆ್ಯಪ್ ಮೂಲಕವೇ ನಿಗದಿತ ಸಮಯಕ್ಕೆ ಹಾಜರಾತಿ ದಾಖಲಿಸಬೇಕು ಇಲ್ಲವಾದಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

# ದಾಳಿ ನಡೆಸಿದ ಆನೆ ಬನ್ನೇರುಘಟ್ಟ ಅರಣ್ಯಕ್ಕೆ



**ಆನೇಕಲ್, ಸೆ.29:** ನಗರದ ಹೊರವಲಯದಲ್ಲಿ ಮಾನವ-ವನ್ಯಜೀವಿ ಸಂಘರ್ಷಕ್ಕೆ ಕಾರಣವಾಗಿದ್ದ ಕಾಡಾನೆಯನ್ನು ಬನ್ನೇರುಘಟ್ಟ ಅರಣ್ಯಕ್ಕೆ ಹಿಮೆಟ್ಟಿಸುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಬಿಎಂ ಕಾವಲು ಮೀಸಲು ಅರಣ್ಯ ಪ್ರದೇಶದಲ್ಲಿ ಬೀಡುಬಿಟ್ಟಿದ್ದ ಒಂಟಿ ಸಲಗವನ್ನು ರಾತ್ರಿ ವೇಳೆ ಥರ್ಮಲ್ ಡ್ರೋನ್‌ಗಳ ಮೂಲಕ ಪತ್ತೆಹಚ್ಚಿ, ನಿಗದಿತ ಆನೆ ಸಂಚಾರ ಮಾರ್ಗದ ಮೂಲಕ ಬನ್ನೇರುಘಟ್ಟ ಅರಣ್ಯದತ್ತ ಕಳುಹಿಸಲಾಗಿದೆ.

ಅಂಚೆಪಾಳ್ಯದೊಡ್ಡಬೆಲೆ ಭಾಗದಲ್ಲಿ ನಿನ್ನೆ ಮುಂಜಾನೆ ಕಾಡಾನೆ ದಾಳಿಗೆ ನಾಗರಾಜು (60) ಎಂಬುವವರು ಮತಪಟ್ಟ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆಗೆ ಹೆಚ್ಚಿನ ಮಹತ್ವ ಬಂದಿದೆ. ಈ ಘಟನೆಯ ಬಳಿಕ ಅರಣ್ಯ ಇಲಾಖೆ ಆನೆಯ ಚಲನವಲನವನ್ನು ಪತ್ತೆಹಚ್ಚಲು ವಿಶೇಷ ತಂಡಗಳನ್ನು ನಿಯೋಜಿಸಿತ್ತು.ಬಿಎಂ ಕಾವಲು ಅರಣ್ಯ ಪ್ರದೇಶದಲ್ಲಿ ಆನೆ ಇರುವುದನ್ನು ಅಧಿಕಾರಿಗಳು ಗುರುತಿಸಿದ್ದರು. ದಟ್ಟ ಅರಣ್ಯ ಹಾಗೂ ರಾತ್ರಿ ಸಮಯದಲ್ಲಿ ಆನೆಯ ನಿಖರ ಜಾಡು ಪತ್ತೆಹಚ್ಚುವುದು ಸವಾಲಾಗಿದ್ದ ಹಿನ್ನೆಲೆಯಲ್ಲಿ ಎರಡು ಥರ್ಮಲ್ ಡ್ರೋನ್‌ಗಳನ್ನು ಬಳಸಲಾಯಿತು.


ಡಿಸಿಎಫ್ ಚಕ್ರಪಾಣಿ ನೇತತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆಯ 100ಕ್ಕೂ ಅಧಿಕ ಸಿಬ್ಬಂದಿ ಆನೆಯ ಚಲನವಲನವನ್ನು ನಿರಂತರವಾಗಿ ಗಮನಿಸಿ, ಅದು ಜನವಸತಿ ಪ್ರದೇಶದತ್ತ ಮತ್ತೆ ತೆರಳದಂತೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಕೊನೆಗೆ ಬಿಎಂ ಕಾವಲು ಅರಣ್ಯದಿಂದ ಟಿಕೆ ಫಾರೆಸ್ಟ್ ಭಾಗದ ಆನೆ ಸಂಚಾರ ಪಥದ ಮೂಲಕ ಕಾಡಾನೆಯನ್ನು ಬನ್ನೇರುಘಟ್ಟ ಅರಣ್ಯದತ್ತ ಹಿಮೆಟ್ಟಿಸಲಾಯಿತು. ಇದರಿಂದ ನಗರದ ಹೊರವಲಯದ ಜನವಸತಿ ಪ್ರದೇಶಗಳಲ್ಲಿ ಮತ್ತೆ ಆನೆ ಪ್ರವೇಶಿಸುವ ಸಾಧ್ಯತೆಯನ್ನು ತಾತ್ಕಾಲಿಕವಾಗಿ ನಿಯಂತ್ರಿಸುವ ಪ್ರಯತ್ನ ನಡೆದಿದೆ.

**ಐದು ಕಿ.ಮೀ. ದೂರ ಬಂದಿದ್ದ ಆನೆ:** ಅರಣ್ಯ ಇಲಾಖೆ ಅಧಿಕಾರಿಗಳ ಪ್ರಕಾರ, ಆನೆ ಬನ್ನೇರುಘಟ್ಟ ಅರಣ್ಯ ಪ್ರದೇಶದಿಂದ ಹೊರಬಂದು ಸುಮಾರು ಐದು ಕಿಲೋಮೀಟರ್ ದೂರದ ಜನವಸತಿ ಪ್ರದೇಶದತ್ತ ಬಂದಿತ್ತು. ಸುಮಾರು 25-30 ವರ್ಷದ ಗಂಡಾನೆ ಎಂದು ಅಧಿಕಾರಿಗಳು ಗುರುತಿಸಿದ್ದರು. ಈ ಆನೆ ಬಿಎಂ ಕಾವಲು ಪ್ರದೇಶದಲ್ಲಿ ಇರುವುದನ್ನು ಪತ್ತೆಹಚ್ಚಿದ ಬಳಿಕ ಕಾರ್ಯಾಚರಣೆ ಆರಂಭಿಸಲಾಗಿತ್ತು.

ಬನ್ನೇರುಘಟ್ಟ ಮತ್ತು ಸುತ್ತಮುತ್ತಲಿನ ಅರಣ್ಯ ಪ್ರದೇಶಗಳನ್ನು ಸಂಪರ್ಕಿಸುವ ವನ್ಯಜೀವಿ ಸಂಚಾರ ಮಾರ್ಗಗಳ ಮಹತ್ವವೂ ಇತ್ತೀಚಿನ ಬೆಳವಣಿಗೆಗಳಿಂದ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ನಗರದ ಹೊರವಲಯದಲ್ಲಿ ಆನೆಗಳ ಸುರಕ್ಷಿತ ಸಂಚಾರಕ್ಕಾಗಿ ನಿರ್ಮಿಸಲಾದ ವನ್ಯಜೀವಿ ಮೇಲ್ಸೇತುವೆಯನ್ನು ಆನೆಗಳು ಬಳಸುತ್ತಿರುವುದನ್ನು ಈ ವರ್ಷ ಕ್ಯಾಮೆರಾ ಟ್ರ್ಯಾಪ್‌ಗಳು ದಾಖಲಿಸಿದ್ದವು.

ಅರಣ್ಯ ಇಲಾಖೆ ಜನರಿಗೆ ರಾತ್ರಿ ಮತ್ತು ಮುಂಜಾನೆ ಸಮಯದಲ್ಲಿ ಎಚ್ಚರಿಕೆಯಿಂದ ಇರುವಂತೆ ಸೂಚಿಸಿದೆ.ಹೀಗಾಗಿ ಒಂದು ಕಾಡಾನೆಯನ್ನು ಅರಣ್ಯಕ್ಕೆ ಮರಳಿಸುವ ಕಾರ್ಯಾಚರಣೆ ಯಶಸ್ವಿಯಾದರೂ, ಬನ್ನೇರುಘಟ್ಟ ಅರಣ್ಯ ಮತ್ತು ನಗರ ವಿಸ್ತರಣೆಯ ನಡುವಿನ ಮಾನವ ಆನೆ ಸಂಘರ್ಷವನ್ನು ಶಾಶ್ವತವಾಗಿ ನಿಯಂತ್ರಿಸಲು ಆನೆ ಕಾರಿಡಾರ್‌ಗಳ ರಕ್ಷಣೆ, ವೈಜ್ಞಾನಿಕ ನಿಗಾ ವ್ಯವಸ್ಥೆ ಮತ್ತು ಜನವಸತಿ ಪ್ರದೇಶಗಳಿಗೆ ಮುನ್ನೆಚ್ಚರಿಕೆ ವ್ಯವಸ್ಥೆ ಬಲಪಡಿಸುವುದು ಮುಂದಿನ ಪ್ರಮುಖ ಸವಾಲಾಗಿದೆ.

# ಬಸವನ ಬಾಗೇವಾಡಿಯಲ್ಲಿ ಭೂಕಂಪನ, ರಿಕ್ಟರ್ ಮಾಪನದಲ್ಲಿ 3.5ರಷ್ಟು ತೀವ್ರತೆ




**ವಿಜಯಪುರ, ಸೆ.29:** ವಿಜಯಪುರ ಜಿಲ್ಲೆಯ ಬಸವಣ್ಣನ ಹುಟ್ಟೂರು ಬಸವನಬಾಗೇವಾಡಿ ತಾಲೂಕಿನಲ್ಲಿ 3.5 ತೀವ್ರತೆಯ ಭೂಕಂಪ ಉಂಟಾಗಿರುವುದಾಗಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರದ ಅಧಿಕೃತ ವೆಬ್‌ಸೈಟ್‌ನಲ್ಲಿ ದಾಖಲಿಸಿದೆ.

ಮಧ್ಯರಾತ್ರಿ 12:26:12ರ ಹೊತ್ತಿಗೆ ಭೂಕಂಪನ ಸಂಭವಿಸಿದ್ದು, ಅದರ ಕೇಂದ್ರಬಿಂದುವು ಬಸವನ ಬಾಗೇವಾಡಿ ತಾಲೂಕಿನ ದಿಂಡವಾರ ಗ್ರಾಮ ಪಂಚಾಯಿತಿಯಿಂದ ನೈಋತ್ಯಕ್ಕೆ 1.1 ಕಿ.ಮೀ ದೂರದಲ್ಲಿ ಸಂಧಿಸಿದ್ದು, ಈ ನಿರ್ದಿಷ್ಟ ಸ್ಥಳವು ಅಕ್ಷಾಂಶ 16.650ಲಿ ಉತ್ತರ ಮತ್ತು ರೇಖಾಂಶ 76.045ಲಿ ಪೂರ್ವದಲ್ಲಿದೆ. ಭೂಗರ್ಭದಲ್ಲಿ ಅಥವಾ ಸಮುದ್ರದ ಮೇಲ್ಮೈಯಿಂದ ಈ ಸ್ಥಳದ ಆಳವು 10 ಕಿಲೋಮೀಟರ್ ಆಗಿರುವುದಾಗಿ ದಾಖಲಿಸಲಾಗಿದೆ.

ಕೇಂದ್ರಬಿಂದುವಿನಿಂದ ಇತರ ಪ್ರಮುಖ ಸ್ಥಳಗಳ ದೂರ ಹೀಗಿದೆ: ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ದಿಂಡವಾರ ಗ್ರಾಮ ಪಂಚಾಯಿತಿಯಿಂದ ನೈಋತ್ಯಕ್ಕೆ 1.1 ಕಿ.ಮೀ. ಕೇಂದ್ರಬಿಂದುವನ್ನು ಹೊಂದಿರುವ ಈ ಭೂಕಂಪವು ಇಂಗಳೇಶ್ವರ ಗ್ರಾಮ ಪಂಚಾಯಿತಿಯಿಂದ ಪೂರ್ವ-ಆಗ್ನೇಯಕ್ಕೆ 3.0 ಕಿ.ಮೀ., ರಬಿನಾಳ ಗ್ರಾಮದಿಂದ ದಕ್ಷಿಣ-ನೈಋತ್ಯಕ್ಕೆ 5.3 ಕಿ.ಮೀ., ಕಮನ್ಕೇರಿ ಗ್ರಾಮದಿಂದ ಪಶ್ಚಿಮಕ್ಕೆ 5.5 ಕಿ.ಮೀ., ಬಸವನ ಬಾಗೇವಾಡಿ ತಾಲೂಕು ಕೇಂದ್ರದಿಂದ ಈಶಾನ್ಯಕ್ಕೆ 11.5 ಕಿ.ಮೀ. ಹಾಗೂ ವಿಜಯಪುರ ನಗರದಿಂದ ನೈಋತ್ಯಕ್ಕೆ 40.0 ಕಿ.ಮೀ.ವರೆಗೆ ಭೂಕಂಪನ ಕೇಂದ್ರಬಿಂದು ಸಂಧಿಸಿದೆ.

ಭೂಕಂಪ ತೀವ್ರತೆಯ ನಕ್ಷೆಯ ಪ್ರಕಾರ ಗಮನಿಸಲಾದ ತೀವ್ರತೆ ಕಡಿಮೆಯಾಗಿದ್ದು, ಕೇಂದ್ರಬಿಂದುವಿನಿಂದ 50-60 ಕಿ.ಮೀ. ತ್ರಿಜ್ಯದ ವ್ಯಾಪ್ತಿಯವರೆಗೆ ಭೂಕಂಪನ ಅನುಭವ ಉಂಟಾಗ ಬಹುದು. ತೀವ್ರತೆ ಕಡಿಮೆಯಿರುವುದರಿಂದ ಈ ಭೂಕಂಪ ಸ್ಥಳೀಯವಾಗಿ ಯಾವುದೇ ರೀತಿಯ ಹಾನಿ ಉಂಟು ಮಾಡುವುದಿಲ್ಲ.

ಆದರೂ ಸ್ಥಳೀಯವಾಗಿ ಭೂಕಂಪನಗಳ ಅನುಭವ ಉಂಟಾಗಬಹುದು. ಕೇಂದ್ರಬಿಂದು ಭೂಕಂಪನ ವಲಯ-III ವ್ಯಾಪ್ತಿಗೆ ಬರುತ್ತದೆ ಮತ್ತು ಟೆಕ್ಟೋನಿಕ್ ನಕ್ಷೆಯ ಪ್ರಕಾರ ಈ ಪ್ರದೇಶದಲ್ಲಿ ಯಾವುದೇ ರಚನಾತ್ಮಕ ಅಸಂಗತ ಕಂಡುಬಂದಿಲ್ಲ. ದಾಖಲಾದ ಭೂಕಂಪನ ತೀವ್ರತೆ ಮತ್ತು ಪ್ರಮಾಣ ಎರಡೂ ಕಡಿಮೆಯಿರುವುದರಿಂದ ಸಾರ್ವ ಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಕೆ.ಎಸ್.ಎನ್.ಡಿ.ಎಂ.ಸಿ ನಿರ್ದೇಶಕರು ತಿಳಿಸಿದ್ದಾರೆ.



**ಸಿಎಚ್‌ಒ (CHO) ಆಯ್ಕೆಗೆ ಬಿಎಸ್‌ಸಿ ನರ್ಸಿಂಗ್ ಅರ್ಹತಾ ಮಾನದಂಡವನ್ನು ಹಿಂಪಡೆಯುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ಸಮುದಾಯ ಆರೋಗ್ಯ (ಎನ್‌ಎಚ್‌ಎಂ) ಗುತ್ತಿಗೆ ನೌಕರರ ಸಂಘದ ಸದಸ್ಯರು ಮಂಗಳವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಿದರು.**

# ಕೃಷಿ ಪತ್ತಿನ ಸಹಕಾರ ಸಂಘದ ಸುವರ್ಣ ಮಹೋತ್ಸವ



**ರಾಯಚೂರು ಜಿಲ್ಲೆಯ ಅಗಳಕೇರಾ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 50ನೇ ವರ್ಷದ 'ಸುವರ್ಣ ಸಂಭ್ರಮ' ಕಾರ್ಯಕ್ರಮದ ಸಾನಿಧ್ಯ ವಹಿಸಿ ಉದ್ಘಾಟಿಸಿದರು.**

**ರಾಯಚೂರು, ಸೆ. 29:** ಕೃಷಿ ಪತ್ತಿನ ಸಹಕಾರಿ ಸಂಘವೊಂದು 50 ವರ್ಷಗಳ ಕಾಲ ರೈತರ ಬಾಳಿಗೆ ಬೆಳಕಾಗಿ ಲಾಭ ಗಳಿಸುತ್ತ ಮುನ್ನಡೆಯುತ್ತ ಸುವರ್ಣ ಸಂಭ್ರಮ ಆಚರಿಸುತ್ತಿರುವುದು ರೈತರ ಸಾಧನೆಯ ಪ್ರತೀಕವಾಗಿದೆ ಎಂದು ಬಿಸನರ್ಳಿ ಗವಿಮಠ ಶಾಖಾ ಮಠದ ಶಿವಶಾಂತವೀರ ಸ್ವಾಮಿಜಿ ಅವರು ಹೇಳಿದರು.

ಜಿಲ್ಲೆಯ ಅಗಳಕೇರಾ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 50ನೇ ವರ್ಷದ 'ಸುವರ್ಣ ಸಂಭ್ರಮ' ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ರೈತರು ಅಂದರೆ ಕೃಷಿ, ಕೃಷಿ ಎಂದರೆ ರೈತರು. ನಮ್ಮ ದೇಶದಕಲ್ಲಿ ಅತ್ಯಧಿಕ ಶ್ರಮವಹಿಸಿ ದುಡಿಯುವವನು ರೈತ ಮಾತ್ರ. ಈ ಪತ್ತಿನ ಸಹಕಾರ ಸಂಘದ ಉಯಶಸ್ಸು ರೈತನ ಯಶಸ್ಸಾಗಿದೆ ಎಂದರು.

ರಾಯಚೂರು-ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಐ.ಎಸ್. ಗಿರೆಡ್ಡಿ ಮಾತನಾಡಿ, ಸಂಘ ಲಾಭಗಳಿಸುವಲ್ಲಿ ಜಿಲ್ಲೆಗೆ ಎರಡನೇ ಸ್ಥಾನದಲ್ಲಿದೆ. ಸಂಘದ ಆಡಳಿತದ ವಿಚಾರದಲ್ಲಿ ರಾಜಕಾರಣದ ವಾಸನೆ, ವ್ಯಕ್ತಿಗತ ಹಸ್ತಕ್ಷೇಪ ಇರಬಾರದು. ಸಾಲ ತೆಗೆದುಕೊಂಡವರು ಸಕಾಲಕ್ಕೆ ಮರುಪಾವತಿ ಮಾಡುತ್ತಿದ್ದರೆ ಬ್ಯಾಂಕ್ ಲಾಭದಲ್ಲಿ ಇರುತ್ತದೆ ಹಾಗೂ ಪರಸ್ಪರ ವಿಶ್ವಾಸ ಮೂಡುತ್ತದೆ ಎಂದರು.

# ಎಚ್‌ಐವಿ ಮುಕ್ತ ಸಮಾಜ ನಿರ್ಮಾಣ ಸಾರ್ವಜನಿಕರ ಗುರಿಯಾಗಲಿ: ಡಾ.ಶಂಕ್ರಪ್ಪ ಮೈಲಾರಿ ಕರೆ

**ಕಲಬುರಗಿ, ಸೆ. 29:** ಸರಿಯಾದ ಜಾಗೃತಿ, ಸೂಕ್ತ ಮುನ್ನೆಚ್ಚರಿಕಾ ಕ್ರಮಗಳು ಹಾಗೂ ಸಮಯೋಚಿತ ಪರೀಕ್ಷೆಯ ಮೂಲಕ ಎಚ್‌ಐವಿ ಹರಡುವಿಕೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಿದೆ. ಸಮಾಜದಲ್ಲಿ ಎಚ್‌ಐವಿ ಕುರಿತು ಅನಗತ್ಯವಾಗಿ ಬೇರೂರಿರುವ ಭಯ ಮತ್ತು ಸಾಮಾಜಿಕ ಕಳಂಕವನ್ನು ಸಂಪೂರ್ಣವಾಗಿ ನಿವಾರಿಸಿ, ಆರೋಗ್ಯಕರ ಹಾಗೂ ಎಚ್‌ಐವಿ ಮುಕ್ತ ಸಮಾಜ ನಿರ್ಮಾಣ ಸಾರ್ವಜನಿಕರ ಗುರಿಯಾಗಲಿ ಎಂದು ಆರೋಗ್ಯ ಇಲಾಖೆ ವಿಭಾಗೀಯ ಜಂಟಿ ನಿರ್ದೇಶಕರ ಕಚೇರಿ ಸಹ ನಿರ್ದೇಶಕ ಡಾ. ಶಂಕ್ರಪ್ಪ ಮೈಲಾರಿ ಹೇಳಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾ ಹಾಗೂ ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ ಅಧಿಕಾರಿ ಡಾ. ಮಹ್ಮದ್ ಗಫಾರ್ ಮಾತನಾಡಿದ ಅವರು, ಎಚ್‌ಐವಿ ಸೋಂಕು ತಡೆಗಟ್ಟುವಿಕೆ, ಸಮಯೋಚಿತ ರಕ್ತ ಪರೀಕ್ಷೆ, ಸೂಕ್ತ ಸಮಾಲೋಚನೆ ಪಡೆಯುವುದು ಹಾಗೂ ಅಗತ್ಯವಿದ್ದಲ್ಲಿ ನಿಯಮಿತವಾಗಿ ವೈದ್ಯಕೀಯ ಚಿಕಿತ್ಸೆಯನ್ನು ಪಾಲಿಸುವ ಕುರಿತು ಸಾರ್ವಜನಿಕರಿಗೆ ವಿವರವಾದ ಮಾಹಿತಿ ತಲುಪಿಸಲಾಯಿತು. ಎಚ್‌ಐವಿ ಸೋಂಕಿತರನ್ನು ಸಮಾಜದಿಂದ ದೂರವಿಡದೆ ಅಥವಾ ಕೀಳಾಗಿ ನೋಡದೆ, ಅಂಥವರಿಗೆ ಸಮಾಜದಲ್ಲಿ ಅರ್ಹ ಗೌರವ, ಸಹಾನುಭೂತಿ ಮತ್ತು ಅಗತ್ಯ ಬೆಂಬಲ ನೀಡುವುದು ಪ್ರತಿಯೊಬ್ಬ ನಾಗರಿಕನ ಮುಖ್ಯ ಸಾಮಾಜಿಕ ಹೊಣೆಗಾರಿಕೆಯಾಗಿದೆ.

ಜಾಗೃತಿ ಬೈಕ್ ರ್‍ಯಾಲಿಯ ಮೂಲಕ ಜಿಲ್ಲೆಯಾದ್ಯಂತ ಎಚ್‌ಐವಿ ಬಗ್ಗೆ ಜ್ಞಾನ ಬೆಳೆಸಿಕೊಳ್ಳಿ, ತಡೆಗಟ್ಟುವಿಕೆಯನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಿ, ಸೋಂಕಿತರ ಮೇಲಿನ ತಾರತಮ್ಯವನ್ನು ಸಂಪೂರ್ಣವಾಗಿ ತೊಡೆದುಹಾಕಿ ಎಂಬ ಅತ್ಯಂತ ಪ್ರಮುಖ ಸಂದೇಶವನ್ನು ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ತಲುಪಿಸಲಾಯಿತು.

### ಕಲಬುರಗಿ ವಿವಿಯಲ್ಲಿ ಗುರುವಂದನಾ ಕಾರ್ಯಕ್ರಮ

# ಒಬ್ಬ ಶ್ರೇಷ್ಠ ಶಿಕ್ಷಕ ಒಂದು ಸರ್ವಶ್ರೇಷ್ಠ ಗ್ರಂಥಾಲಯವಿದ್ದಂತೆ: ಪ್ರೊ.ಬಂದಗಾರ್



**ಕಲಬುರಗಿ, ಸೆ. 29:** ಶಿಕ್ಷಕ ವೃತ್ತಿ ಶ್ರೇಷ್ಠ ವೃತ್ತಿಯಂತೆ ಒಬ್ಬ ಅತ್ಯುತ್ತಮ ಶಿಕ್ಷಕ ಸರ್ವಶ್ರೇಷ್ಠ ಗ್ರಂಥಾಲಯವಿದ್ದಂತೆ. ಜ್ಞಾನದ ಮಹಾಶಕ್ತಿ ವಿದ್ಯಾರ್ಥಿಗಳ ದಾರಿದೀಪ. ಒಬ್ಬ ಅತ್ಯುತ್ತಮ ಶಿಕ್ಷಕ ಒಂದು ಸರ್ವಶ್ರೇಷ್ಠ ಗ್ರಂಥಾಲಯ ವಿದ್ದಂತೆ. ಜ್ಞಾನದ ಹಸಿವು ನೀಗಿಸುವ ಶಿಕ್ಷಕ ಸಮುದಾಯ ವಿದ್ಯಾರ್ಥಿಗಳ ಬದುಕಿನಲ್ಲಿ ಸದಾ ಪ್ರಜ್ವಲಿಸುವ ದೀಪದ ಬೆಳಕಿನಂತೆ ಪ್ರೊ. ಆನಂದ್ ಆರ್. ಸೌಂದನೆ ನೂರಾರು ವಿದ್ಯಾರ್ಥಿಗಳ ಯಶಸ್ಸಿಗೆ ಕಾರಣರಾಗಿದ್ದಾರೆ ಎಂದು ಸೋಲಾಪುರ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಬಿ. ಪಿ. ಬಂದಗಾರ್ ಹೇಳಿದರು.

ಕಲಬುರಗಿ ವಿಶ್ವವಿದ್ಯಾಲಯದ ಸಸ್ಯಾಶಾಸ್ತ್ರ ವಿಭಾಗದ ಬೋಸ್ ಸಭಾಂಗಣದಲ್ಲಿ ರಸಾಯನಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ. ಆನಂದ್ ಆರ್. ಸೌಂದನೆ ಅವರ ನಿವೃತ್ತಿ ನಿಮಿತ್ತ ಬೋಧಕ ಸಿಬ್ಬಂದಿ, ವಿದ್ಯಾರ್ಥಿ ಬಳಗ ಆಯೋಜಿಸಿದ 'ಗುರುವಂದನ' ಸಮಾರಂಭವನ್ನು ಸಸಿಗೆ ನೀರೆರೆದು ಉದ್ಘಾಟಿಸಿ ಮಾತನಾಡಿ, ಶಿಕ್ಷಕರು ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮಾತ್ರವಲ್ಲ ಇಡೀ ಭವಿಷ್ಯ ರೂಪಿಸುವ ಶಿಲ್ಪಿಯಾಗಿರುತ್ತಾರೆ. ಬೋಧಕರಗಿ, ಉತ್ಕೃಷ್ಠ ಸಂಶೋಧಕರಾಗಿ ಮತ್ತು ಮಾರ್ಗದರ್ಶನದಿಂದ ವಿದ್ಯಾರ್ಥಿ ಸಮುದಾಯದ ಹೃದಯದಲ್ಲಿ ನಿಲ್ಲುತ್ತಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಎಷ್ಟೇ ವೇಗವಾಗಿ ಬೆಳೆಯುತ್ತಿದ್ದರೂ, ಗುರುವಿನ ಬೆಂಬಲ ಮತ್ತು ಸನ್ಮಾರ್ಗ ಮಾತ್ರ ಉತ್ತಮ ಪ್ರತಿಭೆಗಳು ಹೊರಬರಲು ಸಾಧ್ಯ ಎಂದರು.

ಬೆಂಗಳೂರು ನಗರದ ಡಾ. ಮನಮೋಹನ್ ಸಿಂಗ್ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಭಾರ ಕುಲಪತಿ ಪ್ರೊ. ಎಸ್. ಹರಿಪ್ರಸಾದ್ ಮಾತನಾಡಿ ಪ್ರಸ್ತುತ ಜಗತ್ತು ಪ್ರಗತಿ ಸಾಧಿಸಿದಂತೆ ಸ್ಪರ್ಧಾತ್ಮಕತೆ, ಹೊಸ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುವ ಧೈರ್ಯ, ಆತ್ಮವಿಶ್ವಾಸ ಮತ್ತು ಚೈತನ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಿ ಬಹುಮುಖ ಪ್ರತಿಭೆಯಾಗಿ ರೂಪಿಸುವ ಶಿಕ್ಷಕ ಶ್ರೇಷ್ಠ ಗುರುವಾಗಿರುತ್ತಾನೆ. ರಸಾಯನಶಾಸ್ತ್ರ ಕ್ಷೇತ್ರದಲ್ಲಿ ಪ್ರೊ. ಆನಂದ ಸೌಂದಾನೆ ಅವರು ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಮಾರ್ಗದರ್ಶಕ ಮತ್ತು ವಿದ್ವಾಂಸ ಎಂದು ಹೇಳಿದರು.

ನನ್ನ ಶೈಕ್ಷಣಿಕ ಮತ್ತು ಬೋಧನಾ ವೃತ್ತಿ ಸೇವೆಯಲ್ಲಿ ಶಿಕ್ಷಕ ಮತ್ತು ಶಿಕ್ಷಕೇತರ ವರ್ಗದವರ ಸಹಕಾರ ನೀಡಿದ್ದಾರೆ. ವಾಣಿಜ್ಯಶಾಸ್ತ್ರ ಕಲಿಯುವ ಆಸಕ್ತಿ ಯಿತ್ತು.

ಆದರೆ, ಮನೆಯವರ ಸಲಹೆಯಂತೆ ವಿಜ್ಞಾನ ವಿಷಯ ಆಯ್ಕೆ ಮಾಡಿಕೊಂಡು ನನ್ನ ಕುಟುಂಬದ ಪ್ರೋತ್ಸಾಹ ನನಗೆ ಹೆಚ್ಚು ಸಿಕ್ಕಿದೆ. ಪದವಿ, ಪಿಎಚ್.ಡಿ, ಯುಜಿಸಿ ಫೆಲೋಶಿಪ್ ಪಡೆದು ಖಾಯಂ ಬೋಧಕ ನಾಗಲು ಸಾಧ್ಯವಾಯಿತು. ವಿದ್ಯಾರ್ಥಿಗಳು ಯಶಸ್ಸು ಕಾಣಲು ಸತತ ಪ್ರಯತ್ನ, ಕಠಿಣ ಪರಿಶ್ರಮ ಮತ್ತು ಕಲಿಕೆಯಲ್ಲಿ ಹೊಸತನ ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

# ನಾಯಿಕಡಿತ ನಿರ್ಲಕ್ಷಿಸಬೇಡಿ, ತಕ್ಷಣ ಚಿಕಿತ್ಸೆ ಪಡೆಯಿರಿ: ನ್ಯಾ.ರಾಜೇಶ್ ಹೊಸಮನೆ ಸಲಹೆ

**ಬಳ್ಳಾರಿ,ಸೆ.29.**ಸಾಕು ಅಥವಾ ಬೀದಿ ನಾಯಿಗಳು ಕಚ್ಚಿದಾಗ ನಿರ್ಲಕ್ಷ ಯ ಮಾಡದೆ ತಕ್ಷಣವೇ ಚಿಕಿತ್ಸೆ ಪಡೆಯಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ನ್ಯಾಯಾಧೀಶ ರಾಜೇಶ್ ಎನ್. ಹೊಸಮನೆ ಸಲಹೆ ಮಾಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಬಂಡಿಹಟ್ಟಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಆಯೋಜಿಸಿದ್ದ 'ವಿಶ್ವ ರೇಬಿಸ್ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗಾಯವನ್ನು ಸೋಪು ಮತ್ತು ನೀರಿನಿಂದ ತೊಳೆಯಬೇಕು. ನಂತರ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ರೇಬಿಸ್ ಚುಚ್ಚುಮದ್ದು ಪಡೆಯುವ ಮೂಲಕ ರೇಬಿಸ್ ಕಾಯಿಲೆಯನ್ನು ತಡೆಗಟ್ಟಬಹುದು ಹಾಗೂ ಜೀವ ಉಳಿಸಬಹುದು. ಬಳ್ಳಾರಿಯನ್ನು 'ರೇಬಿಸ್ ಮುಕ್ತ' ಜಿಲ್ಲೆಯನ್ನಾಗಿಸಲು ಅವರು ಕರೆ ನೀಡಿದರು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಅಲಕಾನಂದ ಡಿ. ಮಳಿಗಿ , ರೇಬಿಸ್ ಕಾಯಿಲೆಗೆ ಒಮ್ಮೆ ತುತ್ತಾದರೆ ಯಾವುದೇ ಚಿಕಿತ್ಸೆ ಇರುವುದಿಲ್ಲ. ಆದರೆ, ಪ್ರಾಣಿ ಕಚ್ಚಿದ ತಕ್ಷಣ ಸೂಕ್ತ ಲಸಿಕೆ ಪಡೆಯುವುದರಿಂದ ಇದನ್ನು ಸಂಪೂರ್ಣವಾಗಿ ತಡೆಗಟ್ಟಬಹುದು. ಹಾಗಾಗಿ ಯಾವುದೇ ಪ್ರಾಣಿ ಕಚ್ಚಿದಾಗ ಗಾಬರಿಪಡದೆ 24 ಗಂಟೆಯೊಳಗೆ ಆಂಟಿ-ರೇಬಿಸ್ ಲಸಿಕೆಯನ್ನು ತಪ್ಪದೇ ಪಡೆಯಬೇಕು ಎಂದು ಸಲಹೆ ನೀಡಿದರು.

ನಾಯಿ ಕಡಿತದ ತೀವ್ರತೆಯ ಆಧಾರದ ಮೇಲೆ ಗಾಯವನ್ನು ಕೆಟಗರಿ 1, 2 ಮತ್ತು 3 ಎಂದು ವರ್ಗೀಕರಿಸಲಾಗಿದ್ದು, ಕೆಟಗರಿ-3 ಗಾಯಗಳಿಗೆ ಲಸಿಕೆಯ ಜೊತೆಗೆ ರೇಬಿಸ್ ಇಮ್ಯುನೊಗ್ಲಾಬ್ಯುಲಿನ್ ಪಡೆಯುವುದು ಅತ್ಯಾವಶ್ಯಕ ಎಂದು ಅವರು ವಿವರಿಸಿದರು.

ಈ ವರ್ಷ 'ಒಟ್ಟಾಗಿದ್ದರೆ ನಾವು ಮತ್ತಷ್ಟು ಶಕ್ತಿಶಾಲಿ' ಎಂಬ ಘೋಷವಾಕ್ಯದೊಂದಿಗೆ ರೇಬಿಸ್ ನಿಯಂತ್ರಣದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ' ಎಂದು ತಿಳಿಸಿದರು.

ಅರಣ್ಯ ಇಲಾಖೆ, ಪಶು ವೈದ್ಯಕೀಯ ಸಿಬ್ಬಂದಿ ಸೇರಿದಂತೆ ಹೈ-ರಿಸ್ಕ್ ವರ್ಗದ ಜನರು ಮುಂಜಾಗ್ರತೆಯಾಗಿ ರೋಗ ನಿರೋಧಕ ಲಸಿಕೆ ಪಡೆಯಬಹುದು ಎಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮರಿಯಂಬಿ ವಿ.ಕೆ. ಅವರು ಮಾತನಾಡಿ, ನಾಯಿ, ಬೆಕ್ಕು ಸೇರಿದಂತೆ ಇತರ ಪ್ರಾಣಿಗಳು ಕಚ್ಚಿದಾಗ ಗಾಯವನ್ನು ಹರಿಯುವ ಶುದ್ಧ ನೀರಿನಲ್ಲಿ 15 ನಿಮಿಷಗಳ ಕಾಲ ಸೋಪು ಬಳಸಿ ತೊಳೆಯುವುದರಿಂದ ಶೇ.50 ರಿಂದ 70 ರಷ್ಟು ರೇಬಿಸ್ ಅಪಾಯವನ್ನು ತಡೆಯಬಹುದು. ವೈದ್ಯರ ಸಲಹೆಯಂತೆ 1ನೇ, 3ನೇ, 7ನೇ ಮತ್ತು 28ನೇ ದಿನದಂದು ಲಸಿಕೆಯ 4 ಡೋಸ್‌ಗಳನ್ನು ಕಡ್ಡಾಯವಾಗಿ ಪಡೆಯುವ ಮೂಲಕ ರೇಬಿಸ್ ತಡೆಗಟ್ಟಬಹುದು ಎಂದು ತಿಳಿಸಿದರು.

### ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಸಂಗೀತದ ಹಬ್ಬ

# ತಪ್ಪು ತಿದ್ದಿಕೊಂಡು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳಾಗಿ ಬದುಕಿರಿ: ಎಚ್.ಲಕ್ಷ್ಮೀಕಾಂತರೆಡ್ಡಿ ಕಿವಿಮಾತು

**ಬಳ್ಳಾರಿ ಸೆ 29.** ಬಳ್ಳಾರಿಯ ಕೇಂದ್ರ ಕಾರಗೃಹದಲ್ಲಿ ಆಲಾಪ್ ಸಂಗೀತ ಕಲಾ ಟ್ರಸ್ಟ್ ವತಿಯಿಂದ ಮಂಗಳವಾರ ನಡೆದ ಭಾವಸಂಗಮ ಸಾಂಸ್ಕೃತಿಕ ಮಾಲಿಕೆಯನ್ನು ಉದ್ಘಾಟಿಸಿ ಮಾತನಾಡಿದ ಸನ್ಮಾರ್ಗ ಗೆಳೆಯರ ಬಳಗದ ಅಧ್ಯಕ್ಷರಾದ ಎಚ್ ಲಕ್ಷ್ಮಿಕಾಂತ್ ರೆಡ್ಡಿ ರವರು ತಮ್ಮ ಉದ್ಘಾಟನೆ ನುಡಿಗಳಲ್ಲಿ ಇಲ್ಲಿನ ಕೈದಿಗಳು ತಿಳಿದು ಅಥವಾ ತಿಳಿಯದೆಯೋ ಏನೋ ತಪ್ಪು ಮಾಡಿ ಬಂದಿದ್ದಾರೆ ಅದನ್ನು ತಿದ್ದಿಕೊಂಡು ನೀವು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳಾಗಿ ಬದುಕಬೇಕು ಎಂದರು.

ನಮ್ಮ ಚಿಂತೆಗಳನ್ನು ಕಳೆಯಬೇಕಾದರೆ ಅದಕ್ಕೆ ಮುಖ್ಯ ಸಂಗೀತ ಅಂತಹ ಸಂಗೀತ ಕಾರ್ಯಕ್ರಮವನ್ನು ಆಲಾಪ್ ಸಂಗೀತ ಕಲಾ ಟ್ರಸ್ಟ್ ನವರು ಆಯೋಜಿಸಿರುವುದು ತುಂಬಾ ಸ್ಲಾಘನೀಯ ಎಂದರು. ಜಡೇಶ್ ಎಮ್ಮಿಗನೂರು ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಸಂಸ್ಥೆಯು 10 ವರ್ಷಗಳಿಂದ ಬಳ್ಳಾರಿಯಲ್ಲದೆ ಇನ್ನು ಬೇರೆ ಬೇರೆ ಕಡೆ ಅನೇಕ ಸಾಂಸ್ಕೃತಿಕ




ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬಂದಿದ್ದೇವೆ. ಕೇಂದ್ರ ಕಾರಾಗೃಹದ ಅಧೀಕ್ಷಕ ವಿ.ಕೃಷ್ಣಮೂರ್ತಿ ಅವರಿಗೆ ನಾನು ಧನ್ಯವಾದ ತಿಳಿಸುತ್ತೇನೆ ಏಕೆಂದರೆ ಚಿಂತೆ ಮತ್ತು ಬೇಜಾರ್ ನಲ್ಲಿರುವ ಕೈದಿಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದರಿಂದ ಅದರಲ್ಲಿ ಮುಖ್ಯವಾಗಿ ಸಂಗೀತದಿಂದ ಮನಸ್ಸು ಹಗುರವಾಗುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ತಾರಾನಾಥ ಆಯುರ್ವೇದ ಆಸ್ಪತ್ರೆಯ ಸ್ಥಾಯಿ ವೈದ್ಯಾಧಿಕಾರಿಡಾ. ಎಸ್ ಎಂ ಕೊಟ್ರೇಶ್ ಸರ್ವರೋಗಕ್ಕೂ ಸಂಗೀತ ಮದ್ದು ಹಾಗಾಗಿ ಸಂಗೀತ ಆಲಿಸುವುದರಿಂದ ನಮ್ಮ ಚಿಂತೆಗಳು ದೂರವಾಗುತ್ತವೆ ಎಂದರು.

ಮತ್ತೊಬ್ಬ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರೇಣುಕಾ ಬೇಕರಿ ಮಾಲೀಕರಾದ ಹರೀಶ್ ಶೆಟ್ಟಿ ರವರು ಕೈದಿಗಳು ತಮ್ಮ ಒಂಟಿತನವನ್ನು ದೂರವಾಗಿಸಲು ಸಂಗೀತವನ್ನು ಹೆಚ್ಚೆಚ್ಚು ಕೇಳುವುದರಿಂದ ಮನಸ್ಸು ಹಗುರವಾಗುತ್ತದೆ ಎಂದರು.ತದನಂತರ ರಂಗಭೂಮಿ ಕಲಾವಿದರು ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವೀಣಾ ಆದವಾನಿ ಮತ್ತು ತಂಡದಿಂದ ರಂಗಗೀತೆಗಳು ಹಾಗೂ ಜಡೇಶ್ ಎಮ್ಮಿಗನೂರು ಮತ್ತು ತಂಡದಿಂದ ವಚನ ಗಾಯನ ಹಾಗೂ ಮರಿಯಮ್ಮನಹಳ್ಳಿಯ ಹೆಸರಾಂತ ಜಾನಪದ ಕಲಾವಿದರಾದ ಮಹಂತೇಶ್ ತಂಡದಿಂದ ಜಾನಪದ ಗೀತೆಗಳ ಕಾರ್ಯಕ್ರಮ ನೆರೆದಿದ್ದ ಕೈದಿಗಳ ಮನ ಸಂತೋಷ ಪಡಿಸುವುದಲ್ಲದೆ ಶಿಳ್ಳೆ ಕೇಕೆಗಳಿಂದ ಸಂತೋಷ ಪಟ್ಟರು.

ನಂತರ ಬಂದಿ ಕೈದಿಯಾದ ಹನುಮಂತ ರವರು ತಮ್ಮ ಅನಿಸಿಕೆಯಲ್ಲಿ ನಮ್ಮ ಕಾರಾಗೃಹದ ಅಧೀಕ್ಷಕರಾದ ಕೃಷ್ಣಮೂರ್ತಿ ಅವರು ಬಂದಾಗಿನಿಂದ ನಮಗೆ ಒಂದಿಲ್ಲೊಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದಾರೆ ಅವರು ಬಂದಾಗಿನಿಂದ ನಮ್ಮ ಮನೆಯ ಯಜಮಾನನಾಗಿ ನಮಗೆ ಸ್ಪಂದಿಸುತ್ತಿದ್ದಾರೆ ಜೊತೆಗೆ ನಮಗೆ ಇದು ಕಾರಾಗೃಹ ಎನಿಸದೆ ನಾವು ನಮ್ಮ ಮನೆಯಲ್ಲಿದ್ದೇವೆ ಎನ್ನುವ ಅನುಭವವಾಗುತ್ತಿದೆ ಎಂದು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು.



ಎಕರೆಗೆ 30,000 ರೂ. ಬರ ಪರಿಹಾರ ಹಾಗೂ ಇತರ ಬೇಡಿಕೆಗಳನ್ನು ಆಗ್ರಹಿಸಿ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಸದಸ್ಯರು ಮಂಗಳವಾರ ಧಾರವಾಡದಲ್ಲಿ ಧರಣಿ ನಡೆಸಿದರು.

## ಮಹಿಳಾ ಸಂಘಟನೆಯಿಂದ ಸಮಾಜ ಬದಲಾವಣೆ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯ ಅಭಿಮತ

**ಕಲಬುರಗಿ, ಸೆ. 29:** ಪುರುಷರಂತೆ ಮಹಿಳೆಯರು ಕೂಡ ಸಕ್ರಿಯವಾಗಿ ಸಂಘಟನೆಯಲ್ಲಿ ತೊಡಗುವುದರಿಂದ ಸರ್ಕಾರದ ಯೋಜನೆಗಳ ಲಾಭ ಪಡೆಯುವುದರ ಜತೆಗೆ ಅನ್ಯಾಯದ ವಿರುದ್ಧ ಹೋರಾಡಿ, ನ್ಯಾಯದ ಗೆಲುವು ಸಾಧಿಸಬಹುದು ಎಂದು ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯ ಅವರು ತಿಳಿಸಿದರು.

ಮಾಡುತ್ತಾರೆ. ಅವರಿಗೆ ಮಕ್ಕಳ ಮನಸ್ಸು ಅರಿಯುವ ಶಕ್ತಿ ಇದೆ. ಆದ್ದರಿಂದ ಅವರು ಈ ಕ್ಷೇತ್ರದಲ್ಲಿ ಯಶಸ್ವಿಯಾಗುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳಾ ಸಾಧಕರಿಗೆ ಶ್ರೇಷ್ಠ ಸೇವಾ ಶಿಕ್ಷಕ ಪ್ರಶಸ್ತಿ ನೀಡುತ್ತಿರುವುದು ಶ್ಲಾಘನೀಯ. ಅವರಿಗೆ ಈ ಗೌರವ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ಹೇಳಿದರು.



ಒಬ್ಬ ಮಹಿಳೆ ಬದಲಾದರೆ ಒಂದು ಕುಟುಂಬವೇ ಬದಲಾಗುತ್ತದೆ. ಅದೇ ಒಂದು ಮಹಿಳಾ ಸಂಘಟನೆ ಶ್ರಮಿಸಿದರೆ ಇಡೀ ಸಮಾಜವೇ ಬದಲಾಗುತ್ತದೆ. ಶಿಕ್ಷಣ ಕ್ಷೇತ್ರ ಅತ್ಯಂತ ಪವಿತ್ರವಾದದ್ದು, ಇಂತಹ ಕ್ಷೇತ್ರದಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ ನೀಡಿರುವುದು ಸಂತೋಷದ ಸಂಗತಿ. ಯಾಕೆಂದರೆ ಮಹಿಳೆಯರು ಹೆಚ್ಚು ಪರಿಶ್ರಮ ಮತ್ತು ನಿಷ್ಠೆಯಿಂದ ಕೆಲಸ

ನೌಕರರ ಸಂಘದ ಕಲಬುರಗಿ ಜಿಲ್ಲಾಧ್ಯಕ್ಷೆ ರೇಣುಕಾ ಡಾಂಗೆ ಮಾತನಾಡಿ, ಸರ್ಕಾರಿ ನೌಕರರ ಮಹಿಳಾ ಸಂಘಟನೆಯಿಂದ ನೂರಾರು ಮಹಿಳೆಯರು ನಿರ್ಭಯವಾಗಿ ಕೆಲಸ ಮಾಡುವಂತೆ ಆಗಿದೆ. ಹೀಗಾಗಿ ವೈಯಕ್ತಿಕವಾಗಿ ಹೋರಾಡುವುದರ ಬದಲು ಸಾಮೂಹಿಕವಾಗಿ ಸಂಘಟನೆಯಲ್ಲಿ ತೊಡಗಿದಾಗ ಗೆಲುವು ಸಿಕ್ಕೇ ಸಿಗುತ್ತದೆ ಎಂದು ತಿಳಿಸಿದರು.

# ಶ್ರದ್ಧೆ ಮತ್ತು ಪರಿಶ್ರಮ ಯಶಸ್ಸಿನ ಗುಟ್ಟು: ಕುಲಪತಿ ಪ್ರೊ. ಎಂ. ಮುನಿರಾಜು



**ಬಳ್ಳಾರಿ,ಸೆ.29**–ಓದಿನಲ್ಲಿ ಶ್ರದ್ಧೆ ಹಾಗೂ ಪರಿಶ್ರಮದಿಂದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿದಾಗ ಮಾತ್ರ ಯಶಸ್ಸು ಸಾಧಿಸಲು ಸಾಧ್ಯ ಎಂದು ವಿಶ್ರೀಕೃ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ. ಮುನಿರಾಜು ಅವರು ಹೇಳಿದರು.

ವಿಶ್ವವಿದ್ಯಾಲಯದ ಗಣಿತಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಮೂರು ದಿನಗಳ ಕೆ–ಸೆಟ್, ನೆಟ್ ಹಾಗೂ ಗೇಟ್ ಪರೀಕ್ಷೆಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ, ಪ್ರಸಕ್ತ ಜಗತ್ತಿನಲ್ಲಿ ಕೌಶಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣದ ಕಲಿಕೆಯ ಅಗತ್ಯತೆಯನ್ನು ಮನಗಂಡು, ನಮ್ಮ ವಿಶ್ವವಿದ್ಯಾಲಯದಲ್ಲಿ ಮೂರು ಆಧುನಿಕ ಕಂಪ್ಯೂಟರ್ ಲ್ಯಾಬ್‌ಗಳನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮೊದಲ ಯತ್ನದಲ್ಲೇ ತೇರ್ಗಡೆಯಾಗದಿದ್ದರೂ, ಸಾಧಿಸುವ ಛಲವನ್ನು ಎಂದಿಗೂ ಕೈಬಿಡಬಾರದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ವಿಶ್ವವಿದ್ಯಾಲಯದ ಕುಲಸಚಿವರು ಹಾಗೂ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ವಿ. ಲೋಕೇಶ್, ವಿಭಾಗದ ಡಾ. ಪದ್ಮನಾಭ ರೆಡ್ಡಿ, ಡಾ. ನೀಲೂಫರ್ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ತುಮಕೂರು ವಿಶ್ವವಿದ್ಯಾಲಯದ ಡಾ. ಎಚ್. ಎಸ್. ಬೋರೇಗೌಡ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಡಾ. ಎಸ್. ಕುಂಬಿ ನರಸಯ್ಯ ಉಪಸ್ಥಿತರಿದ್ದರು.

ವಿಭಾಗದ ಸಹಾಯಕ ಪ್ರಾಧ್ಯಾಪಕರುಗಳಾದ ಡಾ. ಅಶ್ವಿನ್ ಕುಮಾರ್, ಡಾ. ಅನಿತಾ, ಡಾ. ಸರಸ್ವತಿ, ವಿಭಾಗದ ಸಿಬ್ಬಂದಿ ವರ್ಗ ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಹಾಜರಿದ್ದರು.

## ಶಿಕ್ಷಣ ಕ್ಷೇತ್ರದ ಪ್ರಮುಖರೊಂದಿಗೆ ಸಮಾಲೋಚನೆ ನಡೆಸಿದ ಮಾಜಿ ಶಾಸಕ ಸೋಮಶೇಖರರೆಡ್ಡಿ

**ಬಳ್ಳಾರಿ, ಸೆ.28.** ಬಳ್ಳಾರಿ ಜಿಲ್ಲೆಯ ಸಂಡೂರು ಮಂಡಲದ ವ್ಯಾಪ್ತಿಯ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ, ಶಿಕ್ಷಕರು ಹಾಗೂ ಶಿಕ್ಷಣ ಕ್ಷೇತ್ರದ ಪ್ರಮುಖರೊಂದಿಗೆ ಆತ್ಮೀಯವಾಗಿ ಸಮಾಲೋಚನೆ ನಡೆಸಿ, ಶಿಕ್ಷಣ ಕ್ಷೇತ್ರದ ಸಮಸ್ಯೆಗಳು, ಅಗತ್ಯತೆಗಳು ಹಾಗೂ ಮುಂದಿನ ದಿನಗಳಲ್ಲಿನ ಶಿಕ್ಷಣಾಭಿವೃದ್ಧಿಯ ಕುರಿತು ಬಳ್ಳಾರಿ ನಗರ ಮಾಜಿ ಶಾಸಕ ಸೋಮಶೇಖರರೆಡ್ಡಿ ಅವರು ಚರ್ಚೆ ನಡೆಸಿದರು.




ಶಿಕ್ಷಣ ಕ್ಷೇತ್ರದಿಂದ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಶಶಿಲ್ ನಮೋಶಿ ಅವರ ಪರವಾಗಿ ಮತಯಾಚನೆ ನಡೆಸಿ, ಶಿಕ್ಷಕರು ಹಾಗೂ ಶಿಕ್ಷಣ ಕ್ಷೇತ್ರದ ಮತದಾರರಲ್ಲಿ ಬೆಂಬಲ ನೀಡುವಂತೆ ಮನವಿ ಮಾಡಲಾಯಿತು.

ಶಿಕ್ಷಣ ಕ್ಷೇತ್ರದ ಸಮಗ್ರ ಅಭಿವೃದ್ಧಿ, ಶಿಕ್ಷಕರ ಹಿತಾಸಕ್ತಿ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ನಮ್ಮ ಅಭ್ಯರ್ಥಿಗೆ ಬೆಂಬಲ ನೀಡುವಂತೆ ಎಲ್ಲರಲ್ಲೂ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ ಕೆ.ಎಸ್. ದಿವಾಕರ್ , ಜಿಲ್ಲಾ ಉಪಾಧ್ಯಕ್ಷರಾದ ಗಾಳಿ ಶಂಕ್ರಪ್ಪ ರವರು, ಸಂಡೂರು ಮಂಡಲ ಅಧ್ಯಕ್ಷರು ಅಶೋಕ್ ಕುಮಾರ್ ರವರು ,ಪ್ರಧಾನ ಕಾರ್ಯದರ್ಶಿ ಸಂಡೂರು ಮಂಡಲ ನರಸಿಂಹ, ಮಾಜಿ ವಾರ್ಡಿನ ಅಧ್ಯಕ್ಷರು ಎರ್ರಿಸ್ವಾಮಿ ಕರಡಿ , ಯುವ ಮೋರ್ಚಾ ಉಪಾಧ್ಯಕ್ಷರು ಸಂಡೂರು ಮಂಡಲ ಸೃಜನ್ ಕುಮಾರ್ ರವರು ಹಾಗೂ ಪಕ್ಷದ ಮುಖಂಡರ, ಕಾರ್ಯಕರ್ತರು ಇನ್ನಿತರ ಭಾಗಿಯಾಗಿದ್ದರು.

## ಜಿಡಿಸಿಆರ್‌ಐನಲ್ಲಿ ಆರ್‌ಜಿಯುಎಚ್‌ಎಸ್ ವಲಯ ಮಟ್ಟದ ಚೆಸ್ ಪಂದ್ಯಾವಳಿ: 22 ಕಾಲೇಜುಗಳ 128 ವಿದ್ಯಾರ್ಥಿಗಳು ಭಾಗಿ




**ಬಳ್ಳಾರಿ,ಸೆ.29.**ಇಲ್ಲಿನ ಸರ್ಕಾರಿ ದಂತ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ಜಿಡಿಸಿಆರ್‌ಐ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ವಲಯ ಮಟ್ಟದ ಎರಡು ದಿನಗಳ ಚೆಸ್ ಪಂದ್ಯಾವಳಿಯನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ವೈದ್ಯಕೀಯ, ದಂತವೈದ್ಯಕೀಯ, ಆಯುರ್ವೇದ ಹಾಗೂ ನರ್ಸಿಂಗ್ ಸೇರಿದಂತೆ ವಿವಿಧ ವಿಭಾಗಗಳ 22 ಕಾಲೇಜುಗಳಿಂದ ಒಟ್ಟು 128 ವಿದ್ಯಾರ್ಥಿಗಳು ಅತ್ಯಂತ ಉತ್ಸಾಹ ಮತ್ತು ಕ್ರೀಡಾಸ್ಫೂರ್ತಿಯಿಂದ ಈ ಸ್ಪರ್ಧೆಯಲ್ಲಿ ಭಾಗವಹಿಸಿದರು. ಬಿಎಂಸಿಆರ್‌ಸಿಯ ಡೀನ್ ಹಾಗೂ ನಿರ್ದೇಶಕ ಡಾ. ಮರಿರಾಜ್ ಜೀರ್ ಅವರು ಗಣ್ಯರೊಂದಿಗೆ ಸಸಿಗೆ ನೀರೆರೆಯುವ ಮೂಲಕ ಪಂದ್ಯಾವಳಿಗೆ ಅಧಿಕೃತ ಚಾಲನೆ ನೀಡಿದರು.

ವೇದಿಕೆಯಲ್ಲಿ ಜಿಡಿಸಿಆರ್‌ಐ ಪ್ರಾಂಶುಪಾಲರಾದ ಡಾ. ಭಾರತಿ ಎಸ್.ಎಚ್., ಬಿಎಂಸಿಆರ್‌ಸಿ ಪ್ರಾಂಶುಪಾಲ ಡಾ. ಮಲ್ಲಿಕಾರ್ಜುನ ಎಂ., ದೈಹಿಕ ಶಿಕ್ಷಣ ನಿರ್ದೇಶಕ ಡಾ. ಜೋಸೆಫ್ ಅನಿಲ್, ದಾವಣಗೆರೆ ವಲಯದ ಕ್ರೀಡಾ ಸಂಯೋಜಕರು ಜೆಜೆಎಂಸಿ ದಾವಣಗೆರೆಯ ಪಿಇಡಿ ಗೋಪಾಲಕೃಷ್ಣ, ಮತ್ತು ಫೈಡ್ ಆರ್ಬಿಟರ್ ಬಸವರಾಜ ಎಂ. ಉಪಸ್ಥಿತರಿದ್ದರು.

ಆರೋಗ್ಯ ವಿಜ್ಞಾನ ವಿದ್ಯಾರ್ಥಿಗಳಲ್ಲಿ ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಕ್ರೀಡಾಕೂಟವನ್ನು ಹಮ್ಮಿಕೊಳ್ಳಲಾಗಿತ್ತು. ಸ್ಪರ್ಧಿಗಳು ಚದುರಂಗ ಫಲಕದ ಮೇಲೆ ತಮ್ಮ ತಂತ್ರಗಾರಿಕೆ, ತೀವ್ರ ಏಕಾಗ್ರತೆ ಹಾಗೂ ನಿರ್ಧಾರ ತೆಗೆದುಕೊಳ್ಳುವ ಕೌಶಲ್ಯಗಳನ್ನು ಪ್ರದರ್ಶಿಸುವ ಮೂಲಕ ರೋಚಕ ಪೈಪೋಟಿ ನೀಡಿದರು. ಪಂದ್ಯಗಳ ಉದ್ದಕ್ಕೂ ಕ್ರೀಡಾಪಟುಗಳು ಅತ್ಯುತ್ತಮ ಶಿಸ್ತು ಮತ್ತು ಕ್ರೀಡಾಸ್ಫೂರ್ತಿಯನ್ನು ಮೆರೆದರು.

# ಸಾಲದ ಸುಳಿಯಲ್ಲಿರುವ ನಾರಂಜಾ ಸಕ್ಕರೆ ಕಾರ್ಖಾನೆ ಉಳಿಸಲು ರೈತರ ನೆರವು

**ಬೀದರ್, ಸೆ.29:** ಸಾಲದ ಸುಳಿಯಲ್ಲಿರುವ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಉಳಿಸಿಕೊಳ್ಳುವ ದಿಸೆಯಲ್ಲಿನ ಎಲ್ಲ ಪ್ರಯತ್ನಗಳನ್ನು ಬೆಂಬಲಿಸಲಾಗುವುದು ಎಂದು ಕಾರ್ಖಾನೆಯ ಷೇರುದಾರ ಸದಸ್ಯರು ಭರವಸೆ ನೀಡಿದರು.

ಬೀದರ್ ತಾಲ್ಲೂಕಿನ ಜನವಾಡ ಸಮೀಪದ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಆವರಣದಲ್ಲಿ ನಡೆದ ಕಾರ್ಖಾನೆಯ ವಾರ್ಷಿಕ ಸರ್ವಸದಸ್ಯರ ಮಹಾಸಭೆಯಲ್ಲಿ ಕಾರ್ಖಾನೆ ಪುನಃಶ್ಚೇತನಕ್ಕೆ ರೈತರೂ ನೆರವಾಗಬೇಕು ಎಂದು ಕಾರ್ಖಾನೆ ಅಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ ಮಾಡಿದ ಮನವಿಗೆ, ಶೇರುದಾರ ಸದಸ್ಯರು ತಮ್ಮ ಕೈ ಎತ್ತುವ ಮೂಲಕ ಬೆಂಬಲಿಸಿದರು. ಕಾರ್ಖಾನೆ ಮೇಲಿನ ಸಾಲದ ಹೊರೆ ಕಡಿಮೆ ಮಾಡಲು ಹೆಚ್ಚುವರಿ ಷೇರು ಹಾಗೂ ಹೊಸದಾಗಿ ಬಿಡುಗಡೆ ಮಾಡುವ ಷೇರುಗಳನ್ನು




ಖರೀದಿಸಲು ಒಪ್ಪಿಗೆ ಸೂಚಿಸಿದರು.

ಕಾರ್ಖಾನೆಯು ಕಬ್ಬಿಗೆ ಎಂಆರ್‌ಪಿಗಿಂತ ಅಧಿಕ ಪಾವತಿಯಿಂದ 288 ಕೋಟಿ, ಉಚಿತ ಸಕ್ಕರೆ ವಿತರಣೆಯಿಂದ 21.95 ಕೋಟಿ ಹೊರೆ ಹೊತ್ತುಕೊಳ್ಳಬೇಕಾಗಿದೆ. ಸಾಲದ ಮೇಲಿನ ಬಡ್ಡಿಯ ಭಾರ ಸಹ ಕಾರ್ಖಾನೆಯ ಆರ್ಥಿಕ ಸ್ಥಿತಿಯನ್ನು ಚಿಂತಾಜನಕವಾಗಿಸಿದೆ ಎಂದು ಸೂರ್ಯಕಾಂತ ನಾಗಮಾರಪಳ್ಳಿ ತಿಳಿಸಿದರು.

ಕಾರ್ಖಾನೆ ಸ್ಥಾಪಿಸುವ ಹಂತದಲ್ಲಿ ಸದಸ್ಯ ರೈತರ ಷೇರು ಬಂಡವಾಳ 8.64 ಕೋಟಿ, ಸರ್ಕಾರದ ಷೇರು ಬಂಡವಾಳ 14.50 ಕೋಟಿ ಇತ್ತು. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನೇತೃತ್ವದಲ್ಲಿ ಕನ್ಸೋರ್ಟಿಯಂ ಅಡಿಯಲ್ಲಿ ಒಟ್ಟು 69.90 ಕೋಟಿ ಸಾಲ ಪಡೆಯಲಾಗಿತ್ತು. ಇದರಲ್ಲಿ ಡಿಸಿಸಿ ಬ್ಯಾಂಕ್‌ನಿಂದ ಪಡೆದ ಸಾಲ ಕೇವಲ 57.90 ಕೋಟಿಯಾಗಿದೆ ಎಂದು ಹೇಳಿದರು.

ಕನ್ಸೋರ್ಟಿಯಂ ಬ್ಯಾಂಕ್‌ಗಳಾದ ಅಪೆಕ್ಸ್ ಬ್ಯಾಂಕ್‌ನಿಂದ ಪಡೆದ 10 ಕೋಟಿ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಿಂದ ಪಡೆದ 2 ಕೋಟಿ ಸಾಲವನ್ನು ಬಡ್ಡಿ ಸಹಿತ ಮರು ಪಾವತಿಸಲಾಗಿದೆ ಎಂದು ತಿಳಿಸಿದರು.

ಡಿಸಿಸಿ ಬ್ಯಾಂಕಿನಿಂದ ಪಡೆದ ಸಿ.ಸಿ. ಕೀ ಸಾಲ 78 ಕೋಟಿಯನ್ನು ಅವಧಿ ಸಾಲವನ್ನಾಗಿ ಪರಿವರ್ತಿಸುವಂತೆ ಕೋರಲಾಗಿದೆ. ಬ್ಯಾಂಕಿನ ಸಿಇಒ ಅವರನ್ನು ಆಡಳಿತ ಮಂಡಳಿ ಸದಸ್ಯರೊಂದಿಗೆ ಭೇಟಿಯಾಗಿ ಕಾರ್ಖಾನೆಯ ಕಷ್ಟದ ಸ್ಥಿತಿಯನ್ನು ತಿಳಿಸಿಕೊಡಲಾಗಿದೆ ಎಂದು ಹೇಳಿದರು.

ಕಾರ್ಖಾನೆ ಪುನಃಶ್ಚೇತನಗೊಳಿಸುವ ನಿಟ್ಟಿನಲ್ಲಿ ಕೇಂದ್ರ, ರಾಜ್ಯ ಸರ್ಕಾರ, ಸಹಕಾರ ಇಲಾಖೆ, ಸಕ್ಕರೆ ಇಲಾಖೆ, ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ಮೊದಲಾದ ಸಂಸ್ಥೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ. ಆರ್ಥಿಕ ನೆರವು ಲಭಿಸಿದ್ದಲ್ಲಿ ಕಾರ್ಖಾನೆ ಸ್ಥಾಪನೆಯ ಹಂತದಲ್ಲಿ ಡಿಸಿಸಿ ಬ್ಯಾಂಕಿನಿಂದ ಪಡೆದ ಮೂಲ ಸಾಲ 57.90 ಕೋಟಿ ಏಕ ಕಾಲಿಕ ತೀರುವಳಿ ಯೋಜನೆಯ ಮೂಲಕ ಬ್ಯಾಂಕಿಗೆ ಮರು ಪಾವತಿಸಿ ಕಾರ್ಖಾನೆಯ ಆರ್ಥಿಕ ಹೊರೆ ತಗ್ಗಿಸಿ, ಕಾರ್ಖಾನೆಯನ್ನು ಆರ್ಥಿಕವಾಗಿ ಪುನಃಶ್ಚೇತನಗೊಳಿಸಲು ಸಾಧ್ಯವಾಗಲಿದೆ. ವಿವಿಧ ಘಟಕ ಸ್ಥಾಪನೆಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

# ಗುಣಮಟ್ಟದ ಬೀಜ ಬಳಕೆಯಿಂದ ಸುಸ್ಥಿರ ಕೃಷಿ ಸಾಧ್ಯ: ಪ್ರೊ.ಎಂ.ಹನುಮಂತಪ್ಪ

**ರಾಯಚೂರು, ಸೆ. 29:** ಸುಸ್ಥಿರ ಕೃಷಿಗೆ ಗುಣಮಟ್ಟದ ಬೀಜ ಬಳಕೆ ಅತ್ಯಂತ ಅಗತ್ಯವಾಗಿದ್ದು, ಬೀಜೋತ್ಪಾದನೆ, ಬೀಜೋಪಚಾರಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ರೈತರ ಆದಾಯ ಹೆಚ್ಚಿಸಿಕೊಳ್ಳಲು ಸಾಧ್ಯವಾಗಲಿದೆ ಎಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ. ಹನುಮಂತಪ್ಪ ಹೇಳಿದರು.

ನಗರದ ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರದಲ್ಲಿ ಶುಕ್ರವಾರ ಆಯೋಜಿಸಿದ್ದ ಹಿಂಗಾರು ಬೀಜ ದಿನೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಗುಣಮಟ್ಟದ ಬೀಜಗಳನ್ನು ಆಯ್ಕೆ ಮಾಡಿಕೊಂಡು ಬಳಸಬೇಕು. ಉತ್ತಮ ಬೀಜದಿಂದ ಉತ್ತಮ ಇಳುವರಿ ಪಡೆಯುವುದರ ಜೊತೆಗೆ ಕೃಷಿಯಲ್ಲಿ ಲಾಭದಾಯಕತೆ ಹೆಚ್ಚಿಸಿಕೊಳ್ಳಬಹುದು. ಹೀಗಾಗಿ ಬೀಜೋತ್ಪಾದನೆಗೆ ಹೆಚ್ಚಿನ ಪ್ರಾಮುಖ್ಯ ನೀಡುವ ಅಗತ್ಯವಿದೆ ತಿಳಿಸಿದರು.

ಕೃಷಿ ಕ್ಷೇತ್ರದಲ್ಲಿ ಬೀಜೋತ್ಪಾದನೆಗೆ ವ್ಯಾಪಕ ಅವಕಾಶಗಳಿವೆ. ರೈತರು ಬೀಜೋತ್ಪಾದನೆಯತ್ತ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡರೆ ಕೃಷಿಯನ್ನೇ ಉದ್ಯಮವಾಗಿ ಪರಿಗಣಿಸಿ ನಿರಂತರ ಆದಾಯ ಗಳಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ರೈತರಿಗೆ



ರಾಯಚೂರು ನಗರದ ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರದಲ್ಲಿ ಶುಕ್ರವಾರ ಆಯೋಜಿಸಿದ್ದ ಹಿಂಗಾರು ಬೀಜ ದಿನೋತ್ಸವವನ್ನು ವಿವಿ ಕುಲಪತಿ ಪ್ರೊ. ಎಂ.ಹನುಮಂತಪ್ಪ ಅವರು ಉದ್ಘಾಟಿಸಿ ಮಾತನಾಡಿದರು.

ಅಗತ್ಯವಾದ ವೈಜ್ಞಾನಿಕ ಮಾಹಿತಿ ಹಾಗೂ ತಾಂತ್ರಿಕ ಮಾರ್ಗದರ್ಶನ ಒದಗಿಸಬೇಕು ಎಂದು ಹೇಳಿದರು.

ಸಂಕರಣ ಬೀಜೋತ್ಪಾದನೆಯಲ್ಲಿಯೂ ಹೆಚ್ಚಿನ ಅವಕಾಶಗಳಿದ್ದು, ರೈತರು ಅದರ ಪ್ರಯೋಜನ ಪಡೆದುಕೊಳ್ಳಬೇಕು. ಸ್ಥಳೀಯ ಹವಾಮಾನ ಹಾಗೂ ರೈತರ ಅಗತ್ಯಕ್ಕೆ ಅನುಗುಣವಾಗಿ ಸಂಶೋಧನಾ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಮೂಲಕ ಕೃಷಿ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸಬೇಕು ಎಂದು ಸಲಹೆ ನೀಡಿದರು.

**ಬೀಜೋತ್ಪಾದನೆಗೆ ಉತ್ತೇಜನ:** ವಿಶ್ವವಿದ್ಯಾಲಯದ ಬೀಜ ವಿಶೇಷಾಧಿಕಾರಿ ಅರುಣಕುಮಾರ ಹೊಸಮನಿ ಮಾತನಾಡಿ, ವಿಶ್ವವಿದ್ಯಾಲಯದ ಬೀಜೋತ್ಪಾದನಾ ಚಟುವಟಿಕೆಗಳು ಹಾಗೂ ಮುಂದಿನ ದಿನಗಳಲ್ಲಿ ಬೀಜೋತ್ಪಾದನೆ ಮತ್ತು ಸಂಶೋಧನಾ ಚಟುವಟಿಕೆಗಳನ್ನು ಬಲಪಡಿಸುವ ಕಾರ್ಯಯೋಜನೆ ಕುರಿತು ಮಾಹಿತಿ ನೀಡಿದರು.

ವಿಸ್ತರಣಾ ನಿರ್ದೇಶಕ ಡಾ. ಎ.ಆರ್. ಕುರುಬರ ಮಾತನಾಡಿ, ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ಯುವ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಬೀಜೋತ್ಪಾದನೆ ಉತ್ತಮ ಕೃಷಿ ಚಟುವಟಿಕೆಯಾಗಿದ್ದು, ಕೃಷಿಯಲ್ಲಿ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೂ ಆದ್ಯತೆ ನೀಡಬೇಕು ಎಂದರು.ಕೃಷಿ ಮಹಾವಿದ್ಯಾಲಯದ ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಮುಖ್ಯಸ್ಥೆ ಎನ್.ಎಂ. ಶಕುಂತಲಾ ಮಾತನಾಡಿ, ಗ್ರಾಮ ಮಟ್ಟದಲ್ಲಿ ಸಂಕರಣ ಬೀಜೋತ್ಪಾದನೆ ಕೈಗೊಂಡು ರೈತರು ಹೆಚ್ಚಿನ ಆದಾಯ ಗಳಿಸಬೇಕು ಎಂದು ಹೇಳಿದರು.

ಸಂಶೋಧನಾ ನಿರ್ದೇಶಕ ಪ್ರಭುರಾಜ್ ಎ. ಅಧ್ಯಕ್ಷತೆ ವಹಿಸಿದ್ದರು. ರಾಯಚೂರು ತಾಲ್ಲೂಕಿನ ದಿನ್ನಿ ಗ್ರಾಮದ ರೈತ ಲಕ್ಷ್ಮೀಕಾಂತ ರೆಡ್ಡಿ ಅವರನ್ನು ಮೆಕ್ಕೆಜೋಳ ಸಂಕರಣ ತಳಿ ಆರ್‌ಸಿಆರ್‌ಎಂಎಚ್–4 ಬೀಜೋತ್ಪಾದನೆಯಲ್ಲಿ ಅಧಿಕ ಇಳುವರಿ ಪಡೆದಿದ್ದಕ್ಕಾಗಿ 'ಉತ್ತಮ ಬೀಜ ಬೆಳೆಗಾರ' ಎಂದು ಗೌರವಿಸಲಾಯಿತು.

### ಬೀದರ ನಗರ ಪ್ರವೇಶಿಸುವ ಮುನ್ನ ಎಚ್ಚರಿಕೆ

# ಎಐ ಕ್ಯಾಮರಾದಲ್ಲಿ ಸೆರೆಯಾದರೆ ಮನೆಗೇ ಬರುತ್ತದೆ ದಂಡದ ನೋಟಿಸ್

ಬೀದರ್, ಸೆ. 29 : ಬೀದರ್ ನಗರಕ್ಕೆ ಪ್ರವೇಶಿಸುವ ಮುನ್ನ ವಾಹನ ಸವಾರರು ಎಚ್ಚರಿಕೆ ವಹಿಸುವುದು ಅಗತ್ಯ. ನಗರದ ಪ್ರಮುಖ ಪ್ರವೇಶ ದ್ವಾರಗಳಲ್ಲಿ ಇದೀಗ ಅತ್ಯಾಧುನಿಕ ಎಐ ಆಧಾರಿತ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಸಂಚಾರಿ ನಿಯಮ ಉಲ್ಲಂಘಿಸುವ ವಾಹನಗಳ ಮೇಲೆ ನಿಗಾ ಇಡಲಾಗುತ್ತಿದೆ.



ರಸ್ತೆ ಅಪಘಾತಗಳನ್ನು ತಡೆಗಟ್ಟುವುದು ಹಾಗೂ ಸಂಚಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಉದ್ದೇಶದಿಂದ ನಗರದ ನಾಲ್ಕು ಪ್ರಮುಖ ಪ್ರವೇಶ ಮಾರ್ಗಗಳಲ್ಲಿ ಸ್ಮಾರ್ಟ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ನೌಬಾದ್ ಸಂಪರ್ಕ ರಸ್ತೆ, ಭಾಲ್ಕಿ ಮುಖ್ಯ ರಸ್ತೆ, ಹುಮನಾಬಾದ್ ರಸ್ತೆ ಹಾಗೂ ಕಮಠಾಣ–ಔರಾದ ರಸ್ತೆ ಸೇರಿದಂತೆ ಪ್ರಮುಖ ಹೆದ್ದಾರಿ ಪ್ರವೇಶ ಮಾರ್ಗಗಳಲ್ಲಿ ಈ ಕ್ಯಾಮರಾಗಳು ಕಾರ್ಯನಿರ್ವಹಿಸುತ್ತಿವೆ. ಜೂನ್ 6ರಿಂದ ಸೆಪ್ಟೆಂಬರ್ 26ರವರೆಗೆ ಒಟ್ಟು 8,102 ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳು ದಾಖಲಾಗಿವೆ ಎಂದು ಬೀದರ್ ಸಂಚಾರಿ ಪೊಲೀಸ್ ಠಾಣೆಯ ಅಂಕಿ–ಅಂಶಗಳು ತಿಳಿಸಿವೆ.

ಈ ಎಐ ಕ್ಯಾಮರಾಗಳು ವಾಹನ'ಗಳ ನಂಬರ್ ಪ್ಲೇಟ್‌ಗಳನ್ನು ಸ್ಕ್ಯಾನ್ ಮಾಡುತ್ತವೆ. ಬಳಿಕ ವಾಹನ ತಂತ್ರಾಂಶದ ಮೂಲಕ ಮಾಲೀಕರ ಮಾಹಿತಿಯನ್ನು ಪಡೆದು, ನಿಯಮ ಉಲ್ಲಂಘನೆಯ ಡಿಜಿಟಲ್ ಫೋಟೋ ಸಾಕ್ಷ್ಯ ಸಹಿತ ದಂಡದ ನೋಟಿಸ್‌ನ್ನು ವಾಹನ ಮಾಲೀಕರ ಮನೆಗೆ ಕಳುಹಿಸಲಾಗುತ್ತದೆ. ಹೆಲ್ಮೆಟ್ ಧರಿಸದೇ ವಾಹನ ಚಲಾಯಿಸುವುದು, ಸೀಟ್ ಬೆಲ್ಟ್ ಹಾಕದೇ ಇರುವುದು, ತ್ರಿಬಲ್ ರೈಡಿಂಗ್, ರಾಂಗ್ ಸೈಡ್ ಚಾಲನೆ ಹಾಗೂ ವಾಹನ ಚಾಲನೆ ವೇಳೆ ಮೊಬೈಲ್ ಬಳಸುವುದು ಸೇರಿದಂತೆ ವಿವಿಧ ಸಂಚಾರಿ ನಿಯಮ ಉಲ್ಲಂಘನೆಗಳನ್ನು ಎಐ ಕ್ಯಾಮರಾಗಳು ಪತ್ತೆಹಚ್ಚುತ್ತವೆ. ನಗರದ ಪ್ರವೇಶದ್ವಾರ'ಗಳಲ್ಲಿ ಈಗಾಗಲೇ ಕ್ಯಾಮರಾಗಳು ಕಾರ್ಯನಿರ್ವಹಿಸುತ್ತಿದ್ದು, ನಗರದ ಇತರೆ ಭಾಗಗಳಲ್ಲೂ ಎಐ ಕ್ಯಾಮೆರಾಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಸಾರ್ವಜನಿಕರ ಸುರಕ್ಷತೆ ಹಾಗೂ ರಸ್ತೆಗಳಲ್ಲಿ ಸುರಕ್ಷಿತ ಸಂಚಾರಕ್ಕೆ ಈ ಹೈಟೆಕ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಪ್ರತಿಯೊಬ್ಬ ವಾಹನ ಸವಾರರು ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಇಲ್ಲವಾದರೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಬೀದರ್ ಸಂಚಾರಿ ಠಾಣೆಯ ಸಿಪಿಐ ಸಂಗಮೇಶ ಜಿ. ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

# ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ್ದರೂ, ಕಣಿವೆಯ ಕಣ್ಗಾವಲು ಪ್ರಸ್ತಾವನೆಗೆ ಅಮೆರಿಕ ಉತ್ತರಕ್ಕೆ ಇರಾನ್ ನಿರೀಕ್ಷೆ

**ನ್ಯೂಯಾರ್ಕ್, ಸೆ.29 :** ಡೊನಾಲ್ಡ್ ಟ್ರಂಪ್ ಈ ಯೋಜನೆಯನ್ನು ಬಹಿರಂಗವಾಗಿ ತಿರಸ್ಕರಿಸಿದ್ದರೂ, ಟೆಹ್ರಾನ್‌ನ ಕದನ ವಿರಾಮ ಪ್ರಸ್ತಾವನೆಗೆ ಇರಾನ್ ನಾಯಕರು ಇನ್ನೂ ಅಧಿಕೃತ ಅಮೆರಿಕ ಪ್ರತಿಕ್ರಿಯೆಗಾಗಿ ಕಾಯುತ್ತಿದ್ದಾರೆ. ಕಳೆದ ವಾರ ಟೆಹ್ರಾನ್ ಏಳು ದಿನಗಳ ಕದನ ವಿರಾಮ ಮತ್ತು ಹಾರ್ಮುಜ್ ಜಲಸಂಧಿಯನ್ನು ಹಂತ ಹಂತವಾಗಿ ಮತ್ತೆ ತೆರೆಯಲು ಆಫರ್ ನೀಡಿದ ನಂತರ ಇತ್ತೀಚಿನ ರಾಜತಾಂತ್ರಿಕ ಪ್ರಯತ್ನಗಳು ನಡೆದಿವೆ. ಟ್ರಂಪ್ ಪ್ರಸ್ತಾವನೆಯನ್ನು ತಿರಸ್ಕರಿಸಿದರು, ಆದರೆ ಪ್ರಾದೇಶಿಕ ಮಧ್ಯಸ್ಥಿಕೆದಾರರ ಮೂಲಕ ಪರೋಕ್ಷ ಮಾತುಕತೆಗಳು ಮುಂದುವರಿದಿವೆ, ಅಮೆರಿಕ ಮತ್ತು ಇರಾನ್ ಅಧಿಕಾರಿಗಳು ಸೋಮವಾರ ಮಧ್ಯಸ್ಥಿಕೆದಾರರೊಂದಿಗೆ ಪ್ರತ್ಯೇಕ ಚರ್ಚೆಗಳನ್ನು ನಡೆಸಿದ್ದಾರೆ. ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘಚಿ ಮಾತನಾಡಿ, ಟೆಹ್ರಾನ್ ತನ್ನ ಪ್ರಸ್ತಾವನೆಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿಲ್ಲ ಮತ್ತು ಖತಾರ್ ಮಧ್ಯಸ್ಥಿಕೆದಾರರ ಮೂಲಕ ವಾಷಿಂಗ್ಟನ್ ಪ್ರತಿಕ್ರಿಯಿಸಲು ಕಾಯುತ್ತಿದೆ ಎಂದು ಹೇಳಿದರು.

ಅರಾಘಚಿ, "ಮಧ್ಯಸ್ಥಿಕೆದಾರರ ಮೂಲಕ ಅಂತಿಮ ನಿಲುವನ್ನು ತಿಳಿಸಲು ನಾವು ಕಾಯುತ್ತಿದ್ದೇವೆ ಮತ್ತು ಅದರ ಆಧಾರದ ಮೇಲೆ ನಾವು ನಿರ್ಧರಿಸುತ್ತೇವೆ. ಏಳು ಅಂಶಗಳ ಯೋಜನೆ ಎಂದು ಕರೆಯಲ್ಪಡುವ ನಮ್ಮ ಯೋಜನೆಯನ್ನು ಖತಾರ್ ಮಧ್ಯಸ್ಥಿಕೆದಾರರ ಮೂಲಕ ಅಮೆರಿಕನ್ನರಿಗೆ ತಿಳಿಸಲಾಗಿದೆ. ಅಮೆರಿಕದ ಅಧ್ಯಕ್ಷರು ಮತ್ತು ಇತರರು ಹೇಳಿದ ವಿಷಯಗಳ ಹೊರತಾಗಿಯೂ, ಮಂಗಳವಾರದ ವೇಳೆಗೆ ಮಧ್ಯಸ್ಥಿಕೆದಾರರ ಮೂಲಕ ಅಮೆರಿಕದಿಂದ ಅಧಿಕೃತ ಪ್ರತಿಕ್ರಿಯೆಗಾಗಿ ನಾವು ಕಾಯುತ್ತಿದ್ದೇವೆ ಎಂದು ನಾನು ಹೇಳಿದ್ದೇನೆ" ಎಂದಿದ್ದಾರೆ.

ಮುಂದಿನ ಹಾದಿಯನ್ನು ಕಂಡುಕೊಳ್ಳುವ ಪ್ರಯತ್ನಗಳು ಮುಂದುವರಿದಂತೆ ಅರಾಘಚಿ ಸೋಮವಾರ ನ್ಯೂಯಾರ್ಕ್‌ನಲ್ಲಿ ಖತಾರ್ ಮಧ್ಯಸ್ಥಿಕೆದಾರರನ್ನು ಮತ್ತೆ ಭೇಟಿಯಾದರು. ಅರಾಘಚಿ, "ಇರಾನ್‌ನ ಪರಿಸ್ಥಿತಿಗಳನ್ನು ಪೂರೈಸಲು ಹೇಗೆ ಹಾದಿಯನ್ನು ಕಂಡುಕೊಳ್ಳಬಹುದು ಮತ್ತು ಆ ಪರಿಸ್ಥಿತಿಗಳನ್ನು ಹೇಗೆ ಪೂರೈಸಬಹುದು ಎಂಬುದರ ಕುರಿತು ನಾವು ಚರ್ಚಿಸಿದ್ದೇವೆ" ಎಂದು ಹೇಳಿದರು. ಖತಾರ್ ಮಧ್ಯಸ್ಥಿಕೆದಾರರು ಆಲೋಚನೆಗಳನ್ನು ಪ್ರಸ್ತುತಪಡಿಸಿದರು, ಮತ್ತು ನಾವು ಅವುಗಳನ್ನು ಚರ್ಚಿಸಿದ್ದೇವೆ; ಅವರು ಅಮೆರಿಕದ ಕಡೆಯೊಂದಿಗೆ ಈ ವಿಷಯವನ್ನು ಮತ್ತೊಮ್ಮೆ ಎತ್ತುವ ಸಾಧ್ಯತೆಯಿದೆ, ಅದರ ನಂತರ ಅಂತಿಮ ಯುಎಸ್ ಪ್ರತಿಕ್ರಿಯೆಯನ್ನು ನಮಗೆ ತಲುಪಿಸಲಾಗುವುದು."

ಅಮೆರಿಕ ಟೆಹ್ರಾನ್‌ನ ಷರತ್ತುಗಳನ್ನು ಪೂರೈಸಿದರೆ ಹಾರ್ಮುಜ್ ಜಲಸಂಧಿಯನ್ನು ಹಂತ ಹಂತವಾಗಿ ಮತ್ತೆ ತೆರೆಯಲು ಮತ್ತು ವಾಷಿಂಗ್ಟನ್‌ನೊಂದಿಗೆ ಮಾತುಕತೆಗಳನ್ನು ಪುನರಾರಂಭಿಸಲು ಇರಾನ್ ಕಳೆದ ವಾರ ಏಳು ದಿನಗಳ ಯೋಜನೆಯನ್ನು ಪ್ರಸ್ತುತಪಡಿಸಿತು. ಸಂಘರ್ಷವನ್ನು ಕೊನೆಗೊಳಿಸುವ ಹಿಂದಿನ ಪ್ರಯತ್ನವು ಮುರಿಯುವ ಮೊದಲು ಜೂನ್‌ನಲ್ಲಿ ಎರಡೂ ಕಡೆಗಳ ನಡುವೆ ಒಪ್ಪಿಕೊಂಡ ತಿಳುವಳಿಕೆಯ ಜ್ಞಾಪಕ ಪತ್ರದಲ್ಲಿ ರೂಪಿಸಲಾದ ಷರತ್ತುಗಳನ್ನು ಈ ಪ್ರಸ್ತಾವನೆಯು ಆಧರಿಸಿದೆ. ಇದು ಇರಾನ್ ಬಂದರುಗಳ ಮೇಲಿನ ಯುಎಸ್ ನೌಕಾ ದಿಗ್ಬಂಧನದ ಅಂತ್ಯ, ಇರಾನ್ ತೈಲ ನಿರ್ಬಂಧಗಳ ಮೇಲಿನ ವಿನಾಯಿತಿಗಳು ಮತ್ತು ನಿರ್ಬಂಧಿಸಲಾದ ಇರಾನ್ ಆಸ್ತಿಗಳ ಬಿಡುಗಡೆ ಸೇರಿದಂತೆ ಕ್ರಮಗಳಿಗೆ ಕರೆ ನೀಡುತ್ತದೆ. ನಂತರ ಇರಾನ್ ಜಲಸಂಧಿಯನ್ನು ಮತ್ತೆ ತೆರೆಯುತ್ತದೆ ಮತ್ತು ವ್ಯಾಪಕ ಪರಿಹಾರಕ್ಕಾಗಿ ವ್ಾತ್ುಕ್ತ್ೆಗ್ಳ್ನ್ು ಪುನರಾರಂಭಿಸುತ್ತದೆ.





ಇರಾನ್‌ಗೆ ಕೆಲವು ನಿರ್ಬಂಧಗಳ ಪರಿಹಾರ ಮತ್ತು ಸ್ಥಗಿತಗೊಂಡ ಹಣಕ್ಕೆ ಪ್ರವೇಶವನ್ನು ನೀಡಲು ಸಿದ್ಧರಿದ್ದಾರೆ ಎಂಬ ಆಕ್ಸಿಯೋಸ್ ವರದಿಯನ್ನು ಟ್ರಂಪ್ ತಿರಸ್ಕರಿಸಿದ್ದಾರೆ ಹಾಗೂ ತಾವು "ಏನನ್ನೂ ನೀಡಿಲ್ಲ" ಎಂದು ಪ್ರತಿಪಾದಿಸಿದ್ದಾರೆ.




# ದ್ವಿರಾಷ್ಟ್ರ ಪರಿಹಾರಕ್ಕೆ ಭಾರತದ ಬೆಂಬಲ: ಇಸ್ರೇಲ್-ಪ್ಯಾಲೇಸ್ತಿನ್ ಸಂಘರ್ಷದ ಕುರಿತು ಭಾರತದ ನಿಲುವನ್ನು ಪುನರುಚ್ಚರಿಸಿದ ವಿದೇಶಾಂಗ ಸಚಿವಾಲಯ

**ನವದೆಹಲಿ, ಸೆ. 29:** ಇಸ್ರೇಲ್-ಪ್ಯಾಲೇಸ್ತಿನ್ ಸಂಘರ್ಷಕ್ಕೆ ದ್ವಿರಾಷ್ಟ್ರ ಪರಿಹಾರವನ್ನು ಬೆಂಬಲಿಸುವ ಭಾರತದ ನಿಲುವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಮಂಗಳವಾರ ಪುನರುಚ್ಚರಿಸಿದೆ. 81 ನೇ ವಿಶ್ವಸಂಸ್ಥೆಯ ಮಹಾಸಭೆಯ ನಡುವೆ ನಡೆದ ತ್ರಿಪಕ್ಷೀಯ ಸಚಿವ ಮಟ್ಟದ ಸಭೆಯ ನಂತರ ಭಾರತ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾ ಹೊರಡಿಸಿದ ಜಂಟಿ ಹೇಳಿಕೆಯ ಹಿನ್ನೆಲೆಯಲ್ಲಿ ವಿದೇಶಾಂಗ ಸಚಿವಾಲಯದ ವಕ್ತಾರ ರಂಧೀರ್ ಜೈಸ್ವಾಲ್ ಅವರು ನವದೆಹಲಿಯ ಈ ನಿಲುವನ್ನು ಸ್ಪಷ್ಟಪಡಿಸಿದರು.



ಜಂಟಿ ಹೇಳಿಕೆಯಲ್ಲಿ ಉಲ್ಲೇಖಿಸಲಾದ ವಿಷಯಕ್ಕೆ ಸಂಬಂಧಿಸಿದಂತೆ ಭಾರತವು ಪ್ಯಾಲೇಸ್ತಿನ್ ಕುರಿತ ತನ್ನ ಕಳವಳವನ್ನು ಇಸ್ರೇಲ್‌ಗೆ ತಿಳಿಸಿದೆಯೇ ಎಂದು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಜೈಸ್ವಾಲ್, "ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಡುವೆ ಭಾರತ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾ ಹೀಗೆ ಮೂರು ದೇಶಗಳ ವಿದೇಶಾಂಗ ಸಚಿವರ ಮಟ್ಟದಲ್ಲಿ ಸಭೆ ನಡೆಯಿತು. ಸಭೆಯ ನಂತರ, ಮೂರು ದೇಶಗಳು ಸೇರಿ ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಿವೆ. ಇದು ಮೂರು ದೇಶಗಳ ಸಾಹಿತ್ಯಿಕ ಮತ್ತು ಸಾಮೂಹಿಕ ಅಭಿಪ್ರಾಯವನ್ನು ಒಳಗೊಂಡಿರುವ ಜಂಟಿ ಹೇಳಿಕೆಯಾಗಿದೆ," ಎಂದು ಹೇಳಿದರು. ಈ ಜಂಟಿ ಹೇಳಿಕೆಯು ವ್ಯಾಪಕ ಶ್ರೇಣಿಯ ಆರ್ಥಿಕ, ಅಭಿವೃದ್ಧಿ ಮತ್ತು ರಾಜಕೀಯ ವಿಷಯಗಳನ್ನು ಒಳಗೊಂಡಿದೆ, ಜೊತೆಗೆ ಪ್ಯಾಲೇಸ್ತಿನ್ ಕುರಿತು ಈ ದೇಶಗಳ ನಿಲುವನ್ನು ಪುನರುಚ್ಚರಿಸಿದೆ ಎಂದು ಜೈಸ್ವಾಲ್ ತಿಳಿಸಿದರು. "ಅಲ್ಲಿ ಹಲವು ಆರ್ಥಿಕ ವಿಷಯಗಳು, ಅಭಿವೃದ್ಧಿ ವಿಷಯಗಳು ಮತ್ತು ಕೆಲವು ರಾಜಕೀಯ ವಿಷಯಗಳು ಪ್ರತಿಫಲಿಸಿವೆ. ಪ್ಯಾಲೇಸ್ತಿನ್ ಕುರಿತು ಭಾರತದ ಸ್ವಂತ ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನಾವು ದ್ವಿ-ರಾಷ್ಟ್ರ ಪರಿಹಾರವನ್ನು ಬೆಂಬಲಿಸುತ್ತೇವೆ," ಎಂದು ವಿದೇಶಾಂಗ ಸಚಿವಾಲಯದ ವಕ್ತಾರರು ಸೇರಿಸಿದರು. 14 ನೇ ಐಬಿಎಸ್‌ಎ (**IBSA**) ತ್ರಿಪಕ್ಷೀಯ ಸಚಿವರ ಆಯೋಗದ ಸಭೆಯು ಸೆಪ್ಟೆಂಬರ್ 24 ರಂದು ನ್ಯೂಯಾರ್ಕ್‌ನಲ್ಲಿ **UNGA** ಯ 81 ನೇ ಅಧಿವೇಶನದ ನಡುವೆ ನಡೆಯಿತು. ಈ ಸಭೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ದಕ್ಷಿಣ ಆಫ್ರಿಕಾದ ಅಂತಾರಾಷ್ಟ್ರೀಯ ಸಂಬಂಧಗಳು ಮತ್ತು ಸಹಕಾರ ಸಚಿವ ರೊನಾಲ್ಡ್ ಲಮೋಲಾ ಮತ್ತು ಬ್ರೆಜಿಲ್ ವಿದೇಶಾಂಗ ಸಚಿವ ಮೌರೊ ವಿಯೆರಾ ಭಾಗವಹಿಸಿದ್ದರು.

## ಸ್ವಿಸ್ ಅಧ್ಯಕ್ಷ ಗೈ ಪಾರ್ಮೆಲಿನ್ ಮುಂದಿನ ವಾರ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆ

**ನವದೆಹಲಿ, ಸೆ.29:** ಸ್ವಿಸ್ ಅಧ್ಯಕ್ಷ ಗೈ ಪಾರ್ಮೆಲಿನ್ ಅವರು ಮುಂದಿನ ವಾರ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದ್ದು, ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ಭೇಟಿಯು ಈ ಪ್ರವಾಸದ ಪ್ರಮುಖ ವಿಷಯವಾಗಿರಲಿದೆ. ಮುಂಬರುವ ಈ ಭೇಟಿಯು ಎರಡೂ ದೇಶಗಳಿಗೆ ದ್ವಿಪಕ್ಷೀಯ ಸಹಕಾರವನ್ನು, ವಿಶೇಷವಾಗಿ ವ್ಯಾಪಾರ, ಹೂಡಿಕೆ, ತಂತ್ರಜ್ಞಾನ, ನಾವೀನ್ಯತೆ ಮತ್ತು ಕಾರ್ಯತಂತ್ರದ ಸಹಭಾಗಿತ್ವದ ಉದಯೋನ್ಮುಖ ಕ್ಷೇತ್ರಗಳಲ್ಲಿ ಮತ್ತಷ್ಟು ಬಲಪಡಿಸಲು ಅವಕಾಶವನ್ನು ಒದಗಿಸುವ ನಿರೀಕ್ಷೆಯಿದೆ.

# ಡೀಲ್ ನಂತರ ಗ್ರೀನ್‌ಲ್ಯಾಂಡ್‌ನಲ್ಲಿ ಅಮೆರಿಕ ಅಪರೂಪದ ಖನಿಜಗಳ ಗಣಿಗಾರಿಕೆ ನಡೆಸುವ ಸಾಧ್ಯತೆ: ರೇಬಿಯೋ ಸುಳಿವು

**ವಾಷಿಂಗ್ಟನ್, ಸೆ.29 :** ಸ್ಥಳೀಯ ಅಧಿಕಾರಿಗಳೊಂದಿಗೆ ಒಪ್ಪಂದ ಮಾಡಿಕೊಂಡ ನಂತರ ಗ್ರೀನ್‌ಲ್ಯಾಂಡ್‌ನಲ್ಲಿ ಅಪರೂಪದ ಖನಿಜಗಳನ್ನು ಜಂಟಿಯಾಗಿ ಗಣಿಗಾರಿಕೆ ಮಾಡುವ ಸಾಧ್ಯತೆಯನ್ನು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೇಬಿಯೋ ಸೂಚಿಸಿದ್ದಾರೆ. ಸೆಪ್ಟೆಂಬರ್ 22 ರಂದು, ಯುಎಸ್, ಡೆನ್ಮಾರ್ಕ್ ಮತ್ತು ಗ್ರೀನ್‌ಲ್ಯಾಂಡ್ ದ್ವೀಪದಲ್ಲಿ ಅಮೆರಿಕದ ಮಿಲಿಟರಿ ಉಪಸ್ಥಿತಿಯನ್ನು ವಿಸ್ತರಿಸಲು ಒಪ್ಪಂದಕ್ಕೆ ಸಹಿ ಹಾಕಿದವು. ದ್ವೀಪದಲ್ಲಿ ಸಮೃದ್ಧವಾಗಿರುವ ಅಪರೂಪದ ಖನಿಜಗಳ ಗಣಿಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಯುಎಸ್‌ಗೆ ಅವಕಾಶವಿದೆಯೇ ಎಂದು ಫಾಕ್ಸ್ ನ್ಯೂಸ್ ನೀಡಿದ ಸಂದರ್ಶನದಲ್ಲಿ ಕೇಳಿದಾಗ, "ಖಂಡಿತ, ನಾವು ಅವರ ಸಹಭಾಗಿತ್ವದಲ್ಲಿ ಇದನ್ನು ಮಾಡುತ್ತೇವೆ" ಎಂದು ರೇಬಿಯೋ ಹೇಳಿದರು. ಇದು ಯುಎಸ್‌ನ ಆದ್ಯತೆಯಾಗಿರಲಿಲ್ಲ, ಆದರೆ ಸ್ಥಳೀಯ ಅಧಿಕಾರಿಗಳೊಂದಿಗೆ ಒಪ್ಪಂದ ಅಂತಿಮಗೊಂಡ ನಂತರ ಈ ಅವಕಾಶ ಬಂದಿದೆ ಎಂದು ವಿದೇಶಾಂಗ ಕಾರ್ಯದರ್ಶಿ ಒತ್ತು ನೀಡಿದರು. "ಈಗ ಈ (ಒಪ್ಪಂದ) ನಮ್ಮ ಮುಂದಿರುವುದರಿಂದ, ಅಲ್ಲಿ ಉತ್ತಮ ಹೂಡಿಕೆಗಳನ್ನು ಮಾಡಲು ನಮಗೆ ಅವಕಾಶವಿದೆ ಎಂದು ನಾನು ಭಾವಿಸುತ್ತೇನೆ" ಎಂದು ಅವರು ಮುಕ್ತಾಯಗೊಳಿಸಿದರು. ಗ್ರೀನ್‌ಲ್ಯಾಂಡ್ ಗಮನಾರ್ಹ ಖನಿಜ ಸಂಪತ್ತನ್ನು ಹೊಂದಿದೆ.



ಡೆನ್ಮಾರ್ಕ್ ಮತ್ತು ಗ್ರೀನ್‌ಲ್ಯಾಂಡ್‌ನ ಜಿಯೋಲಾಜಿಕಲ್ ಸರ್ವೆ (GEUS) ಪ್ರಕಾರ, ಯುರೋಪಿಯನ್ ಯೂನಿಯನ್‌ನಿಂದ "ನಿರ್ಣಾಯಕ" ಎಂದು ವರ್ಗೀಕರಿಸಲ್ಪಟ್ಟ 34 ಕಚ್ಚಾ ವಸ್ತುಗಳಲ್ಲಿ 24 ವಸ್ತುಗಳನ್ನು ಈ ದ್ವೀಪದಲ್ಲಿ ಗುರುತಿಸಲಾಗಿದೆ. ಪತ್ತೆಯಾದ ಅನೇಕ ಸಂಪನ್ಮೂಲಗಳ ನಿಖರವಾದ ಪ್ರಮಾಣವನ್ನು ಇನ್ನೂ ನಿರ್ಧರಿಸಲಾಗಿಲ್ಲ. ಆದಾಗ್ಯೂ, ಈ ನಿಕ್ಷೇಪಗಳ ಅಭಿವೃದ್ಧಿಯು ನೈಸರ್ಗಿಕ ಪರಿಸ್ಥಿತಿಗಳು ಮತ್ತು ಮೂಲಸೌಕರ್ಯಗಳ ಕೊರತೆಯಿಂದಾಗಿ ಸಂಕೀರ್ಣವಾಗಿದೆ.




# ಭಾರತ-ಕೆನ್ಯಾ ಕಡಲ ಸಹಕಾರವನ್ನು ಹೆಚ್ಚಿಸಲು ಐಎನ್‌ಎಸ್ ತರಕಾಶ್ ಮೊಂಬಾಸಾ ಬಂದರಿಗೆ ಭೇಟಿ

**ಮೊಂಬಾಸಾ, ಸೆ.29:** ಭಾರತ-ಕೆನ್ಯಾ ಕಡಲ ಸಹಕಾರವನ್ನು ಪಶ್ಚಿಮ ಹಿಂದೂ ಮಹಾಸಾಗರದಲ್ಲಿ ಉತ್ತೇಜಿಸುವ ಉದ್ದೇಶದಿಂದ, ಭಾರತೀಯ ನೌಕಾಪಡೆಯ ಮುಂಚೂಣಿ ಮಾರ್ಗದರ್ಶಿತ ಕ್ಷಿಪಣಿ ಫ್ರಿಗೇಟ್ 'ಐಎನ್‌ಎಸ್ ತರಕಾಶ್' (INS Tarkash) ಮಂಗಳವಾರ ಕಾರ್ಯಾಚರಣೆಯ ನವೀಕರಣಕ್ಕಾಗಿ (Operational Turnaround) ಮೊಂಬಾಸಾ ಬಂದರನ್ನು ತಲುಪಿದೆ. ಈ ಹಡಗು ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 2 ರವರೆಗೆ ಮೊಂಬಾಸಾದಲ್ಲಿ ಇರಲಿದೆ. ನೈರೋಬಿಯಲ್ಲಿರುವ ಭಾರತೀಯ ಹೈಕಮಿಷನ್ ಪ್ರಕಾರ, ಈ ಬಂದರು ಭೇಟಿಯ ಸಮಯದಲ್ಲಿ ವೃತ್ತಿಪರ ವಿನಿಮಯಗಳು, ಸಿಬ್ಬಂದಿಗಳ ನಡುವಿನ ಸಂಪರ್ಕ ಮತ್ತು ಸಮುದಾಯ ಸಂಪರ್ಕ ಕಾರ್ಯಕ್ರಮಗಳು ನಡೆಯಲಿವೆ. ಈ ಭೇಟಿಯ ನಂತರ, ಐಎನ್‌ಎಸ್ ತರಕಾಶ್ ಕೆನ್ಯಾ ನೌಕಾಪಡೆಯೊಂದಿಗೆ ಜಂಟಿ ನೌಕಾ ಅಭ್ಯಾಸವನ್ನು (Passage Exercise) ನಡೆಸಲಿದೆ. ಈ ಭೇಟಿಯು ಪಶ್ಚಿಮ ಹಿಂದೂ ಮಹಾಸಾಗರದಲ್ಲಿ ಭಾರತ-ಕೀನ್ಯಾ ಕಡಲ ಸಹಕಾರವನ್ನು ಹೆಚ್ಚಿಸುತ್ತದೆ ಮತ್ತು ಭಾರತದ 'ಮಹಾಸಾಗರ್' (MAHASAGAR) ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ ಎಂದು ಹೈಕಮಿಷನ್ ತಿಳಿಸಿದೆ. ಅಲ್ಲದೆ, ಅಕ್ಟೋಬರ್ 1 ರಂದು ಬೆಳಗ್ಗೆ 11 ರಿಂದ ಸಂಜೆ 4 ರವರೆಗೆ ಸಾರ್ವಜನಿಕರ ವೀಕ್ಷಣೆಗೆ ಐಎನ್‌ಎಸ್ ತರಕಾಶ್ ಮುಕ್ತವಾಗಿರುತ್ತದೆ ಎಂದು ಹೈಕಮಿಷನ್ ಹೇಳಿದೆ.



# ಮಹಿಳೆಯರ 4X400 ಮೀಟರ್ ರಿಲೇಯಲ್ಲಿ ಚಿನ್ನ ಭಾರತದ ವನಿತೆಯರ ಅಭೂತಪೂರ್ವ ಸಾಧನ

**ಐಚಿ-ನಗೋಯಾ, ಸೆಪ್ಟೆಂಬರ್ 29:** ಐಚಿ-ನಗೋಯಾ ಏಷ್ಯನ್ ಗೇಮ್ಸ್‌ನಲ್ಲಿ ಅಥ್ಲೆಟಿಕ್ಸ್ ವಿಭಾಗದಲ್ಲಿ ಚಿನ್ನದ ಪದಕಕ್ಕಾಗಿ ಭಾರತದ ದೀರ್ಘಕಾಲದ ಕಾಯುವಿಕೆ ಮಂಗಳವಾರ ಕೊನೆಗೊಂಡಿತು. ಕಿರಣ್ ಪಹಲ್, ಮಚೆಟ್ಟಿರ ಪೂವಮ್ಮ, ಪ್ರಾಚಿ ಮತ್ತು ವಿತ್ಯಾ ರಾಮರಾಜ್ ಅವರನ್ನೊಳಗೊಂಡ ಮಹಿಳೆಯರ 4x400 ಮೀಟರ್ ರಿಲೇ ತಂಡವು ಅತ್ಯುತ್ತಮ ಸಂಯಮದ ಪ್ರದರ್ಶನ ನೀಡಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.



ಫೈನಲ್‌ನಲ್ಲಿ ಭಾರತೀಯ ತಂಡವು 3:29.69 ನಿಮಿಷಗಳ ಸಮಯದೊಂದಿಗೆ ಪ್ರಥಮ ಸ್ಥಾನ ಪಡೆಯಿತು; ಬಹ್ರೇನ್ 3:30.21 ಸಮಯದೊಂದಿಗೆ ಬೆಳ್ಳಿ ಮತ್ತು ಚೀನಾ 3:31.02 ಸಮಯದೊಂದಿಗೆ ಕಂಚಿನ ಪದಕವನ್ನು ಗೆದ್ದುಕೊಂಡವು. ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ಸರಣಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದ ನಂತರ, ಈ ಕ್ರೀಡಾಕೂಟದಲ್ಲಿ ಭಾರತಕ್ಕೆ ಲಭಿಸಿದ ಮೊದಲ ಅಥ್ಲೆಟಿಕ್ಸ್ ಚಿನ್ನದ ಪದಕ ಇದಾಗಿದೆ. ತೀವ್ರ ಪೈಪೋಟಿಯಿಂದ ಕೂಡಿದ್ದ ಈ ಓಟದಲ್ಲಿ ಭಾರತೀಯ ತಂಡವು ಸಂಯಮ ಕಾಯ್ದುಕೊಂಡಿತು; ಆರಂಭದಲ್ಲಿ ಬಹ್ರೇನ್ ಮತ್ತು ಚೀನಾ ತಂಡಗಳು ಪೈಪೋಟಿ ನೀಡಿದರೂ, ಅಂತಿಮ ಹಂತದಲ್ಲಿ ಭಾರತ ಮುನ್ನಡೆ ಸಾಧಿಸಿ ಗೆಲುವು ದಾಖಲಿಸಿತು. ವಿತ್ಯಾ ಅವರಿಗೆ, ಈ ರಿಲೇ ಗೆಲುವು ಐಚಿ-ನಗೋಯಾದಲ್ಲಿನ ಅವರ ಗಮನಾರ್ಹ ಮೂರು ಪದಕಗಳ ಸಾಧನೆಗೆ ಕಿರೀಟಪ್ರಾಯವಾಯಿತು. ಅವರು ಈ ಹಿಂದೆ ಮಿಶ್ರ 4x400 ಮೀಟರ್ ರಿಲೇಯಲ್ಲಿ ಭಾರತಕ್ಕೆ ಬೆಳ್ಳಿ ಪದಕ ಗೆಲ್ಲಲು ಸಹಾಯ ಮಾಡಿದ್ದರು ಮತ್ತು ಮಹಿಳೆಯರ 400 ಮೀಟರ್ ಹರ್ಡಲ್ಸ್ (ಅಡಚಣೆ ಓಟ) ಸ್ಪರ್ಧೆಯಲ್ಲಿ ಮಹತ್ವದ ವೈಯಕ್ತಿಕ ಪ್ರದರ್ಶನ ನೀಡಿದ್ದರು.

ಹರ್ಡಲ್ಸ್ ಸ್ಪರ್ಧೆಯಲ್ಲಿ ವಿತ್ಯಾ 54.75 ಸೆಕೆಂಡುಗಳ ಸಮಯದೊಂದಿಗೆ ಕಂಚಿನ ಪದಕ ಗೆದ್ದರು ಮತ್ತು ಪಿ.ಟಿ. ಉಷಾ ಅವರ 55.42 ಸೆಕೆಂಡುಗಳ 42 ವರ್ಷಗಳ ಹಳೆಯ ರಾಷ್ಟ್ರೀಯ ದಾಖಲೆಯನ್ನು ಮುರಿದರು. ನಂತರ ಮಂಗಳವಾರ ಮತ್ತೆ ಕಣಕ್ಕಿಳಿದ ಅವರು, ಭಾರತೀಯ ತಂಡವನ್ನು ಚಿನ್ನದ ಗೆಲುವಿನತ್ತ ಮುನ್ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿದರು ಮತ್ತು ಈ ಕ್ರೀಡಾಕೂಟದಲ್ಲಿ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳ ಸಂಪೂರ್ಣ ಸಾಧನೆಯನ್ನು ಪೂರೈಸಿದರು.

ಕ್ರೀಡಾಕೂಟದ ಬಹುಭಾಗವು ಯಾವುದೇ ಪ್ರಥಮ ಸ್ಥಾನದ (ಚಿನ್ನದ ಪದಕದ) ಗೆಲುವಿಲ್ಲದೆ ಕಳೆದಿದ್ದರಿಂದ, ಭಾರತೀಯ ಅಥ್ಲೆಟಿಕ್ಸ್ ಪಾಲಿಗೆ ಈ ಚಿನ್ನದ ಪದಕವು ವಿಶೇಷ ಮಹತ್ವದ್ದಾಗಿತ್ತು. ಮಂಗಳವಾರ ಭಾರತವು ಅಥ್ಲೆಟಿಕ್ಸ್‌ನಲ್ಲಿ ಈಗಾಗಲೇ ಹಲವಾರು ಗಮನಾರ್ಹ ಪ್ರದರ್ಶನಗಳನ್ನು ನೀಡಿತ್ತು. ಗುಲ್ವೀರ್ ಸಿಂಗ್ ಪುರುಷರ 5000 ಮೀಟರ್ ಓಟದಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಪದಕಗಳ ಹ್ಯಾಟ್ರಿಕ್ ಪೂರೈಸಿದರೆ, ಪೂಜಾ ಮಹಿಳೆಯರ ಹೈಜಂಪ್‌ನಲ್ಲಿ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡರು. ಗುಲ್ವೀರ್ 5000 ಮೀಟರ್ ಓಟವನ್ನು 13:32.75 ಸೆಕೆಂಡುಗಳಲ್ಲಿ ಪೂರೈಸಿ ಕಂಚಿನ ಪದಕವನ್ನು ಗೆದ್ದುಕೊಂಡರು; ಇದರೊಂದಿಗೆ ಅವರು ಈಗಾಗಲೇ 10,000 ಮೀಟರ್ ಮತ್ತು 1500 ಮೀಟರ್ ಓಟಗಳಲ್ಲಿ ಗೆದ್ದಿದ್ದ ಬೆಳ್ಳಿ ಪದಕಗಳ ಪಟ್ಟಿಗೆ ಮತ್ತೊಂದು ಪದಕವನ್ನು ಸೇರಿಸಿದರು.

ಭಾರತವು ಮಿಶ್ರ 4x100 ಮೀಟರ್ ರಿಲೇಯಲ್ಲಿಯೂ ಕಂಚಿನ ಪದಕವನ್ನು ಪಡೆಯುವ ಮೂಲಕ, ಅಥ್ಲೆಟಿಕ್ಸ್‌ನಲ್ಲಿ ಯಶಸ್ವಿ ದಿನವೊಂದಕ್ಕೆ ಮತ್ತೊಂದು ಪದಕದ ಸಾಧನೆಯನ್ನು ಸೇರಿಸಿತು. ಆದಾಗ್ಯೂ, ಮಹಿಳೆಯರ 4x400 ಮೀಟರ್ ರಿಲೇಯಲ್ಲಿನ ಗೆಲುವು ಅತ್ಯಂತ ಮಹತ್ವದ ಸಾಧನೆಯಾಗಿ ಹೊರಹೊಮ್ಮಿತು; ಏಕೆಂದರೆ, ಅಥ್ಲೆಟಿಕ್ಸ್‌ನಲ್ಲಿ ಪದಕಗಳನ್ನು ಗೆಲ್ಲುವ ತನ್ನ ಸತತ ಪ್ರಯತ್ನವನ್ನು ಭಾರತವು ಅಂತಿಮವಾಗಿ ಚಿನ್ನದ ಪದಕವನ್ನಾಗಿ ಪರಿವರ್ತಿಸಿತು.

ಮಹಿಳೆಯರ 4x400 ಮೀಟರ್ ರಿಲೇಯಲ್ಲಿನ ಈ ಗೆಲುವು ಐಚಿ-ನಗೋಯಾದಲ್ಲಿ ಭಾರತವನ್ನು ಅಥ್ಲೆಟಿಕ್ಸ್‌ನ ಅಗ್ರಸ್ಥಾನಕ್ಕೇರಿಸಿತು ಮತ್ತು ಟ್ರ್ಯಾಕ್ ಹಾಗೂ ಫೀಲ್ಡ್ ವಿಭಾಗಗಳಲ್ಲಿ ಅನೇಕ ಪದಕಗಳನ್ನು ಗೆದ್ದ ದಿನಕ್ಕೆ ಸೂಕ್ತವಾದ ಮುಕ್ತಾಯವನ್ನು ಒದಗಿಸಿತು. ಭಾರತೀಯ ತಂಡವು 3:29.69 ಸಮಯದೊಂದಿಗೆ ಬಹ್ರೇನ್ ಮತ್ತು ಚೀನಾವನ್ನು ಹಿಂದಿಕ್ಕಿ, ಮಹಿಳೆಯರ 4x400 ಮೀಟರ್ ರಿಲೇ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.